ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 166 ಸಂಚಿಕೆ- 166 | PAGE-8 ಪುಟ-8 | ಮಂಗಳವಾರ 12.08.2025 | RS.2/- ಬೆಲೆ 2/-

# ಸಂಪುಟದಿಂದ ಸಚಿವ ರಾಜಣ್ಣ ವಜಾ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.11:ಸಹಕಾರಸಚಿವ ಕೆ.ಎನ್.ರಾಜಣ್ಣಅವರನ್ನುಸಚಿವ ಸಂಪುಟದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಜಾ ಮಾಡಿದ್ದಾರೆ.

ಈ ಮೊದಲು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗಿತ್ತು. ಇದರ ಬೆನ್ನಲ್ಲೇ ಸಂಪುಟದಿಂದಲೇ ವಜಾ ಮಾಡಿರುವ ಆದೇಶ ಹೊರಬಿದ್ದಿದೆ.

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ , ಸಚಿವ ರಾಜಣ್ಣ ಅವರನ್ನು ಸಂಪುಟದಿಂದ ತಕ್ಷಣದಿಂದಲೇ ವಜಾ ಮಾಡಲಾಗಿದೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ರಾಜಣ್ಣ ಅವರ ರಾಜೀನಾಮೆ ಪಡೆಯದೆ ಸಂಪುಟದಿಂದಲೇ ವಜಾ ಮಾಡುವಂತೆ ಹೈಕಮಾಂಡ್ ಸೂಚನೆ ನೀಡಿತ್ತು.

ಈ ಹಿನ್ನೆಲೆಯಲ್ಲಿ ತಮ್ಮ ಆಪ್ತ ಸಚಿವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಜಾ ಮಾಡಿದ್ದಾರೆ. ಈ ಸಂಬಂಧ ರಾಜಭವನದಿಂದ ಅಧಿಕೃತ ಮಾಹಿತಿ ಹೊರಬಿದ್ದಿದೆ.

ವಜಾಗೊಳಿಸುವ ಮುಜುಗರವನ್ನು ತಪ್ಪಿಸಲು ರಾಜಣ್ಣ ಅವರು ತಮ್ಮ ಪುತ್ರ, ಪರಿಷತ್ ಸದಸ್ಯ ರಾಜೇಂದ್ರ ಮೂಲಕ ಸಿಎಂಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದರು.



ಆದರೆ ಹೈಕಮಾಂಡ್ ಖಡಕ್ ಸೂಚನೆಯ ಹಿನ್ನೆಲೆಯಲ್ಲಿ ಸಿಎಂ ರಾಜೀನಾಮೆ ಪತ್ರವನ್ನು ಅಂಗೀಕರಿಸದೇ ಸಂಪುಟದಿಂದಲೇ ವಜಾಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು.

ಸಿಎಂ ಶಿಫಾರಸಿನಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ರಾಜಣ್ಣ ಅವರನ್ನು ವಜಾಗೊಳಿಸುವ ಗೆಜೆಟ್ ಅಧಿಸೂಚನೆಗೆ ಸಹಿ ಹಾಕಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ರಾಜೀನಾಮೆ ಪ್ರಸಂಗಗಳು ನಡೆದಿದ್ದವು. ಆದರೆ ಮಂತ್ರಿ ಸ್ಥಾನದಿಂದ ವಾಜಾ ಮಾಡಿದ ಘಟನೆಗಳು ನಡೆದಿರಲಿಲ್ಲ. ಚಳಿಗಾಲದ ಅಧಿವೇಶನ ಆರಂಭವಾದ ಮೊದಲ ದಿನವೇ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಲಾಗಿದೆ.

ಆರಂಭದಲ್ಲಿ ಸೆಪ್ಟೆಂಬರ್ ಕ್ರಾಂತಿಯ ಹೇಳಿಕೆ ನೀಡಿ ರಾಜಣ್ಣ ಸಂಚಲನ ಮೂಡಿಸಿದ್ದರು. ರಾಹುಲ್ ಗಾಂಧಿ ಮತಗಳ್ಳತನ ಆರೋಪ ಮಾಡಿದ ನಂತರ ರಾಜಣ್ಣ ನಮ್ಮ ಅವಧಿಯಲ್ಲಿ ಮತಪಟ್ಟಿ ಸಿದ್ಧವಾಗಿತ್ತು ಎಂದು ಹೇಳಿದ್ದರು.

ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಆಗ ಎಲ್ಲರು ಕಣ್ಣುಮುಚ್ಚಿ ಕುಳಿತಿದ್ದರೇ ಎಂದು ರಾಜಣ್ಣ ಪ್ರಶ್ನಿಸಿದ್ದರು. ರಾಜಣ್ಣ ಅವರ ಈ ಹೇಳಿಕೆ ಕಾಂಗ್ರೆಸ್‌ಗೆ ಮುಜುಗರ ತಂದಿತ್ತು. ಈ ಹೇಳಿಕೆಯ ನಂತರ ಹೈಕಮಾಂಡ್ ರಾಜಣ್ಣಗೆ ರಾಜೀನಾಮೆ ಸಲ್ಲಿಸಲು ಸೂಚನೆ ನೀಡಿತ್ತು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು ಸಿಎಂಗೆ ಕರೆ ಮಾಡಿ ರಾಜೀನಾಮೆ ಪಡೆಯುವಂತೆ ಸೂಚನೆ ನೀಡಿದ ಬೆನ್ನಲ್ಲೇ ಈ ಮಹತ್ವದ ಬೆಳವಣಿಗೆ ನಡೆದಿದೆ.

ಮತಕಳ್ಳತನ ವಿಷಯದಲ್ಲಿ ರಾಹುಲ್ ಆರೋಪಕ್ಕೆ ವ್ಯತಿರಿಕ್ತ ಹೇಳಿಕೆ

ಮತಗಳ್ಳತನ ಎಂದು ನಾವು ಹೇಳುತಿದ್ದೇವೆ. ಇದು

(2ನೇ ಪುಟ ನೋಡಿ)

## ಮಾಜಿ ಸಚಿವ ಅರವಿಂದ ಲಿಂಬಾವಳಿಗೆ ಮಾತೃ ವಿಯೋಗ

ಮಲ್ಲಮ್ಮ ನುಡಿ ವಾರ್ತೆ



ಬಾಗಲಕೋಟೆ,ಆ.11- ರಾಜ್ಯದ ಮಾಜಿ ಸಚಿವ, ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿ ಅವರ ತಾಯಿ ಭೀಮಾಬಾಯಿ ವೆಂಕಟರಾವ ಲಿಂಬಾವಳಿ(84) ಬಾಗಲಕೋಟೆಯಲ್ಲಿ ಸೋಮವಾರ ಬೆಳಿಗ್ಗೆ ನಿಧನ ಹೊಂದಿದರು.

ಮೃತರಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ, ಅಶೋಕ ಲಿಂಬಾವಳಿ, ರಾಜು ಲಿಂಬಾವಳಿ ಸೇರಿ 5 ಜನ ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಭೀಮಾಬಾಯಿ ಲಿಂಬಾವಳಿ ಅವರ ನಿಧನಕ್ಕೆ ಭೋವಿ ಗುರುಪೀಠದ ಪೂಜ್ಯ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹಾಗೂ ವಿವಿಧ ಪಕ್ಷಗಳ ಧುರೀಣರು, ಗಣ್ಯರು, ಭೋವಿ

## ಮಲ್ಲಣ್ಣ ದೇವಸ್ಥಾನ: 14ರಿಂದ ಯಜ್ಞ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಆ. 11 :- ಶ್ರಾವಣ ನಿಮಿತ್ತ ಭಾಲ್ಕಿ ತಾಲ್ಲೂಕಿನ ಖಾನಾಪುರದ ಮಲ್ಲಣ್ಣ ದೇವಸ್ಥಾನದಲ್ಲಿ ಆಗಸ್ಟ್ 14 ರಿಂದ 20 ರ ವರೆಗೆ ರುದ್ರ ಸ್ವಹಕಾರ ಯಜ್ಞ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಪ್ರತಿ ದಿನ ಬೆಳಿಗ್ಗೆ 4ಕ್ಕೆ ಮಲ್ಲಣ್ಣ ದೇವರಿಗೆ ಕಾಕಡ ಆರತಿ, ಬೆಳಿಗ್ಗೆ 5ಕ್ಕೆ ಸತತ ರುದ್ರಾಭಿಷೇಕ, ಮಧ್ಯಾಹ್ನ 12 ಹಾಗೂ ರಾತ್ರಿ 8ಕ್ಕೆ ನೈವೇದ್ಯ ಮಂಗಳಾರತಿ ನಡೆಯಲಿದೆ.

ಏಳೂ ದಿನ ಬೆಳಿಗ್ಗೆ 9 ರಿಂದ 11.30 ರ ವರೆಗೆ ಘೃತಮಾರಿ(ಗುರತ ಮಲ್ಲಮ್ಮ) ದೇವಿಗೆ ತುಪ್ಪದ ರುದ್ರಾಭಿಷೇಕ ಹಾಗೂ ಮೂಳಲಿಂಗ(ಜ್ಯೋತಿಲಿರ್ಂಗ)ಕ್ಕೆ ಕ್ಷೀರ ರುದ್ರಾಭಿಷೇಕ ಜರುಗಲಿದೆ.

ಆಗಸ್ಟ್ 21 ರಂದು ಬೆಳಿಗ್ಗೆ 9ಕ್ಕೆ ರುದ್ರ ಸ್ವಹಕಾರ ಯಜ್ಞ, ಮಧ್ಯಾಹ್ನ 3.10ಕ್ಕೆ ಯಜ್ಞ ಪೂರ್ಣಾಹುತಿ, ಸಂಜೆ 4ಕ್ಕೆ ತೀರ್ಥ ಮಹಾ ಪ್ರಸಾದ, ರಾತ್ರಿ 9ಕ್ಕೆ ಭಜನೆ ನಡೆಯಲಿದೆ.

ವೇದ ಪಂಡಿತರಿಂದ ಸತತ ಧಾರ ರುದ್ರಾಭಿಷೇಕ ಪೂಜೆ ಜರುಗಲಿದೆ. ಭಕ್ತರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಕಾಶ ಮೇತ್ರೆ ಹಾಗೂ ಕಾರ್ಯನಿರ್ವಹಣಾಧಿಕಾರಿ ಅನಂತರಾವ್ ಕುಲಕರ್ಣಿ ಮನವಿ ಮಾಡಿದ್ದಾರೆ.

## ಗೃಹ ಸಚಿವ ಜಿ.ಪರಮೇಶ್ವರ ರವರಿಗೆ ಶಿಕ್ಷಣ ಸಂಸ್ಥೆಗಳ ಬೀದರ ನಿಯೋಗ ಭೇಟಿ

ಮಲ್ಲಮ್ಮ ನುಡಿ ವಾರ್ತೆ



ಭಾಲ್ಕಿ: ಕರ್ನಾಟಕ ರಾಜ್ಯ ಗೃಹ ಸಚಿವರಾದ ಜಿ.ಪರಮೇಶ್ವರ ರವರಿಗೆ ಬೀದರಿನ ಅನುದಾನಿತ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರುಗಳ ನಿಯೋಗ ಭೇಟಿ ನೀಡಿ, ಅನುದಾನಿತ ಶಾಲಾ ಕಾಲೇಜುಗಳಲ್ಲಿ ತೆರವಾದ ಶಿಕ್ಷಕರ ಹುದ್ದೆಗಳ ಭರ್ತಿಗಾಗಿ ಆಗ್ರಹಿಸಿದರು.

ಬೀದರಿನ ಅನುದಾನಿತ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರುಗಳ ನಿಯೋಗ, ಬೆಂಗಳೂರಿನ ಗೃಹ ಸಚಿವ ಜಿ.ಪರಮೇಶ್ವರ ರವರ ನಿವಾಸ ಕಚೇರಿಗೆ ಭೇಟಿನೀಡಿ, ಸುಮಾರು ವರ್ಷಗಳಿಂದ ನಿವೃತ್ತಿ, ನಿಧನ ಗಳಿಂದ ತೆರವಾದ ಶಿಕ್ಷಕರ ಹುದ್ದೆಗಳನ್ನು ತಕ್ಷಣವೇ ಭರ್ತಿಮಾಡಬೇಕು. ಈ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ಬಡ ಮಕ್ಕಳ ಶೈಕ್ಷಣಿಕ ವ್ಯವಸ್ಥೆ ಸುಧಾರಿಸಬೇಕು ಎಂದು ತಿಳಿಸಿದರು.

ಅಲ್ಲದೇ ಶಿಕ್ಷಕರ ಕೊರತೆಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶಗಳಲ್ಲಿ ತುಂಬಾ ವ್ಯತ್ಯಾಸ ವಾಗುತ್ತಿದೆ. ಕಾರಣ ಆದಷ್ಟುಬೇಗ ಕಲ್ಯಾಣ ಕರ್ನಾಟಕ ಭಾಗದ ಅನುದಾನಿತ ಶಿಕ್ಷಣ ಸಂಸ್ಥೆಗಳ ಶಾಲಾ ಕಾಲೇಜುಗಳಲ್ಲಿಯ ಶಿಕ್ಷಕರ ಕೊರತೆ ನೀಗಿಸಬೇಕು ಎಂದು ಒತ್ತಾಯಿಸಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಗೃಹ ಸಚಿವ ಜಿ.ಪರಮೇಶ್ವರ ರವರು, ಅಧಿವೇಶನದಲ್ಲಿ ಈ ವಿಷಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಸೂಕ್ತ ಪರಿಹಾರ ಒದಗಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ನಿಯೋಗದಲ್ಲಿ ಕರ್ನಾಟಕ ಲೇಬರ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ ಕ್ರಾಂತಿ ಕಲವಾಡಿಕರ, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಪುಂಡಲಿಕರಾವ, ಅನುದಾನಿತ ಶಿಕ್ಷಣ ಸಂಸ್ಥೆಯ ಮುಖಂಡರುಗಳಾದ ಎಲ್.ಜಿ.ಗುಪ್ತಾ, ನಂದಾದೀಪ ಬೋರೊಳೆ, ದಶರಥ ದೊಡ್ಡಿ, ಡಾ। ಕಾಶಿನಾಥ ಚಲವಾ, ತಿಪ್ಪಣ್ಣಾ ಶಿವಪುರೆ, ಡಿ.ವಿ.ಗುರು, ಬಾಬು ಟೈಗರ, ಮಹಾತ್ಮಾಗಾಂಧಿ ಪ್ರೌಢಶಾಲೆ ಕಲವಾಡಿಯ ಮುಖ್ಯ ಶಿಕ್ಷಕ ಕಿರಣಕುಮಾರ ಭಾಟಸಾಂಗವಿ ಮತ್ತಿತರರು ಇದ್ದರು.

## ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹರ್ ಘರ ತಿರಂಗಾ ಕಾರ್ಯಕ್ರಮ :ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಮಲ್ಲಮ್ಮ ನುಡಿ ವಾರ್ತೆ

ಬೀದರ,ಆಗಸ್ಟ್.11-ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬೀದರ ಜಿಲ್ಲೆಯಾದ್ಯಂತ ಹರ್ ಘರ ತಿರಂಗಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2025-26ನೇ ಸಾಲಿನ ಹರ್ ಘರ ತಿರಂಗಾ ಅಂಗವಾಗಿ ಮಾನ್ಯ ಕಾರ್ಯದರ್ಶಿ ಸಂಸ್ಕೃತಿ ಮಂತ್ರಾಲಯ ಭಾರತ ಸರಕಾರರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮತ್ತು ರಾಷ್ಟ್ರೀಯ ಅನುಷ್ಠಾನ ಸಮಿತಿ ಅನುಮೋದಿಸಿರುವಂತೆ ಕಾರ್ಯಕ್ರಮ ಯಶಸ್ವಿಯಾಗಿ ಹಮ್ಮಿಕೊಳ್ಳಲು ಭಾರತ



ಸರ್ಕಾರವು ನಿರ್ಧರಿಸಿರುತ್ತದೆ. ಅದರಂತೆ ಜಿಲ್ಲೆಯಾದ್ಯಂತ ಅಭಿಯಾನ ದ್ವಿತೀಯ ಹಂತವು ದಿನಾಂಕ: 12-08-2025 ರವರೆಗೆ ನಡೆಯಲಿದ್ದು, ಈ ಹಂತದಲ್ಲಿ ತಿರಂಗಾ ಮಹೋತ್ಸವ ಎಂಬ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅದರಲ್ಲಿ ತಿರಂಗಾ ಮೇಳೆ ಮತ್ತು ತಿರಂಗಾ ಸಂಗೀತೋತ್ಸವ ಇರುತ್ತವೆ. ತಿರಂಗಾ ಮೇಳೆದಲ್ಲಿ ಹಾರಗಳು, ದ್ವಿಪದಿಗಳು, ಆಹಾರಗಳು, ವಸ್ತುಗಳು, ಕರಕುಶಲ ವಸ್ತುಗಳು ಇತ್ಯಾದಿ ಸ್ಥಳೀಯ ಉತ್ಪನ್ನ ಮಾರಾಟ ತಿರಂಗಾದಿಂದ ಮಾಡುವುದು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತಿರಂಗಾ ಕುರಿತಾದ ಸೆಲ್ಫಿಗಳನ್ನು ಅಪ್ಲೋಡ್ ಮಾಡುವುದು. ತಿರಂಗಾ ಬೈಕ್, ಸೈಕಲ್ ಈ ರ್ಯಾಲಿಗಳು ಹಾಗೂ ಜನಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.. ತಿರಂಗಾ ಬಟ್ಟೆಗಳನ್ನು ಧರಿಸಿ ಮಾನವ ಸರಪಳಿಗಳನ್ನು ನಿರ್ಮಿಸುವುದು ಮತ್ತು ತಿರಂಗಾ

(2ನೇ ಪುಟ ನೋಡಿ)

## ಒಳಮೀಸಲಾತಿ ನಿರ್ಧಾರವಾಗುವವರೆಗೂ ಹುದ್ದೆ ಭರ್ತಿ ಇಲ್ಲ: ಡಾ. ಶರಣಪ್ರಕಾಶ್ ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಒಳಮೀಸಲಾತಿ (Internal Reservation) ಸಂಬಂಧ ರಾಜ್ಯ ಸರ್ಕಾರ ಸ್ಪಷ್ಟವಾದ ತೀರ್ಮಾನ ತೆಗೆದುಕೊಂಡ ಮೇಲೆ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ (Sharan Prakash Patil) ವಿಧಾನ ಪರಿಷತ್‌ನಲ್ಲಿ ಆಶ್ವಾಸನೆ



ನೀಡಿದರು.

ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಮಂಜೇಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್. ಎನ್.ನಾಗಮೋಹನದಾಸ್ ಅವರು

(2ನೇ ಪುಟ ನೋಡಿ)

## ಪ್ರತಿಭಟನಾ ರ್‍ಯಾಲಿ ರಾಹುಲ್, ಪ್ರಿಯಾಂಕಾ ಗಾಂಧಿ ಸೇರಿ 30 ಸಂಸದರು ಪೊಲೀಸರ ವಶಕ್ಕೆ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಅ.11: ಮತಗಳ್ಳತನ ಆರೋಪ ಮಾಡಿ ಚುನಾವಣಾ ಆಯೋಗಕ್ಕೆ ಪ್ರತಿಭಟನಾ ರ್‍ಯಾಲಿ ಹೊರಟಿದ್ದ ರಾಹುಲ್ ಗಾಂಧಿ , ಪ್ರಿಯಾಂಕಾ ಗಾಂಧಿ ಸೇರಿದಂತೆ 30 ಸಂಸದರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಚುನಾವಣಾ ಆಯೋಗದ ತಟಸ್ಥತೆಯ ವಿರುದ್ಧ ಸಾರ್ವಜನಿಕ ಪ್ರತಿಭಟನೆ ನಡೆಸಲಾಯಿತು. ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿಯಾ ಒಕ್ಕೂಟದ ಸಂಸದರು, ಸಂಸತ್ ಭವನದಿಂದ ಚುನಾವಣಾ ಆಯೋಗಕ್ಕೆ ಪ್ರತಿಭಟನಾ ರ್‍ಯಾಲಿ ನಡೆಸಲು ಮುಂದಾಗಿದ್ದರು. ದೆಹಲಿ ಪೊಲೀಸರು ಎಲ್ಲರನ್ನೂ ವಶಕ್ಕೆ



ಪಡೆದಿದ್ದಾರೆ.

ಸಂಸತ್ತಿನ ಕಟ್ಟಡದ ಹೊರಗೆ ರಾಜಕಾರಣಿಗಳು ಮತ್ತು ಪಕ್ಷದ ಕಾರ್ಯಕರ್ತರು ಜಮಾಯಿಸಿದ್ದರು. ಹಲವರು ರಸ್ತೆಗಳಲ್ಲಿ ಕುಳಿತಿದ್ದರು. ಧ್ವಜಗಳು ಮತ್ತು ಬ್ಯಾನರ್‌ಗಳನ್ನು ಹಿಡಿದು ಘೋಷಣೆ ಕೂಗುತ್ತಾ ಬ್ಯಾರಿಕೇಡ್ ತಳ್ಳಲು ಮುಂದಾದರು.

ಸಂಸತ್ ಭವನದ ಹೊರಗೆ ಭಾರಿ ಭದ್ರತೆ ಕಲ್ಪಿಸಲಾಗಿತ್ತು. ಪ್ರತಿಭಟನೆಗೆ ಅನುಮತಿ ಪಡೆ-ಯದ ಹಿನ್ನೆಲೆ ಎಲ್ಲರನ್ನೂ ವಶಕ್ಕೆ ಪಡೆಯಲಾಯಿತು. ನಾಲ್ಕೈದು ಬಸ್‌ಗಳನ್ನು ನಿಯೋಜಿಸಿ, ಬ್ಯಾರಿಕೇಡ್ ಹಾಕಿ ಪೊಲೀಸರು ತಡೆಹಾಕಿದ್ದರು.

### ಮಾಜಿ ಸಚಿವ ದಿ. ಬಸವರಾಜ ಪಾಟೀಲರ 9ನೇ ಪುಣ್ಯಸ್ಮರಣೋತ್ಸವ

## ಹಣ, ಅಧಿಕಾರ ಶಾಶ್ವತವಲ್ಲ : ಹಾರಕೂಡ ಶ್ರೀ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:-ಅಧಿಕಾರ, ಹಣ ಯಾವತ್ತೂ ಯಾರಿಗೂ ಶಾಶ್ವತವಲ್ಲ, ಅದು ಹರಿಯುವ ನೀರಿನಂತೆ ಇಂದು ಇಲ್ಲಿದ್ದರೇ ನಾಳೆ ಇನ್ನೆಲ್ಲೋ ಇರುತ್ತದೆ ಎಂದು ಹಾರಕೂಡದ ಪೂಜ್ಯ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಪಟ್ಟಣದಲ್ಲಿ ಭಾನುವಾರ ನಡೆದ ದಿ.ಬಸವರಾಜ ಪಾಟೀಲರ 9ನೆಯ ಸ್ಮರಣೋತ್ಸವದಲ್ಲಿ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ತಕ್ಕಡಿ ಒಮ್ಮೆ ಬಲಕ್ಕೆ, ಇನ್ನೊಮ್ಮೆ ಎಡಕ್ಕೆ ವಾಲುತ್ತದೆ. ಹೇಗೆ ಒಮ್ಮೆ ಬಿದ್ದ ಕನಸು ಮತ್ತೊಮ್ಮೆ ಬೀಳುವುದಿಲ್ಲವೋ ಅಧಿಕಾರವೂ ಅಷ್ಟೆ ಹಿಂದಿ ಬಿದ್ದವರು ಮುಂದೆ ಎದ್ದರೂ ಅಚ್ಚರಿಯಿಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಭವಿಷ್ಯದ ದಿನಗಳಲ್ಲಿ ರಾಜಶೇಖರ ಪಾಟೀಲ ಅವರಿಗೆ ಒಳ್ಳೆ ದಿನಗಳು ಬರಲಿರುವ ಕುರಿತು ಹಾರಕೂಡ ಶ್ರೀಗಳು ಭವಿಷ್ಯ ನುಡಿದರು. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡುತ್ತ ದಿ.ಬಸವರಾಜ ಪಾಟೀಲರಲ್ಲಿದ್ದ ಎಲ್ಲ ಗುಣಗಳು ಮಾಜಿ ಸಚಿವ ರಾಜಶೇಖರ ಪಾಟೀಲ ಅವರಲ್ಲಿವೆ ಭವಿಷ್ಯದಲ್ಲಿ ಇನ್ನೂ



ಉನ್ನತ ಸ್ಥಾನಗಳು ಅವರನ್ನರಸಿ ಬರಲಿವೆ ಎಂದರು. ಖೇರ್ಡಾದ ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿ ಭವಿಷ್ಯದಲ್ಲಿ ಕಸಿದುಕೊಂಡವರ ಕೈಗೆ ಅಧಿಕಾರ ಹೋಗದೇ ಶಾಶ್ವತವಾಗಿ ಹಿಂದೆ ಪರಾಭವಗೊಂಡವರ ಕೈಸೇರುವುದು ನಿಶ್ಚಿತ ಎಂದರು. ಹೀರೇಮಠ ಪೀಠಾಧಿಪತಿ ವೀರ-ರೇಣುಕ ಗಂಗಾಧರ ಸ್ವಾಮೀಜಿ ದೇವರು ರಾಜಶೇಖರ ಪಾಟೀಲ ಅವರಿಗೆ ಅಧಿಕಾರಿ, ಆರೋಗ್ಯ, ಗೌರವಾದರಗಳು ಎಂದರು. ಬಸವತೀರ್ಥ ಮಠದ ಡಾ.ಸಿದ್ಧಲಿಂಗ ಸ್ವಾಮೀಜಿ, ಹಫೀಜ ಫಯಾಜುದ್ದೀನ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ರಾಜಶೇಖರ ಪಾಟೀಲ ಮಾತನಾಡಿ ತಮ್ಮ ರಾಜಕೀಯದಲ್ಲಿ ಎದುರಾಳಿಗಳು ತಾವು ಮಾಡಿದ್ದೇ ಹೆದ್ದಾರಿ ಎಂದು ಭಾವಿಸುತ್ತಿದ್ದಾರೆ ಆದರೆ ಶ್ರೀಗಳ ಸಲಹೆ ಮೇರೆಗೆ ಮೌನಕ್ಕೆ ಶರಣಾಗಿದ್ದೇನೆ ಎಂದರು. ವಿಧಾನ ಪರಿಷತ್ ಸದಸ್ಯೆ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ವೀರಭದ್ರೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರಣ್ಣ ಪಾಟೀಲ, ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ ತಾಳಂಪಳ್ಳಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ, ಕೆ.ಎಂ.ಎಫ್ ನಿರ್ದೇಶಕ ರೇವಣಸಿದ್ದಪ್ಪ ಪಾಟೀಲ ಮೊದಲಾದವರಿದ್ದರು.

ಕ.ಪ.ಸೌ.ಸ.ನಿ./ಸಾ.ಸ/ಸಂಖ್ಯೆ-25/2024-2025

### ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ

#9-1-65, ಮೊದಲನೆ ಮಹಡಿ, ಮೋಹನ ಮಾರ್ಕೆಟ್ ಕಾಂಪ್ಲೆಕ್ಸ್, ಬೀದರ-585402.

ನೋಂದಣಿ ಸಂಖ್ಯೆ : 17-2001-02 ದೂರವಾಣಿ : 08482-220559

### 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್

ದಿನಾಂಕ 05-09-2025ರ ಶುಕ್ರವಾರ

ಸನ್ಮಾನ್ಯ ಸಹಕಾರಿ ಬಂಧು ಶ್ರೀ/ಶ್ರೀಮತಿ..........

ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ (ನಿ)., ಬೀದರನ 25ನೇ ಸಾಮಾನ್ಯ ಸಭೆಯನ್ನು ದಿನಾಂಕ.05-09-2025ರಂದು ಶುಕ್ರವಾರ ಮುಂಜಾನೆ 11:00 ಗಂಟೆಗೆ ಶಾರದಾ ರೂಡಶೆಟ್ ತರಬೇತಿ ಸಂಸ್ಥೆ ಲಾಹೋಟಿ ಶೊರೂಮ್ ಪಕ್ಕದಲ್ಲಿ ಪ್ರತಾಪ ನಗರ ನೌಬಾದ ಬೀದರನಲ್ಲಿ ಕರೆಯಲಾಗಿದೆ. ದಯವಿಟ್ಟು ತಾವು ತಪ್ಪದೆ ಈ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ವಿಷಯಗಳು:
1) ಸಭೆ ನೋಟಿಸನ್ನು ಓದುವುದು ಮತ್ತು ದಾಖಲಿಸುವುದು.
2) 24ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವುದು.
3) 2024-2025ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಓದಿ ಧೃಡಿಕರಿಸುವುದು.
4) 2024-2025ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನೂಪಾಲನಾ ವರದಿಯನ್ನು ಅನೂಮೋದಿಸುವುದು.
5) 2024-2025ನೇ ಸಾಲಿನಲ್ಲಿ ಅಂದಾಜು ಆಯ್ಯ-ವ್ಯಯಕ್ಕಿಂತ ಹೆಚ್ಚಿಗೆ ಆದ ಖರ್ಚುಗಳಿಗೆ ಅನೂಮೋದನೆ ಪಡೆಯುವುದು.
6) 2025-2026ನೇ ಸಾಲಿಗಾಗಿ ಸನ್ನದು ಲೆಕ್ಕಪರಿಶೋಧಕರ ಆಯ್ಕೆ ಕುರಿತು.
7) 2025-2026, 2026-2027, 2027-2028ನೇ ಸಾಲಿನ ಅಂದಾಜು ಆಯ್ಯ-ವ್ಯಯ ಮಂಜೂರು ಮಾಡುವುದು.
8) 2025-2026ನೇ ಸಾಲಿನ ಕ್ರೀಯಾ ಯೋಜನೆ ಅನುಮೋದನೆ ಪಡೆಯುವುದು.
9) 2024-2025ನೇ ಸಾಲಿನಲ್ಲಿ ಸೇರಿಕೊಂಡ ಹಾಗೂ ಹಿಂಪಡೆದ ಸದಸ್ಯರ ಅನುಮೋದನೆ ಪಡೆಯುವುದು.
10) ಸದಸ್ಯರಿಗೆ 2024-2025ನೇ ಸಾಲಿನ ಲಾಭಾಂಶ ಘೋಷಣೆ.
11) ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಅಭಿನಂದನೆ ಹಾಗೂ ಉತ್ತಮ ಗ್ರಾಹಕರಿಗೆ ಅಭಿನಂದನೆ ಸಲ್ಲಿಸುವ ಕುರಿತು.
12) ಸಹಕಾರಿಯ ರಜತ ಮಹೋತ್ಸವದ ಕಾರ್ಯಕ್ರಮಗಳ ಕುರಿತು.
13) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

ಅಧ್ಯಕ್ಷರ ಆದೇಶದ ಮೇರೆಗೆ

ದಿನಾಂಕ : 15/08/2025
ಸ್ಥಳ :ಬೀದರ

ಶಿವರಾಜ ಹೂಗಾರ
ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಸೂಚನೆಗಳು:
1.) ಸದಸ್ಯರು ಸಹಕಾರಿಯಲ್ಲಿ ಕನಿಷ್ಠ ವ್ಯವಹಾರ ಮಾಡದೆ ಇದ್ದಲ್ಲಿ ಸಹಕಾರಿಯ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಅನರ್ಹರಾಗಿರುತ್ತಾರೆ.
2.) ಪ್ರತಿ ವರ್ಷ ಸಾಮಾನ್ಯ ಸಭೆ ಮುಂಚಿತ ಅರ್ಹ ಸದಸ್ಯರ ಪಟ್ಟಿಯನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.
3.) ಸದಸ್ಯರಿಗೆ ನೀಡಿರುವ ಲಾಭಾಂಶವನ್ನು ಎರಡು ವರ್ಷದ ಒಳಗಾಗಿ ಪಡೆಯದಿದ್ದರೆ ಸಹಕಾರಿಯ ಕಾಯ್ದಿಟ ನಿಧಿಗೆ ವರ್ಗಾಯಿಸಲಾಗುವುದು.
4.) ಸದಸ್ಯರೆಲ್ಲರು ತಮ್ಮ ಗುರುತಿನ ಚೀಟಿ ಸಹಕಾರಿಯ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆದುಕೊಳ್ಳತಕ್ಕದ್ದು.

ವಿಶೇಷ ಸೂಚನೆ:
1) ಸಾಮಾನ್ಯ ಸಭೆಯಲ್ಲಿ ಯಾವುದೇ ವಿಷಯ ಚರ್ಚಿಸಲು ಅಪೇಕ್ಷಿಸುವ ಸಹಕಾರಿ ಸದಸ್ಯರು ದಿನಾಂಕ 31/08/2025ರ ಒಳಗಾಗಿ ಲಿಖಿತ ರೂಪದಲ್ಲಿ ಸಹಕಾರಿಗೆ ತಲುಪಿಸತಕ್ಕದ್ದು.
2) ಹತ್ತನೆ, ಪಿ.ಯು.ಸಿ. 80% ಮತ್ತು ಪದವಿ ಮತ್ತು ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಶೇಕಡ 70% ಕ್ಕಿಂತ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಅಭಿನಂದಿಸಲಾಗುವುದು. ತಮ್ಮ ಮಕ್ಕಳಿದ್ದಲ್ಲಿ ಕೂಡಲೆ ಸಹಕಾರಿಗೆ ದಾಖಲೆಗಳನ್ನು ಸಲ್ಲಿಸಲು ಕೋರಿದೆ.

## ಒಂದನೆ ಪುಟದಿಂದ...

# ಸಚಿವ ರಾಜಣ್ಣ ವಜಾ

ನಡೆದಿರೋದು ನಿಜ. ಆದರೆ ನಾವು ಮೊದಲು ನೋಡಿಕೊಳ್ಳದೆ ಈಗ ಹೇಳುತ್ತಿರುವುದು ನಮಗೆ ನಾಚಿಕೆ ಆಗಬೇಕು. ನಮ್ಮದೇ ಸರ್ಕಾರ ಇದ್ದಾಗ ವೋಟರ್ ಲಿಸ್ಟ್ ಮಾಡಿದ್ದು, ಆಗೇನು ಕಣ್ಮುಚ್ಚಿ ಕುಳಿತಿದ್ರಾ ಎಂದು ಪ್ರಶ್ನಿಸುವ ಮೂಲಕ ರಾಜಣ್ಣ ತಮ್ಮದೇ ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದ್ದರು.

ವೋಟರ್ ಲಿಸ್ಟ್ ಎಲ್ಲಾ ಯಾವ ಕಾಲದಲ್ಲಿ ಮಾಡಿದ್ದು? ನಮ್ಮದೇ ಸರ್ಕಾರ ಇರುವಾಗ ಮಾಡಿರೋದು ಅಲ್ವಾ? ಆವಾಗ ಎಲ್ಲಾ ಕಣ್ಮುಚ್ಚಿ ಕುಳಿತಿದ್ರಾ? ಎಂದು ತಮ್ಮ ಸರ್ಕಾರವನ್ನೇ ಪ್ರಶ್ನಿಸಿದ್ದರು. ಅಲ್ಲದೇ ಈ ಅಕ್ರಮಗಳು ನಡೆದಿರೋ ಸತ್ಯ. ಇದರಲ್ಲಿ ಯಾವುದೇ ಸುಳ್ಳು ಏನಿಲ್ಲ. ಅಕ್ರಮಗಳು ನಮ್ಮ ಕಣ್ಮುಂದೆನೆ ನಡೆದಿದ್ದವಲ್ಲಾ ನಮಗೆ ಅವಮಾನ ಆಗಬೇಕು. ನಾವು ನೋಡಿಕೊಳ್ಳಲಿಲ್ಲವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

### ಹರ್ ಘರ ತಿರಂಗಾ ಕಾರ್ಯಕ್ರಮ :ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಧ್ವಜಗಳ ಮಾರಾಟ ಮತ್ತು ವಿತರಣೆ ಮಾಡುವುದು. ತಿರಂಗಾ ಸಂಗೀತೋತ್ಸವದಲ್ಲಿ ದೇಶಭಕ್ತಿ ಕುರಿತಾದ ಹಾಗೂ ಬಾವುಟದ ಘನತೆಯನ್ನು ಬಿಂಬಿಸುವ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಭಿಯಾನದ ತೃತೀಯ ಹಂತವು ದಿನಾಂಕ 13-08-2025 ರಿಂದ 15-08-2025 ರವರಿಗೆ ನಡೆಯಲಿದೆ, ಈ ಹಂತದಲ್ಲಿ ಮನೆ ಮನೆಯಲ್ಲಿ, ಕಛೇರಿಗಳಲ್ಲಿ ಧ್ವಜಾರೋಹಣವನ್ನು ನೆರವೇರಿಸುವುದು ಹಾಗೂ ವಾಹನಗಳಲ್ಲಿ ತ್ರಿವರ್ಣ ಧ್ವಜವನ್ನು ಪ್ರದರ್ಶಿಸುವುದು. ಜಿಲ್ಲಾದ್ಯಂತ ನಡೆದ ಕಾರ್ಯಕ್ರಮಗಳ ವಿಡಿಯೋ ಮತ್ತು ಛಾಯಾಚಿತ್ರಗಳನ್ನು ತೆಗೆದು ಹಾಗೂ ತ್ರಿವರ್ಣ ಧ್ವಜದೊಂದಿಗೆ ಸೆಲ್ಫಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು www.harghartiranga.com ಜಾಲತಾಣದಲ್ಲಿ ಹಂಚಿಕೊಳ್ಳಲು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹುದ್ದೆ ಭರ್ತಿ ಇಲ್ಲ: ಡಾ. ಶರಣಪ್ರಕಾಶ್ ಪಾಟೀಲ್

ಒಳಮೀಸಲಾತಿ ಕಲ್ಪಿಸುವ ಸಂಬಂಧ ಸರ್ಕಾರಕ್ಕೆ ವರದಿಯನ್ನು ನೀಡಿದ್ದಾರೆ. ಈ ವರದಿಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದ್ದು, ಮುಂದಿನ ವಿಶೇಷ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದರು.

ಒಳಮೀಸಲಾತಿ ಕುರಿತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳುವವರೆಗೂ ಯಾವುದೇ ಇಲಾಖೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದಂತೆ ಮುಖ್ಯಮಂತ್ರಿಯವರು ಸೂಚನೆ ಕೊಟ್ಟಿದ್ದಾರೆ. ಅಲ್ಲಿಯವರೆಗೂ ನಾವು ಏನು ಮಾಡಲೂ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ವೈದ್ಯಕೀಯ ಕಾಲೇಜುಗಳಲ್ಲಿ (Medical College) ಒಟ್ಟು 21,860 ಹುದ್ದೆಗಳಿವೆ. ಇದರಲ್ಲಿ 9,413 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. 12,447 ಹುದ್ದೆಗಳು ಖಾಲಿ ಇವೆ ಎಂದು ಅಂಕಿ ಅಂಶಗಳ ವಿವರ ನೀಡಿದರು. ಹುದ್ದೆಗಳು ಖಾಲಿ ಇದ್ದರೂ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಇಲ್ಲವೇ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಯಾವುದೇ ರೀತಿಯ ಸಮಸ್ಯೆಯಾಗಿಲ್ಲ. ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಹೇಳಿದರು.

ಅಗತ್ಯವಿರುವ ಕಡೆ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ವೈದ್ಯಕೀಯ ಕಾಲೇಜುಗಳ ನಿರ್ದೇಶಕರಿಗೆ ಮತ್ತು ಸಂಬಂಧಪಟ್ಟ ಆಸ್ಪತ್ರೆಯ ಮುಖ್ಯಸ್ಥರಿಗೂ ನಿರ್ದೇಶನ ನೀಡಲಾಗಿದೆ. ಯಾದಗಿರಿ, ರಾಯಚೂರು, ಕಲಬುರಗಿ ಸೇರಿದಂತೆ ಮತ್ತಿತರ ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಸಿಬ್ಬಂದಿಗಳ ಕೊರತೆ ಇತ್ತು. ಈಗಾಗಲೇ ಅದನ್ನು ಭರ್ತಿ ಮಾಡಿದ್ದೇವೆ. ಯಾವುದೇ ಕಾಲೇಜು ಇಲ್ಲವೇ ಆಸ್ಪತ್ರೆಗಳಲ್ಲಿ ಸಮಸ್ಯೆ ಎದುರಾಗಿಲ್ಲ. ಹಾಗೊಂದು ವೇಳೆ ಸಮಸ್ಯೆ ಇರುವುದನ್ನು ನಮ್ಮ ಗಮನಕ್ಕೆ ತಂದರೆ ತಕ್ಷಣವೇ ಪರಿಹರಿಸುವುದಾಗಿ ಆಶ್ವಾಸನೆ ನೀಡಿದರು.

# ಆ.12 ರಂದು ಗ್ರಾಹಕರ ಸಂವಾದ ಸಭೆಗೆ ಸೂಚನೆ

ಯಾದಗಿರಿ : ಆಗಸ್ಟ್ 11,ಕಲಬುರಗಿ ವೃತ್ತದ ವ್ಯಾಪ್ತಿಯಲ್ಲಿಬರುವಯಾದಗಿರಿ ಮತ್ತು ಸುರಪುರ ವಿಭಾಗದ ಎಲ್ಲಾ ಇಹೆಚ್‌ಟಿ, ಹೆಚ್‌ಟಿ ಗ್ರಾಹಕರ ಸಂವಾದ ಸಭೆಯನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ಕಾರ್ಯ ಮತ್ತು ಪಾಲನಾ ವಿಭಾಗ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕಾರ್ಯನಿರ್ವಾಹಕ ಅಭಿಯಂತರರು(ವಿ)ರಾಘವೇಂದ್ರ ಅವರು ತಿಳಿಸಿದ್ದಾರೆ.

ಗ್ರಾಹಕ ಸಂವಾದ ಸಭೆ 2025ರ ಆಗಸ್ಟ್ 12 ರಂದು ಬೆಳಿಗ್ಗೆ 11 ಗಂಟೆಗೆ ಯಾದಗಿರಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗ ಸಭಾಂಗಣದಲ್ಲಿ ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತ ಅಧೀಕ್ಷಕ ಅಭಿಯಂತರರು (ವಿ) ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಅಂದು ಯಾದಗಿರಿ ಜಿಲ್ಲೆಯ ಎಲ್ಲಾ ಇಹೆಚ್‌ಟಿ, ಹೆಚ್.ಟಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು,ತಮ್ಮ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು, ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಮೂಲಕ ವಿನಂತಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಶಹಾಪುರದ ಬೆಟ್ಟದ ಶ್ರೀ ಮೌನೇಶ್ವರ ಜಾತ್ರಾಮಹೋತ್ಸವ ನಿಮಿತ್ಯ ಪಲ್ಲಕ್ಕಿ ಉತ್ಸವವು ನಗರದ ಹಳಪೇಟೆಯ ಶ್ರೀ ಕಾಳಿಕಾದೇವಿ ದೇವಸ್ಥಾನದ ಮೂಲಕ ವಿಶೇಷವಾಗಿ ಪುರವಂತರ ಸೇವೆಯ ಮೂಲಕ ಶ್ರದ್ಧಾಭಕ್ತಿಯಿಂದ ಆರಂಭಗೊಂಡಿತು. ವಿಶ್ವಕರ್ಮ ಸಮಾಜದ ಬಂಧುಗಳು ಸೇರಿದಂತೆ ವಿವಿಧ ಸಮಾಜದ ಭಕ್ತರು ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡರು.

# ಅನಾಥ ಶವ ಪತ್ತೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲೂಕಿನ ಇರ್ಕಲ್ಗಡ ಟು ವನಬಳ್ಳಾರಿ ರಸ್ತೆಯಲ್ಲಿ ಇಂದು ಮಧ್ಯಾಹ್ನ ಅನಾಥ ಶವ ಪತ್ತೆಯಾಗಿದೆ ಸುಮಾರು 24 ರಿಂದ 25 ವಯಸ್ಸಿನ ಗಂಡಸಿನ ಶವ ಪತ್ತೆಯಾಗಿದೆ ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ ಸ್ಥಳಕ್ಕೆ ಗ್ರಾಮೀಣ



ಪೊಲೀಸ್ ಠಾಣೆಯ ಪಿಎಸ್ಐ ವೀರೇಶ್ ಮತ್ತು ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರೈತ ಸಂಘದಿಂದ ಪ್ರತಿಭಟನೆ ತಾಂತ್ರಿಕ ಅಧಿಕಾರಿ ಕೃಷ್ಣಾ ಇವರಿಗೆ ವಜಾ ಮಾಡಿ

ಮಲ್ಲಮ್ಮ ನುಡಿ ವಾರ್ತೆ

ಔರಾದ:-ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೈನೆಯಿಂದ ತಾಂತ್ರಿಕ ಅಧಿಕಾರಿಗಳಾದ ಕೃಷ್ಣ ಇವರನ್ನು ತಕ್ಷಣ ಕೆಲಸದಿಂದ ವಜಾ ಮಾಡಬೇಕೆಂದು ಔರಾದ ಕೃಷಿ ಇಲಾಖೆಗೆ ರೈತ ಸಂಘ ಅಧ್ಯಕ್ಷರು ನೇತೃತ್ವದಲ್ಲಿ ಪ್ರತಿಭಟನೆ ಮಾಡಿ ಸಹಾಯಕ ಕೃಷಿ ನಿರ್ದೇಶಕರು ಧೂಳಪ್ಪ ಹೊಸಾಳೆ ಇವರಿಗೆ ಮನವಿ ಪತ್ರ ಸಲ್ಲಿಸಲಾಯಿತು.




ರೈತ ಮಲ್ಲಿಕಾರ್ಜುನ್ ಇವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ, ಹಲ್ಲೇ ಮಾಡಲು ಯತ್ನಿಸಿದ, ತಾಂತ್ರಿಕ ಅಧಿಕಾರಿ ಕೃಷ್ಣ ಇವರಿಗೆ ಕೂಡಲೇ ಕೆಲಸ ದಿಂದ ವಜಾ ಮಾಡಿ, ಇಲ್ಲದೆ ಇದ್ದರೆ 18ನೇ ತಾರೀಕು ತಹಸಿದ್ದಾರ ಕಚೇರಿಗೆ ಮುತ್ತಿಗೆ ಹಾಕಲಾಗುವುದು.
-ಜಿಲ್ಲಾ ಕಾರ್ಯಕ್ಷರು ಶ್ರೀಮಂತ ಬಿರಾದರ್

ದಿನಾಂಕ 5-8-2025 ರಂದು ಕೃಷಿ ಇಲಾಖೆ ಔರಾದ ಕಚೇರಿಗೆ ನಾರಾಯಣಪುರ ಗ್ರಾಮದ ರೈತ ಮಲ್ಲಿಕಾರ್ಜುನ್ ಇವರು ಟ್ರಾ-ಕ್ಟರ್ ಚಾಲಿತ ರಾಶಿ ಯಂತ್ರದ ದಾಖಲಾತಿ ಪಡೆದುಕೊಂಡು ತಾಂತ್ರಿಕ ಅಧಿಕಾರಿಗಳಾದ ಕೃಷ್ಣಾ ಇವರಿಗೆ ಭೇಟಿ ಮಾಡಿ, ಧಾಖಲಾತಿಗೆ ಪಿನ್ ಹೊಡೆಯಲು ಕೇಳಿದಾಗಾ, ಅಧಿಕಾರಿ ಕೃಷ್ಣ ಅವರು ರೈತನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಪಕ್ಕದಲ್ಲಿದ್ದ ಕಾಲಿ ಇರುವ ಕುರ್ಚಿಗೆ ತನ್ನ ಕಾಲಿನಿಂದ ಒದ್ದು ರೈತನಿಗೆ ಜೀವ ಬೆದರಿಕೆ ಹಾಕುತ್ತಾ ಹಲ್ಲೆ ಮಾಡಲು ಯತ್ನಿಸಿರುತ್ತಾರೆ,ಮತ್ತೆ ನಾನು ಸ್ಥಳಿಯೊನೆ ಆಗಿದ್ದು ನಿನ್ನನ್ನು ನೋಡುತ್ತೇನೆ ಎಂದು ಅವಾಜ್ ಹಾಕಿದ್ದಾರೆ, ಇಂಥಾ ಸಂಗತಿಯನ್ನು ರೈತರು ಮುಖಂಡರು ಖೆದಕರ ಸಂಗತಿ ಎಂದು ತಿಳಿಸಿದರು.

ದೇಶದಲ್ಲಿ ರೈತನಿಗೆ ರೈತದೇವೋ ಭವ, ರೈತ ದೇಶದ ಅನ್ನದಾತ, ರೈತ ದೇಶದ ಬೆನ್ನೆಲುಬು, ಎಂದು ಸರ್ಕಾರಗಳು ಹಾಗೂ ಅಧಿಕಾರಿಗಳು ಹೇಳುತ್ತಲೆ ಬಂದಿದೆ,ಕೇಲ ಅಧಿಕಾರಿಗಳು ರೈತರ ಮೇಲೆ ಆಗುವ ದೌರ್ಜನ್ಯ ಮಾಡುತಲೆ ಇದ್ದಾರೆ, ರೈತರಿ ಇಲಾಖೆಯಲ್ಲಿ ರೈತರ ಕೆಲಸ ಮಾಡದೆ ಮತ್ತೆ ಯಾವ ಕೆಲಸ ಮಾಡುತ್ತಾರೆ,ಎನ್ನುವುದೇ ತಿಳಿಯೋದಿಲ್ಲಾ ಇಂಥವರನ್ನು ಕೂಡಲೇ ಕೆಲಸದಿಂದ ವಜಾ ಮಾಡಿ,ಕ್ರಮ ತೆಗೆದುಕೋಳಬೇಕು,

ರೈತರ ರೈತ ಸಂಘ ಪದಾಧಿಕಾರಿಗಳಿಂದ ರೈತ ಮಲ್ಲಿಕಾರ್ಜುನನ ವಿಷಯ ತಿಳಿದುಕೊಂಡು,ಸೋಮುವಾರ ಕೃಷಿ ಇಲಾಖೆಗೆ ರೈತ ಸಂಘದ ವತಿಯಿಂದ ಪ್ರತಿಭಟನೆ ಮಾಡಲಾಯಿತ್ತು.

ತಾಂತ್ರಿಕ ಅಧಿಕಾರಿಗೆ ಕೃಷ್ಣಾ ಅವರಿಗೆ ಕೂಡಲೇ ಕ್ರಮ ಜರುಗಿಸದಿದ್ದರೆ,ದಿನಾಂಕ:-18-8- 2025 ರಂದು ಅರೇಶ್ವರ ದೇವಸ್ಥಾನ ದಿಂದ ತಹಶಿಲ್ದಾರ ಕಛೇರಿಯವರಿಗೆ ನೂರಾರರು ರೈತರು ಜೊತೆಯಲ್ಲಿ ಮೆರವಣಿಗೆ ಮುಖಾಂತರ ತಹಶೀಲ್ದಾರ ಕಚೇರಿಗೆ ಮುತ್ತಿಗೆ ಹಾಕೋಲಾಗುವುದೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕ ಅಧ್ಯಕ್ಷ ಪ್ರಕಾಶ್ ಬಾವಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷರು ಶ್ರಿಮಂತ ಬಿರಾದರ್, ರಾಜಕುಮಾರ ಬೀರಾದರ್,ವಿಶ್ವನಾಥ ಧರಣೆ,ಸತ್ಯವಾನ್ ಪಾಟೀಲ್,ಕಲ್ಲಪ್ಪಾ ದೇಶಮುಖ, ಝುರಣೆಪ್ಪಾ ದೇಶಮುಖ, ಬಾಬುರಾವ,ಗೋವಿಂದರಾವ,ರಾಜಕುಮಾರ ಜಕನಾಳ,ಕಲ್ಲಪ್ಪಾ ಹುಗ್ಗೆ,ಮಲ್ಲಿಕಾರ್ಜುನ್ ವಡಮುರಿಗೆ. ಸಂತೋಷ ಜಾಧವ. ಬಾಬುರಾವ ಬಿರಾದಾ ತುಕರಾಮ ಡೋಂಗರಗಾವ,ಪ್ರಭು,ಬಸವಂತ, ಸೂಯುಕಾಂತ,ಶಿವುಕುವಾರ ಹುಗ್ಗೆ,ಶಿವರಾಜ ಡೋಂಗರಗಾವ, ಹಾಗೂ ತಾಲೂಕಿನ ರೈತರು, ರೈತ ಮುಖಂಡರು ಉಪಸ್ಥಿತಿ ಇದ್ದರು.

# ಶಿವಸೃಷ್ಟಿಗೆ 700 ಕೋಟಿ ಅನುದಾನಕ್ಕೆ ಬೇಡಿಕೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಆ11ಇಲ್ಲಿ ನಿರ್ಮಿಸುತ್ತಿರುವ ಶಿವಸೃಷ್ಟಿಗೆ 700 ಕೋಟಿ ಅನುದಾನ ಒದಗಿಸಲು ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತೇನೆ ಎಂದು ಶಾಸಕರಾದ ಶರಣು ಸಲಗರ ಭರವಸೆ ನೀಡಿದ್ದಾರೆ.

ಇಲ್ಲಿನ ಶ್ರೀ ಬಸವೇಶ್ವರ ಚೌಕ್ ಹತ್ತಿರ ಇರುವ ಬಿಕೆಡಿಬಿ ಸಭಾಂಗಣದಲ್ಲಿ ಕರ್ನಾಟಕ ಮರಾಠಾ ನೌಕರರ ಸಂಘದಿಂದ ಆಯೋಜಿಸಿದ್ದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ 'ರಾಜಮಾತಾ ಜೀಜಾವು ಪ್ರತಿಭಾ ಪುರಸ್ಕಾರ' ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ಇಲ್ಲಿನ ಶಿವಸೃಷ್ಟಿ ರಾಜ್ಯ ಹಾಗೂ ತೆಲಂಗಾಣಾ, ಆಂಧ್ರ, ಮಹಾರಾಷ್ಟ್ರದ ಜನರ ಶ್ರದ್ಧೆ ಮತ್ತು ಉತ್ತಮ ಪ್ರವಾಸಿ ತಾಣವಾಗಿ ರೂಪುಗೊಳ್ಳಬೇಕು ಎಂಬುದು ತಮ್ಮ ಪ್ರಯತ್ನವಾಗಿದೆ. ಆದ್ದರಿಂದ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನದಲ್ಲಿ ಈ ಬಗ್ಗೆ ಧ್ವನಿ ಎತ್ತುತ್ತೇನೆ. ಯಾವುದೇ ಕನಸು ನನಸಾಗಲು ನಿರಂತರ ಪ್ರಯತ್ನ ಅತ್ಯವಶ್ಯಕ ಎಂದರು.

ವಿಧಾನ ಪರಿಷತ್ ಸದಸ್ಯರಾದ ಎಂ.ಜಿ.ಮುಳೆ ಮಾತನಾಡಿ, ನಾನು ಸಹ ಹಲವಾರು ವರ್ಷಗಳಿಂದ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ. ಹೀಗಾಗಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಈ ಕಾರ್ಯಕ್ರಮದಿಂದ ಸಂತಸವಾಗಿದೆ. ವಿಧಾನಪರಿಷತ್ ಸದಸ್ಯನಾಗಿ ಸಮಾಜದ ಹಿತಕ್ಕಾಗಿ ದುಡಿಯುತ್ತೇನೆ. ಮರಾಠಾ ಸಮಾಜದ ಅಭಿವೃದ್ಧಿಗಾಗಿ ವಿವಿಧ ಉತ್ತಮ ಕಾರ್ಯಗಳು ನಡೆಯುವುದು ಅಗತ್ಯವಾಗಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ವಿಜಯಸಿಂಗ್ ಮಾತನಾಡಿ ಮಕ್ಕಳ ಅಭಿವೃದ್ಧಿಯಲ್ಲಿ ಪಾಲಕರ ಪಾತ್ರ ಹೆಚ್ಚಿದೆ. ಸತತವಾಗಿ ಪರಿಶ್ರಮಪಟ್ಟರೆ ಮಾತ್ರ ಯಾವುದೇ ಕಾರ್ಯದಲ್ಲಿ ಯಶಸ್ಸು ಪಡೆಯಬಹುದು ಎಂದರು.

ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ ಮಾತನಾಡಿ ಹೆಸರಿಗೆ ಸಂಘಟನೆ ಮಾಡದೆ ಉತ್ತಮ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕು. ಸಮಾಜ ಮುಂದುವರೆಯಲು ಎಲ್ಲರ ಸಹಕಾರ ಅಗತ್ಯವಾಗಿದೆ. ಇಲ್ಲಿ ನಿರ್ಮಿಸುತ್ತಿರುವ ಶಿವಸೃಷ್ಟಿಯ ಕೆಲಸ ಉತ್ತಮ ರೀತಿಯಲ್ಲಿ ಎಲ್ಲರ ಗಮನ ಸೆಳೆಯುವಂತೆ ಆಗಬೇಕು ಎಂದರು.

ಸಿಪಿಐ ಅಲಿಸಾಬ್, ಸಂಘದ ಅಧ್ಯಕ್ಷರಾದ ಮಹೇಶ ಮುಳೆ ಮಾತನಾಡಿದರು. ನಗರಸಭೆ ಅಧ್ಯಕ್ಷರಾದ ಸಗೀರುದ್ದೀನ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಅನಿಲ ಭೂಸಾರೆ, ಮುಖಂಡರಾದ ಅಂಗದರಾವ ಜಗತಾಪ, ಅರ್ಜುನ ಕನಕ, ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದವೀರಯ್ಯ ರುದನೂರು, ಸಿಪಿಐ ಕೃಷ್ಣಕುಮಾರ ಪಾಟೀಲ, ಎಇಇ ರಮೇಶ ಪಾಟೀಲ. ಪಶು ವೈದ್ಯಾಧಿಕಾರಿ ಡಾ.ರಾಜಕುಮಾರ ಬಿರಾದಾರ, ಸಮನ್ವಯಾಧಿಕಾರಿ ಪ್ರಭಾಕರ ಕಳಮಾಸೆ, ಬಿಸಿಯೂಟ ಅಧಿಕಾರಿ ಸಂಜೀವಕುಮಾರ ಕಾಂಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಾಲಕೃಷ್ಣ ಪಾಟೀಲ ಪ್ರಾಸ್ತಾವಿಕ ಮಾತನಾಡಿದರು. ಮದನ ಪಾಟೀಲ ಸ್ವಾಗತಿಸಿದರು.



ಬಸವಕಲ್ಯಾಣ :- ಇಲ್ಲಿನ ಬಸವೇಶ್ವರ ಚೌಕ ಹತ್ತಿರ ಇರುವ ಬಿಕೆಡಿಬಿ ಸಭಾಂಗಣದಲ್ಲಿ ಕರ್ನಾಟಕ ಮರಾಠಾ ನೌಕರರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜಮಾತ ಜೀಜಾವು ಪ್ರತಿಭಾ ಪುರಸ್ಕಾರ ವಿತರಿಸಲಾಯಿತು ಈ ಸಂದರ್ಭದಲ್ಲಿ ಶಾಸಕರಾದ ಶರಣು ಸಲಗರ. ಎಂ. ಜಿ. ಮುಳೆ. ವಿಜಯಸಿಂಗ. ಅಂಗದರಾವ ಜಗತಾಪ್. ಮಹೇಶ್ ಮುಳೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸದನದಲ್ಲಿ ಶಾಸಕ ಅಲ್ಲಂಪ್ರಭು ಪಾಟೀಲ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಸಾರಿಗೆಸಚಿವ ರಾಮಲಿಂಗಾರೆಡ್ಡಿ ಉತ್ತರ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಕಲಬುರಗಿ ಮಹಾನಗರದಲ್ಲಿನ ಸಂಚಾರ ದಟ್ಟಣೆ ತಪ್ಪಿಸಲು ಹಾಗೂ ಕೇಂದ್ರ ಬಸ್ ನಿಲ್ದಾಣದಲ್ಲಿನ ಜನ, ಬಸ್ ದಟ್ಟಣೆ ತಪ್ಪಿಸಲು ನಗರದ ನಾಲ್ಕೂ ದಿಕ್ಕುಗಳಲ್ಲಿ ಉಪ ನಗರ ಬಸ್ನಿಲ್ದಾಣ ನಿರ್ಮಿಸಲು ಸಾರಿಗೆ ನಿಗಮ ಸೂಕ್ತ ನಿವೇಶನಕ್ಕಾಗಿ ಹುಡುಕಾಟದಲ್ಲಿದೆ. ನಿವೇಶನ ಸಕ್ಕಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣ ಯೋಜನೆ ರೂಪಿಸಿ ಅಭಿವೃದ್ಧಿಗೆ ಇಲಾಖೆ ಬದ್ಧವೆಂದು ಸಾರಿಗ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಸದನದಲ್ಲಿ ಕಲಬುರಗಿ ಕ್ಷಿಣ ಶಾಸರಾದ ಅಲ್ಲಂಪ್ರಭು ಪಾಟೀಲರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣಕ್ಕೆ ಜಾಗ ಬೇಕೆಂದು ಕೃಷಿ,ಕಂದಾಯ, ಉನ್ನತ ಶಿಕ್ಷಣ ಹಾಗೂ ಪಸು ಸಂಗೋಪನೆ ಇಲಾಖೆಗಳಿಗೆ ಪತ್ರ ಬರೆದು ಕೋರಿದ್ದೇವೆ. ಕೃಷಿ ಇಲಾಖೆ ತನ್ನ ಬಳಿ ಜಮೀನಿಲ್ಲವೆಂದು ಹೇಳಿದೆ. ಉಳಿದ ಇಲಾಖೆಯಿಂದ ಮಾಹಿತಿ ಬಂದಿಲ್ಲ.

ನಿಗಮಕ್ಕೆ ಸೂಕ್ತ ಜಮೀನು ದೊರಕಿದ ನಂತರ ಆದ್ಯತೆ ಮೇರೆಗೆ ಮುಂಬರುವ ಅನುದಾನದಲ್ಲಿ ಕಲಬುರಗಿಯಲ್ಲಿನ ಸ್ಯಾಟಲೈಟ್ ಬಸ್ ನಿಲ್ದಾಣ ಯೋಜನೆ ಪರಿಗಣಿಸಲಾಗುತ್ತದೆ ಎಂದೂ ಸಚಿವರು ಭರವಸೆ ನೀಡಿದ್ದಾರೆ.

ಕಲಬುರಗಿ ನಾಲ್ಕೂ ದಿಕ್ಕುಗಳಲ್ಲಿ ಬೆಳೆಯುತ್ತಿದೆ. ನಗರದಲ್ಲಿ ಸಂಚಾರ ದಟ್ಟಮೆ ಹೆಚ್ಚಿದೆ. ವಾಹನ ಸಂಚಾರವೂ ದಿನದಿಂದ ದಿನಕ್ಕೆ ಹೆಚ್ಚುತ್ತಿರೋದರಿಂದ ಸಾರಿಗೆ ಸೇವೆ ವಿಕೇಂದ್ರಿಕರಣವಾಬೇಕು. ವಿವಿಧೆಡೆ ಬಸ್ ನಿಲ್ದಾಣಗಳಾದಲ್ಲಿ ಜನ ಅಲ್ಲಲ್ಲಿ ಅವುಗಳನ್ನು ಬಳಸುತ್ತಾರಂದು ಶಾಸಕರು ತಮ್ಮ ಬೇಡಿಕೆ ಹಿಂದಿನ ಜನ ಕಲ್ಯಾಣದ ಮಾಹಿತಿ ಸದನದ ಗಮನಕ್ಕೆ ತಂದರು.

ಸುಸಜ್ಜಿತ 20 ಕೋಟಿ ರು ವೆಚ್ಚದ ಬಸ್ ನಿಲ್ದಾಣ ನಿರ್ಮಿಸಲಾಗಿದೆ. 20250 26 ರಲ್ಲಿ 28 ಹೊಸ ಅನುಸೂಚಿ ಕಾರ್ಯಗತಗೊಳಿಸಲಾಗಿದೆ. ಕಲಬುರಗಿ ನಗರಕ್ಕೆ ಶೀಘ್ರ ಹೊಸ 25 ಬಸ್ ಬರಲಿವೆ. ಕಲಬುರಗಿ ನಗರ ಸಾರಿಗೆ ಬೇಡಿಕೆ ಹೆಚ್ಚುತ್ತಿದೆ. ಇದನ್ನು ಪರಿಹರಿಸಲು ಹೊಸ ಅನುಸೂಚಿ ಅಗತ್ಯಕ್ಕೆ ತಕ್ಕಂತೆ ಕಾರ್ಯಾಚರಣೆಗೆ ಕೆಕೆಆರ್‌ಟಿಸಿಗೆ ಸೂಚಿಸಲಾಗಿದೆ. ನಗರದಲ್ಲಿ 90 ಅನುಸೂಚಿಯಿಂದ 1490 ಕಾಯ್ರಾಚರಣೆ ಮಾಡಲಾಗುತ್ತಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

## ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಯಶಸ್ವಿ : ಡಾ. ವಿಪಿನ್ ಘೋಯಲ್



ಮಲ್ಲಮ್ಮ ನುಡಿ ವಾರ್ತೆ

ಬೀದರ. ಆ.10 :– ಗುರು ನಾನಕ ಆಸ್ಪತ್ರೆಯಲ್ಲಿ ನಡೆದ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮಾಡಲಾಯಿತು. ಹೈದ್ರಾಬಾದನ ಹಿರಿಯ ಶಸ್ತ್ರ ಚಿಕಿತ್ಸಕ ಆಂಕೋಲಾಜಿಸ್ಟ ಡಾ. ವಿಪಿನ್ ಗೋಯಲ್ ಅವರ ನೇತೃತ್ವದಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮಾಡಲಾಯಿತು.

ಬೀದರ ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎರಡು ತಿಂಗಳ ಕಾಲ ರೋಟರಿ ಕ್ಲಬ್ ಆಫ್ ಸಿಲ್ವರ್ ಸ್ಟಾರ್ ನಿಂದ ಆರೋಗ್ಯ ಕಠಿಣ ಮಹಿಳಾ ಆರೋಗ್ಯ ಜಾಗೃತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಉಪಕ್ರಮವು ಸಮಾಜದ ಆರ್ಥಿಕವಾಗಿ ದುರ್ಬಲ ವಿಭಾಗದ (ಇಡಬ್ಲೂಎಸ್) ಮೇಲೆ ಕೇಂದ್ರೀಕರಿಸಿ ಮತ್ತು ಶಿಬಿರದ ಸಮಯದಲ್ಲಿ ಪರೀಕ್ಷಿಸಲ್ಪಟ್ಟ ಹಲವಾರು ಮಹಿಳೆಯರಿಗೆ ವಾರದಾನವಾಗಿ ಪರಿಣಮಿಸಿತು.

ಗಂಭೀರ ರೋಗಿಗಳನ್ನು ಕಂಡು ಹಿಡಿದು ಗುರು ನಾನಕ ಆಸ್ಪತ್ರೆಯಲ್ಲಿ ಸೇರಿಸಿ ಅವರಿಗೆ ಉಚಿತ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪುನಿತ್ ಸಿಂಗ್ ತಿಳಿಸಿದರು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಆಫ್ ಸಿಲ್ವರ್ ಸ್ಟಾರ್‌ನ ಮಾಜಿ ಕಾರ್ಯದರ್ಶಿ ಶ್ರೀಮತಿ ಪೂಜಾ ಜಾರ್ಜಾ, ಯೋಜನಾ ಸೋಯೋಜಕಿ ಶ್ರೀಮತಿ ಸಹನಾ ಎಸ್. ಪಾಟೀಲ್ ಮತ್ತು ಎಲ್ಲಾ ಸದಸ್ಯರುಗಳು ಡಾ. ವಿಪಿನ್ ಅವರಿಗೆ ಕೃತ್ಜತೆ ಸಲ್ಲಿಸಿರು.

ರೋಟರಿ ಕ್ಲಬ್ ನವರಿಂದ ಹೆಚ್ಚು ಹೆಚ್ಚಾಗಿ ಕ್ಯಾನ್ಸರ್ ತಡೆಗಟ್ಟುವಿಕೆಗೆ ನಮ್ಮ ಬದ್ಧತೆ ಮತ್ತು ಸಂಕಲ್ಪ ಹೊಂದಿದ್ದೇವೆ ಮತ್ತು ಮುಂದೆಯೂ ಇಂತಹ ಉಚಿತ ಕ್ಯಾಂಪ್‌ಗಳು ನಡೆಸೋಣ ಎಂದು ಸಂಕಲ್ಪ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

## ವರದಕ್ಷಿಣೆ ಕಿರುಕುಳ ಆರೋಪ; ಪ್ರಕರಣ ದಾಖಲು

ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ.10 :– ವರದಕ್ಷಿಣೆ ನೀಡುವಂತೆ ಗಂಡನ ಮನೆಯವರು ಕಿರಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಮಹಿಳೆಯು ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಾಗಿದೆ.




ನಗರದ ಶಹಗಂಜ್ ಬಡಾವಣೆಯ ನಿವಾಸಿ ಪೂಜಾ ದೂರು ನೀಡಿದ ಮಹಿಳೆ. ದೂರಿನಲ್ಲಿ ತನ್ನ ಗಂಡ ಆಕಾಶ್ ಮತ್ತು ನನ್ನ ನಡುವೆ 2022 ಆಗಸ್ಟ್ ನಲ್ಲಿ ನಿಶ್ಚಿತಾರ್ಥವಾಗಿ ಡಿಸೆಂಬರ್ ನಲ್ಲಿ ಮದುವೆಯಾಗಿತ್ತು.

ಮದುವೆ ಸಮಯದಲ್ಲಿ 2 ತೊಲೆ ಚಿನ್ನ ಮತ್ತು 5 ಲಕ್ಷ ರೂ. ನಗದನ್ನು ವರದಕ್ಷಿಣೆ ನೀಡಬೇಕು ಎಂಬ ಗಂಡನ ಮನೆಯವರ ಒತ್ತಾಯದ ಬೇಡಿಕೆಗೆ ಒಪ್ಪಿ, ನಮ್ಮ ತಂದೆ ಅದನ್ನು ನೀಡಿದ್ದರು. ಇದೀಗ ಮತ್ತೆ 2 ಲಕ್ಷ ರೂ. ಮತ್ತು 2 ತೊಲೆ ಚಿನ್ನ ವರದಕ್ಷಿಣೆ ರೂಪದಲ್ಲಿ ನೀಡಬೇಕು ಎಂದು ಕಿರಕುಳ ನೀಡುತ್ತಿದ್ದಾರೆ. ಇದನ್ನು ನನ್ನ ಕುಟುಂಬಸ್ಥರಿಗೆ ತಿಳಿಸಿದಾಗ ನನ್ನ ತಂದೆ ಮತ್ತು ಸಹೋದರ ಬಂದು ನನ್ನನ್ನು ಆಳಂದದ ತವರು ಮನೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಜೂನ್ 2025 ರಲ್ಲಿ ನನ್ನ ಮೊದಲನೇ ಮಗನ ಹುಟ್ಟುಹಬ್ಬ ತವರು ಮನೆಯಲ್ಲಿಯೇ ಆಚರಿಸಿದ್ದು, ಹುಟ್ಟುಹಬ್ಬಕ್ಕೆ ನನ್ನ ಗಂಡ ಮತ್ತು ಅವರ ಮನೆಯವರು ಬಂದಿದ್ದರು. ಆವಾಗ ನಾನು ಅವರ ಜೊತೆಗೆ ಗಂಡನ ಮನೆಗೆ ಹೋಗಿದ್ದೇನೆ. ಜುಲೈ ತಿಂಗಳಲ್ಲಿ ಮತ್ತೆ ನನಗೆ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಾಟ ನೀಡಿದಾಗ, ನನ್ನ ತಂದೆ ಮತ್ತು ಸಹೋದರರನ್ನು ಕರೆಸಿದ್ದೇನೆ. ಆದರೆ ನನ್ನ ತಂದೆ ಮತ್ತು ಸಹೋದರರ ಮುಂದೆಯೇ ನನ್ನ ಗಂಡ, ಅತ್ತೆ, ಮಾವ, ಮೈದುನ ಮತ್ತು ನಾದಿನಿಯರು ಸೇರಿ ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಹೊಡೆದಿದ್ದಾರೆ. ವರದಕ್ಷಿಣೆ ತೆಗೆದುಕೊಂಡು ಬರದೇ ಇದ್ದರೆ ಜೀವ ತೆಗೆಯುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ ಎಂದು ಪೂಜಾ ಆರೋಪಿಸಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

## ಆಗಸ್ಟ್.13 ರಂದು ಲೋಕಾಯುಕ್ತ ಅಹವಾಲು ಸಭೆ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಆಗಸ್ಟ್.11– ಕರ್ನಾಟಕ ಲೋಕಾಯುಕ್ತ ಬೀದರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಾಬಾಸಾಹೇಬ ಪಾಟೀಲ ಅವರು ಆಗಸ್ಟ್.13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಹುಮನಾಬಾದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕ ಕುಂದು ಕೊರತೆ/ ಅಹವಾಲು ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಬೀದರ ಪೊಲೀಸ್ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ್ಯಾ. ನಾಗಮೋಹನ ದಾಸ್ ವರದಿ ಮರು ಸಮೀಕ್ಷೆಗಾಗಿ ಒತ್ತಾಯ: ಇಲ್ಲದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಆ. 10 :– ನ್ಯಾ. ನಾಗಮೋಹನದಾಸ್ ಅವರ ಒಳಮೀಸಲಾತಿ ವರದಿಯನ್ನು ನಾವು ಒಪ್ಪುವುದಿಲ್ಲ. ಏಕೆಂದರೆ ಅದು ಅವೈಜ್ಞಾನಿಕವಾಗಿದೆ. ಬಲಗೈ ಹೊಲೆಯ ಸಮುದಾಯದವರ ಸಂಖ್ಯೆ ಕಡಿಮೆ ತೋರಿಸಿ, ನಮಗೆ ವ್ಯವಸ್ಥಿತವಾಗಿ ತುಳಿಯುವ ಹುನ್ನಾರ ಇದರಲ್ಲಿ ಅಡಗಿದೆ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಮಾರುತಿ ಬೌದ್ಧೆ ತಿಳಿಸಿದರು.



ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಭಾನುವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಒಳಮೀಸಲಾತಿ ಕುರಿತು ಜಾತಿ ಜನಗಣತಿ ಸರಿಯಾಗಿ ಆಗಿಲ್ಲ. ನಮ್ಮ ಸಮುದಾಯದ ಜನರು ಕೆಲಸಗಳನ್ನು ಅರಸಿಕೊಂಡು ಬೇರೆಡೆಗೆ ಹೋಗಿದ್ದಾರೆ. ಅಂಥವರ ಮನೆಯಲ್ಲಿ ಯಾರೂ ಇಲ್ಲ ಎಂದು ಚೀಟಿ ಅಂಟಿಸಿ ಬರಲಾಗಿದೆ. ಸುಮಾರು 8 ಲಕ್ಷ ಮಕ್ಕಳ ಗಣತಿಯೇ ಕೈಬಿಡಲಾಗಿದೆ ಎಂದು ಆಯೋಗದ ವಿರುದ್ಧ ತಮ್ಮ ಅಸಮಾಧಾನ ಹೊರಹಾಕಿದರು. ಆಯೋಗವು ತರಾತುರಿಯಲ್ಲಿ ಗಣತಿ ಮಾಡುವ ಅವಶ್ಯಕತೆಯೇ ಇರಲಿಲ್ಲ. ಗಣತಿ ಸಂದರ್ಭದಲ್ಲಿ ಜಾತಿ ಕಾಲಂ ಜೊತೆಗೆ ಧರ್ಮದ ಕಾಲಂ ಕೂಡಾ ಕೊಡಲಿಲ್ಲ. ಹೀಗಾಗಿ ಸರ್ಕಾರ ಒಂದು ಉಪ ಸಮಿತಿಯನ್ನು ರಚನೆ ಮಾಡಿ ಈಗ ಸಲ್ಲಿಸಿರುವ ವರದಿಯನ್ನು ಕೂಲಂಕಶವಾಗಿ ಪರಿಶೀಲನೆ ನಡೆಸಿ ಬಲಗೈ ಹೊಲೆಯ ಸಮುದಾಯದವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ತಿಳಿಸಿದರು.

ದಲಿತ ಸಂಘರ್ಷ ಸಮಿತಿಯ ರಮೇಶ ಡಾಕುಳಗಿ ಮಾತನಾಡಿ ಇದಕ್ಕಿಂತ ಮೊದಲು ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಜಾರಿಮಾಡಬೇಕೆಂದು ಕಳೆದ ಮೂರು ದಶಕಗಳಿಂದ ಹೋರಾಟ ಮಾಡುತ್ತ ಬಂದಿದ್ದೇವು. ಜೆ.ಸಿ.ಮಾಧುಸ್ವಾಮಿಯವರು ತಮ್ಮ ವರದಿಯಲ್ಲಿ ಬಲಗೈ ಸಮುದಾಯದವರಿಗೆ 5.5 ಪ್ರತಿಶತ ಮೀಸಲಾತಿ ನೀಡಿ ಎಂದು ಉಲ್ಲೇಖ ಮಾಡಿದ್ದರು. ಆದರೆ ನ್ಯಾ. ನಾಗಮೋಹನದಾಸ್ ಅವರ ವರದಿ ಶೇ. 5 ಪ್ರತಿಶತಕ್ಕೆ ತಂದು ನಿಲ್ಲಿಸಿ ನಮಗೆ ಅನ್ಯಾಯ ಮಾಡಿದ್ದಾರೆ. ಈ ಕುರಿತು ಸಿಎಂ ಸಿದ್ಧರಾಮಯ್ಯ ಉಭಯ ಸದನಗಳಲ್ಲಿ ಚರ್ಚಿಸಬೇಕು. ನಂತರ 101 ಜಾತಿಗಳ ಮಹಾದುಂಡುಮೇಜಿನ ಸಭೆ ಕರೆಯಬೇಕು. ಲೋಪದೋಷಗಳ ಕುರಿತು ಚರ್ಚಿಸಲು ಸ್ವತಂತ್ರ ನೀಡಬೇಕು. ಇದರಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಲಾಗುವುದು ಎಂದರು.

ನಿವೃತ್ತ ಪ್ರಾಚಾರ್ಯರಾದ ವಿಠಲದಾಸ ಪ್ಯಾಗೆ ಮಾತನಾಡಿ 101 ಜಾತಿಗಳಲ್ಲಿ 49 ಜಾತಿಗಳು ಬಲಗೈ ಹೊಲೆಯ ಸಮುದಾಯಕ್ಕೆ ಸೇರಿವೆ. ಈ ವಿಷಯವನ್ನು ನಾವು ಹಿಂದೆಯೇ ನಾಗಮೋಹನ ದಾಸ್ ಅವರಿಗೆ ತಿಳಿಸಿದ್ದೇವು. ಆದರೆ ಇಷ್ಟು ದಿವಸ ನೀವು ಹೆಚ್ಚು ತುಪ್ಪ ತಿಂದಿದ್ದೀರಿ. ಒಂದೆರಡು ಚಮಚ ತುಪ್ಪ ಕಡಿಮೆ ತಿನ್ನಿರಿ ಎಂದು ಹೇಳಿರುವ ನಾಗಮೋಹನದಾಸ್ ಅವರು ಹಾಗೂ ಮನುವಾದಿಗಳು ನಮಗೆ ವ್ಯವಸ್ಥಿತವಾಗಿ ಅನ್ಯಾಯ ಮಾಡಲು ಹೊರಟಿದ್ದಾರೆ. ಈ ವರದಿಯನ್ನು ನಾವು ಒಪ್ಪುವುದಿಲ್ಲ. ಒಂದು ವೇಳೆ ಜಾರಿ ಮಾಡಿದರೆ ಹೋರಾಟ ಮಾಡಲಾಗುವುದು ಎಂದರು. 2011ರ ಜನಗಣತಿಯಂತೆ ರಾಜ್ಯದಲ್ಲಿ 38 ಲಕ್ಷ ಜನಸಂಖ್ಯೆ ಬಲಗೈ ಸಮುದಾಯದವರಿದ್ದಾರೆ. ಈ ಸಂಖ್ಯೆ ಆಧಾರದ ಮೇಲೆ ಶೇ. 7 ಪ್ರತಿಶತ ಒಳಮೀಸಲಾತಿ ನೀಡಿ. ನಾವು ಯಾರಿಗೂ ಅನ್ಯಾಯ ಮಾಡಿಲ್ಲ. ನಮಗೆ ಅನ್ಯಾಯ ಆದರೆ ಸುಮ್ಮನಿರುವುದಿಲ್ಲ. ಇದರಿಂದ ನಮ್ಮ ಮುಂದಿನ ಪೀಳಿಗೆಗೆ ಅನ್ಯಾಯವಾಗುತ್ತದೆ. ವರದಿಯನ್ನು ಅಧ್ಯಯನ ಮಾಡಿ ಸರಿಪಡಿಸಬೇಕೆಂದು ಆಗ್ರಹಿಸಿದರು.

ಸಂವಿಧಾನ ಸಂರಕ್ಷಣಾ ಸಮಿತಿಯ ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಅನೀಲಕುಮಾರ ಬೆಲ್ದಾರ್ ಮಾತನಾಡಿ ಈ ಹಿಂದೆಯೇ ನ್ಯಾ. ನಾಗಮೋಹನದಾಸ್ ಅವರು ಪೂರ್ವಾಗ್ರಹ ಪೀಡಿತರಾಗಿ ಮಾತನಾಡಿದ್ದರು. ಒಂದು ಚಮಚ ತುಪ್ಪ ನಿಮಗೆ ಕಡಿಮೆ ಬಂದರೂ ತಾಳ್ಮೆವಹಿಸಿ ಎಂದಿದ್ದರು. ಹೀಗಾಗಿ ತಾಂತ್ರಿಕ ನೆಪ ಮುಂದಿಟ್ಟುಕೊಂಡು ಬಲಗೈ ಸಮುದಾಯದವರನ್ನು ತುಳಿಯುವ ಹುನ್ನಾರ ಮಾಡಿದ್ದಾರೆ. ಇದು ಅವರ ಮನಸ್ಥಿತಿ ತೋರಿಸಿಕೊಡುತ್ತದೆ ಎಂದರು.

ಆ. 16 ರಂದು ಈ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ಸಭೆ ಕರೆದಿದ್ದಾರೆ. ಬಲಗೈ ಸಮುದಾಯದವರಿಗೆ ನ್ಯಾಯ ಸಿಗಬೇಕೆಂದು ತಿಳಿಸಿದರು.

ಇದೇ ವೇಳೆ ಪ್ರಮುಖರಾದ ಶಿವರಾಜ ಕುದರೆ, ದೇವಿಂದ್ರ ಸೋನಿ, ಉಮೇಶ ಸ್ವಾರಳ್ಳಿಕರ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೇಸ್ ಮುಖಂಡ ಬಕ್ಕಪ್ಪ ಕೋಟೆ, ಪ್ರಮುಖರಾದ ಬಾಬು ಪಾಸ್ವಾನ್, ಕಾಶಿನಾಥ ಚಲ್ವಾ, ಆರ್‌ಪಿಐ ಅಂಬೇಡ್ಕರ್ ಪಕ್ಷದ ಮಹೇಶ ಗೋರನಾಳಕರ್, ಯುವ ಹೋರಾಟಗಾರ ವಿನಯ ಮಾಳಗೆ, ವಿನೋದ ಅಪ್ಪೆ, ವಿನೋದ ಬಂದಗೆ, ಶಿವಕುಮಾರ ನೀಲಿಕಟ್ಟಿ, ರಾಜಕುಮಾರ ಬನ್ನೇರ್, ಸುನೀಲ ಸಂಗಮ, ಪ್ರಸನ್ನ ಡಾಂಗೆ, ರಮೇಶ ಮಂದಕನಳ್ಳಿ, ಶರಣು ಫುಲೆ, ಶ್ರೀಪತರಾವ ದೀನೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

### ಕಾಂಗ್ರೇಸ್‌ನ ಮತಗಳ್ಳತನ ಆರೋಪ: ರಾಹುಲ್ ಗಾಂಧಿ ದೇಶದ ಕ್ಷಮೆ ಯಾಚಿಸಲಿ

## ರಾಹುಲ್ ಗಾಂಧಿ ಖೋಟಾ ಸಿಕ್ಕ ಇದ್ದಂತೆ : ಭಗವಂತ ಖೂಬಾ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಆ. 10 :– ಚಲಾವಣೆಯಲ್ಲಿ ಇಲ್ಲದ ಖೋಟಾ ಸಿಕ್ಕ ಮತ್ತೊಬ್ಬರ ಯಶಸ್ವಿಯಲ್ಲಿ ಏನು ಕಡಿಮೆಯಿದೆ ಎಂದು ಹುಡುಕಿದಂತೆ ವಿರೋಧ ಪಕ್ಷದ ಸ್ಥಾನಕ್ಕೆ ಬೇಕಾಗುವಷ್ಟು ಸೀಟನ್ನು ಚುನಾವಣೆಯಲ್ಲಿ ಕಳೆದುಕೊಂಡು ಒದ್ದಾಡುತ್ತಿರುವ ಕಾಂಗ್ರೇಸ್ ಸುಳ್ಳು ಆರೋಪ ಮಾಡುತ್ತಿದೆ. ರಾಹುಲ್ ಗಾಂಧಿ ಕೂಡಾ ತನ್ನ ಅಸ್ತಿತ್ವ ಏನೂ ಇಲ್ಲ ಎಂಬುದನ್ನು ಮನಗಂಡು ಖೋಟಾ ಸಿಕ್ಕಾದಂತೆ ವರ್ತಿಸುತ್ತಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಆರೋಪಿಸಿದರು.




ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಮತದಾರರಿಗೆ ಹಣದ ಆಮಿಷ ತೋರಿಸುವುದು ಕಾಂಗ್ರೇಸ್‌ನ ಹಳೆಯ ಚಾಳಿಯಾಗಿದೆ. ಕಾಂಗ್ರೇಸ್ ಚುನಾವಣೆಯಲ್ಲಿ ಗೆದ್ದಾಗ ಇವಿಎಂ ಸರಿಯಾಗಿರುತ್ತವೆ. ಸೋತಾಗ ಮಾತ್ರ ಕೆಡುತ್ತವೆ. ವಾಮಪಂಥೀಯ ಹಾಗೂ ವಿದೇಶಿ ಶಕ್ತಿಗಳ ಮಾತು ಕೇಳಿ ಮತಗಳ್ಳತನದ ಸುಳ್ಳು ಆರೋಪ ಮಾಡುತ್ತಿರುವ ರಾಹುಲ್ ಗಾಂಧಿ ದೇಶದ ಜನರ ಕ್ಷಮೆ ಯಾಚಿಸಬೇಕು. ನಾನು ಮಾಡುತ್ತಿರುವ ಆರೋಪ ನಿಜ ಎಂದು ಚುನಾವಣಾ ಆಯೋಗದ ಮುಂದೆ ಪ್ರಮಾಣ ಮಾಡಿ ಎಂದು ಆಯೋಗ ಹೇಳಿದಾಗ ನಾನು ಸಂಸತ್‌ನಲ್ಲಿ ಈಗಾಗಲೇ ಪ್ರಮಾಣ ವಚನ ಸ್ವೀಕರಿಸಿದ್ದೇನೆ ಎಂದು ಹೇಳಿ ಪ್ರಮಾಣ ವಚನವೆಂಬ ಪದಕ್ಕೇ ಅವಮಾನ ಮಾಡಿದ್ದಾರೆ. ಮೂಲತಃ ಸಂವಿಧಾನ ಬದಲಾವಣೆ ಮತ್ತು ದುರ್ಬಲಗೊಳಿಸಿದ್ದೇ ಕಾಂಗ್ರೇಸ್ ಸರ್ಕಾರ. ನಿಮ್ಮ ನಾಟಕ ದೇಶದ 140 ಕೋಟಿ ಜನತೆಗೆ ಗೊತ್ತಾಗಿದೆ. ಸ್ವಯಂ ಬುದ್ಧಿಯಿಲ್ಲದ ರಾಹುಲ್ ಗಾಂಧಿ ಮಾಡುವ ಆರೋಪಕ್ಕೆ ನಾವು ಜಗ್ಗಲ್ಲ ಬಗ್ಗಲ್ಲ. ಬಿಜೆಪಿ ಸರ್ಕಾರ ಗಟ್ಟಿಯಾಗಿದೆ. 2014ಕ್ಕಿಂತ ಮುಂದೆ ದೇಶದ ಆರ್ಥಿಕತೆ ಸಂಪೂರ್ಣ ನೆಲಕಚ್ಚಿತ್ತು ಎಂದು ವಿಶ್ವಸಂಸ್ಥೆಯೇ ಹೇಳಿತ್ತು. ಮೋದಿಯವರ ದಿಟ್ಟ ನಿರ್ಧಾರಗಳಿಂದಾಗಿ ವಿಶ್ವದಲ್ಲಿ ಆರ್ಥಿಕವಾಗಿ 4ನೇ ಸ್ಥಾನಕ್ಕೆ ಬಂದಿದೆ ಎಂದು ಖೂಬಾ ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಮಾತನಾಡಿ ಭಾರತ ದಿನದಿಂದ ದಿನಕ್ಕೆ ಅಭಿವೃದ್ಧಿಯ ಕಡೆಗೆ ದಾಪುಗಾಲು ಹಾಕುತ್ತಿದೆ. ಇದನ್ನು ಸಹಿಸದ ರಾಹುಲ್ ಗಾಂಧಿ ವಿರೋಧಿಗಳ ಶಕ್ತಿಗಳ ಟೂಲ್ ಕಿಟ್ ಆಗಿ ವರ್ತಿಸುತ್ತ ಅದನ್ನು ಹಾಳು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. 2021ರ ನಗರಸಭೆ ಚುನಾವಣೆಯಲ್ಲಿ ಬೂತ್ ಸಂಖ್ಯೆ 71 ರಿಂದ 75ರ ವರೆಗೆ 15 ರಿಂದ 20 ಸಾವಿರ ಮತಗಳು ನಕಲಿ ಚಲಾವಣೆಯಾಗಿವೆ. ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದೇವೆ. ಇದನ್ನು ಸಚಿವ ರಹಿಂಖಾನ್ ಅವರೇ ಮ್ಯಾನೇಜ್ ಮಾಡುತ್ತಾರೆ ಎಂದು ಆರೋಪಿಸಿದರು. ಚುನಾವಣೆ ಮತ್ತು ಮತಕ್ಕಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಕಾಂಗ್ರೇಸ್ ಮುಕ್ತ ಭಾರತ ಮಾಡಲು ಜನರು ಪ್ರಯತ್ನಿಸುತ್ತಿದ್ದಾರೆ ಎಂದರು.

ಆಗಸ್ಟ್ 14 ರಂದು ಗುಂಪಾದಿಂದ ನೌಬಾದ ಬಿಜೆಪಿ ಕಚೇರಿವರೆಗೆ 100 ಕಾರ್ ರ‍್ಯಾಲಿ ನಡೆಯಲಿದೆ. 500 ಬೈಕ್ ರ‍್ಯಾಲಿ ಮತ್ತು ತಿರಂಗಾ ಯಾತ್ರೆ ಜಿಲ್ಲೆಯಾದ್ಯಂತ ನಡೆಯಲಿದೆ ಎಂದು ತಿಳಿಸಿದರು. 79ನೇ ಸ್ವಾತಂತ್ರ ದಿನಾಚರಣೆ ಪ್ರಯುಕ್ತ ಜಿಲ್ಲೆಯಾದ್ಯಂತ ಹರ್ ಘರ್ ತಿರಂಗಾ ನಡೆಯಲಿದ್ದು,

ಆ. 14 ರಂದು ಮಧ್ಯಾಹ್ನ 2 ಗಂಟೆಗೆ ಬಸವಕಲ್ಯಾಣ ತಾಲೂಕಾ ಗೋರ್ಟಾ ಗ್ರಾಮದಲ್ಲಿ "ವಿಭಜನೆ ವಿಭಜಕ ಸ್ಮೃತಿ ದಿವಸ್" ಆಚರಣೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ಮಾಜಿ ಸಚಿವ ಶ್ರೀರಾಮುಲು ಉದ್ಘಾಟಿಸಲಿದ್ದಾರೆ ಎಂದರು. ಜೊತೆಗೆ ಆ. 12 ರಿಂದ 15ರ ವರೆಗೆ ಜಿಲ್ಲೆಯ ಮಹಾಪುರುಷರ ಮೂರ್ತಿಗಳ ಸ್ವಚ್ಛತಾ ಕಾರ್ಯಕ್ರಮ ಜರುಗಲಿದೆ ಎಂದು ಸೋಮನಾಥ ಪಾಟೀಲ ತಿಳಿಸಿದರು.

ಇದೇ ವೇಳೆ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಪೀರಪ್ಪ ಔರಾದೆ, ನಗರ ಘಟಕ ಅಧ್ಯಕ್ಷ ಶಶಿ ಹೊಸಳ್ಳಿ, ಪ್ರಶಿಕ್ಷಣ ಪ್ರಕೋಷ್ಟದ ರಾಜ್ಯ ಸಂಚಾಲಕ ರಾಜಶೇಖರ ನಾಗಮೂರ್ತಿ, ಮಾಜಿ ಬುಡಾ ಅಧ್ಯಕ್ಷ ಬಾಬು ವಾಲಿ, ಬಿಜೆಪಿ ಜಿಲ್ಲಾ ಮಾಧ್ಯಮ ಸಂಚಾಲಕ ಶ್ರೀನಿವಾಸ ಚೌಧರಿ, ಬಸವರಾಜ ಪವಾರ ಉಪಸ್ಥಿತರಿದ್ದರು.

## ಹಿಂದೂಪರ ಸಂಘಟನೆ ಬಲಿಷ್ಠ ಪಡಿಸಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗದಳ ಸಂಯೋಜಕರಾಗಿ ದೇವರಾಜ್ ಸಿಂಗ್ ಠಾಕೂರ್, ವಿಎಚ್‌ಪಿ ಸಹ ಕಾರ್ಯದರ್ಶಿ ದತ್ತಾತ್ರಿ ಜಯದೇವ್, ನಗರ ಗೋರಕ್ಷ ಪ್ರಮುಖರಾಗಿ ಸುಗ್ರೀವ ವಾಘಮಾರೆ, ಪ್ರಚಾರ–ಪ್ರಸಾರ ಪ್ರಮುಖರಾಗಿ ವಿಜಯಕುಮಾರ್ ಸಾವರೆ ಹಾಗೂ ದುರ್ಗಾ ವಾಹನಿಯ ಸಹ ಸಂಯೋಜಕರಾಗಿ ಸುಶ್ಮಿತಾ ತೆಲಂಗ ಇವರಿಗೆ ಜವಾಬ್ದಾರಿ ವಹಿಸಲಾಗಿದೆ. ಜತೆಗೆ, ಕೆಲವೊಂದು ಹಲಬರ್ಗಾ ಮಂಡಲದ ಜವಾಬ್ದಾರಿಗಳೂ ಕೂಡ ಘೋಷಣೆ ಮಾಡಲಾಗಿದೆ.



ಇತ್ತೀಚೆಗೆ ನಡೆದ ಸಭೆಯಲ್ಲಿ ಜಿಲ್ಲಾ ಕೋಶಾಧ್ಯಕ್ಷ ಶ್ರೀನಾಥ ಹೆಡಾಜಿ ಹಾಗೂ ಜಿಲ್ಲಾ ಮಾತೃಶಕ್ತಿ ಪ್ರಮುಖ ಅನುಸುಜಾ ರೆಡ್ಡಿ ಅವರ ಉಪಸ್ಥಿತಿಯಲ್ಲಿ ವಿವಿಧ ಜವಾಬ್ದಾರಿಗಳನ್ನು, ಪರಿಷತ್ತಿನ ಜಿಲ್ಲಾಧ್ಯಕ್ಷ ವೀರಶೆಟ್ಟಿ ಖ್ಯಾಮಾ, ಜಿಲ್ಲಾ ಕಾರ್ಯದರ್ಶಿ ಬಸವರಾಜ್ ಯದ್ಲಾಪುರೆ, ಜಿಲ್ಲಾ ಸಂಯೋಜಕ ಭೀಮಣ್ಣ ಸೊರಳ್ಳಿ ಇವರ ಆದೇಶದ ಮೇರೆಗೆ, ವಿಭಾಗದ ಸಹ ಕಾರ್ಯದರ್ಶಿ ಉಮಾಕಾಂತಜಿ ಅವರು ಘೋಷಣೆ ಮಾಡಿದರು.

**ಹಲಬರ್ಗಾ ಮಂಡಲಕ್ಕೆ ಆಯ್ಕೆ :**

ಇದೇವೇಳೆ ತಾಲೂಕಿನ ಹಲಬರ್ಗಾ ಮಂಡಲದ ವಿಶ್ವಹಿಂದೂ ಪರಿಷತ್ ಮತ್ತು ಬಜರಂಗದಳ ಸಂಘಟನೆಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಬಸವರಾಜ ಮೂಲಗೆ – ವಿಎಚ್‌ಪಿ ಮಂಡಲ ಪ್ರಮುಖ, ದತ್ತಾತ್ರಿ ಇಡಗರ್ – ವಿಎಚ್‌ಪಿ ಮಂಡಲ ಉಪಾಧ್ಯಕ್ಷ, ಸುರೇಶ ಬಿರಾದಾರ್ –ಬಜರಂಗದಳ ಮಂಡಲ ಸಂಯೋಜಕ, ಸುನಿಲ್ (ಅಪ್ಪು) ಮಡಿವಾಳ್ – ಬಜರಂಗದಳ ಮಂಡಲ ಸಹ ಸಂಯೋಜಕ ಮತ್ತು ಹರೀಶ್ ಪ್ರಭಾ– ಮಂಡಲ ಗೋರಕ್ಷ ಪ್ರಮುಖರನ್ನಾಗಿ ಆಯ್ಕೆ ಮಾಡಲಾಗಿದೆ.

ತಾಲೂಕಿನಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಲು ಪದಾಧಿಕಾರಿಗಳು ಶ್ರಮಿಸಬೇಕೆಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಭಾಲ್ಕಿ ಪ್ರಖಂಡದ ಅಧ್ಯಕ್ಷರಾಗಿ ಸಚಿನ್ ಜಾಧವ್, ಉಪಾಧ್ಯಕ್ಷ ಶೈಲೇಶ ಮಾಲಪಾಣಿ, ಕಾರ್ಯದರ್ಶಿ ರವಿಕಾಂತ ಕುಂಬಾರ ಇದ್ದರು.

## ದಸರಾ ದರ್ಬಾರ್ ಕೈಬಿಡಲು ಬಸವರಾಜ ಧನ್ನೂರ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಆ. 11 :– ಬಸವಕಲ್ಯಾಣದಲ್ಲಿ ನಡೆಸಲು ಉದ್ದೇಶಿಸಿರುವ ದಸರಾ ದರ್ಬಾರ್ ಕೈಬಿಡಬೇಕು ಎಂದು ಜಾಗತಿಕ ಲಿಂಗಾಯತ ಮಹಾಸಭಾ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಧನ್ನೂರ ಆಗ್ರಹಿಸಿದ್ದಾರೆ.

ಬಸವಕಲ್ಯಾಣವು ಶರಣರು ತತ್ವಕ್ಕಾಗಿ ಪ್ರಾಣ ಕೊಟ್ಟ ನೆಲ. ಈ ಭೂಮಿಯಲ್ಲಿ ಶರಣರ ಸರ್ವ ಸಮಾನತೆ ತತ್ವಕ್ಕೆ ವಿರುದ್ಧವಾದ ಕಾರ್ಯಕ್ರಮ ಆಯೋಜಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ.

ನಮ್ಮದು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಪರಂಪರೆಯೇ ಹೊರತು ದರ್ಬಾರ್ ಪರಂಪರೆ ಅಲ್ಲ. ಹೀಗಾಗಿ ದಸರಾ ದರ್ಬಾರ್ ಸಂಘಟಿಸುವ ಯಾವ ಅವಶ್ಯಕತೆಯೂ ಇಲ್ಲ ಎಂದು ತಿಳಿಸಿದ್ದಾರೆ.

ಆಡಂಬರ, ಬಂಗಾರದ ಕಿರೀಟ ಧರಿಸುವುದು, ಎತ್ತರದಲ್ಲಿ ಕೂರುವುದು, ಅಡ್ಡಪಲ್ಲಕ್ಕಿಯಲ್ಲಿ ಮೆರೆಯುವುದು ನಮ್ಮ ಪರಂಪರೆ ಅಲ್ಲ. ನಮ್ಮದು ಸರಳ, ಜ್ಞಾನವೇ ರತ್ನ ಎನ್ನುವ, ಎನಗಿಂತ ಕಿರಿಯರಿಲ್ಲವೆನ್ನುವ, ತತ್ವವನ್ನು ಮೆರೆಸುವ ಪರಂಪರೆ ಎಂದು ಹೇಳಿದ್ದಾರೆ. ಬಸವಕಲ್ಯಾಣಕ್ಕೆ ಎಲ್ಲರಿಗೂ ಸ್ವಾಗತವಿದೆ. ಆದರೆ, ಈ ನೆಲದ ಸಂಸ್ಕೃತಿ ಹಾಗೂ ಪರಂಪರೆಗೆ ಚ್ಯುತಿ ಉಂಟಾಗುವಂತಹ ಕಾರ್ಯಕ್ರಮ ಸಂಘಟಿಸುವುದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಸಂಘಟಕರು ಕೂಡಲೇ ದಸರಾ ದರ್ಬಾರ್ ಕೈಬಿಡಬೇಕು. ಇಲ್ಲವಾದಲ್ಲಿ ಬಸವ ಭಕ್ತರ ತೀವ್ರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

### ಪದಾಧಿಕಾರಿಗಳ ಸಭೆಯಲ್ಲಿ ಕರವೇ ಜಿಲ್ಲಾ ಅಧ್ಯಕ್ಷ ಸೋಮನಾಥ ಮುಧೋಳ ಹೇಳಿಕೆ

## ಖಾಸಗಿ ಶಾಲಾ, ಕಾಲೇಜು ದುಬಾರಿ ಶುಲ್ಕದ ವಿರುದ್ಧ ಹೋರಾಟ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಆ.10:– ದುಬಾರಿ ಶುಲ್ಕ ಪಡೆಯುತ್ತಿರುವ ಜಿಲ್ಲೆಯ ಖಾಸಗಿ ಶಾಲಾ, ಕಾಲೇಜುಗಳ ವಿರುದ್ಧ ಬರುವ ದಿನಗಳಲ್ಲಿ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಅಧ್ಯಕ್ಷ ಸೋಮನಾಥ ಮುಧೋಳ ಹೇಳಿದರು.




ನಗರದ ಹೋಟೆಲ್ ಕೃಷ್ಣದರ್ಶಿನಿ ಸಭಾಂಗಣದಲ್ಲಿ ಭಾನುವಾರ ನಡೆದ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಅದಾಗಿಯೂ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಮೌನ ವಹಿಸಿದ್ದಾರೆ ಎಂದು ಆಪಾದಿಸಿದರು.

ವೇದಿಕೆಯನ್ನು ಬೇರುಮಟ್ಟದಿಂದ ಇನ್ನಷ್ಟು ಬಲಪಡಿಸಲು ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಮೊದಲ ಹಂತದಲ್ಲಿ ತಲಾ 25 ಗ್ರಾಮ ಘಟಕಗಳನ್ನು ರಚಿಸಬೇಕು ಎಂದು ತಾಲ್ಲೂಕು ಅಧ್ಯಕ್ಷರಿಗೆ ಸಲಹೆ ನೀಡಿದರು.

ಸೆಪ್ಟೆಂಬರ್ 1 ರಿಂದ ಜಿಲ್ಲೆಯಲ್ಲಿ ವೇದಿಕೆಯ ಕಾರ್ಯಕರ್ತರ ಸಂಪರ್ಕ ಅಭಿಯಾನ ಹಾಗೂ 'ಕರವೇಗೆ ಸೇರಲು ಮುಂದಾಗಿ ಕನ್ನಡ ಉಳಿಸಲು ಕೈಜೋಡಿಸಿ' ಅಭಿಯಾನ ಪ್ರಾರಂಭಿಸಬೇಕು ಎಂದು ಹೇಳಿದರು. ವೇದಿಕೆಯ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಸೋಮಶೇಖರ ಸಜ್ಜನ್, ವಿವೇಕ್ ನಿರ್ಮಳೆ, ನಾಗಯ್ಯ ಸ್ವಾಮಿ, ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಗೌಡ, ಬೀದರ್ ತಾಲ್ಲೂಕು ಅಧ್ಯಕ್ಷ ವೀರಶೆಟ್ಟಿ ಗೌಸಪುರೆ, ಭಾಲ್ಕಿ ತಾಲ್ಲೂಕು ಅಧ್ಯಕ್ಷ ಬಂಡೆಪ್ಪ ಜಿ. ಕರಸಣ್ಣ, ಹುಮನಾಬಾದ್ ತಾಲ್ಲೂಕು ಅಧ್ಯಕ್ಷ ವೀರೇಶ್ ರೆಡ್ಡಿ, ಔರಾದ್ ತಾಲ್ಲೂಕು ಅಧ್ಯಕ್ಷ ಅನಿಲ್ ಹೇಡೆ, ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ಗಣೇಶ ಸಾತಣೆ ಮತ್ತಿತರರು ಇದ್ದರು.

## ರಾಜ್ಯ ರೈತ ಸಂಘ ಹಸಿರು ಸೇನೆಗೆ ಪಧಾದಿಕಾರಿಗಳ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಸೇಡಂ.ಆ.11. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸೇಡಂ ತಾಲೂಕಿನ ನೂತನ ಪದಾಧಿಕಾರಿಗಳ ನೇಮಕವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜಿಲ್ಲಾಧ್ಯಕ್ಷ ಮಲ್ಲನಗೌಡ ಪಾಟೀಲ್ ರಾಜ್ಯ ಮಹಿಳಾ ಸಂಚಾಲಕಿ ಶ್ರೀಮತಿ ದೇವಕ್ಕಿ ಜಿಲ್ಲೆ ಮಹಿಳಾ ಸಂಚಾಲಕಿ ಶ್ರೀಮತಿ ಶ್ರೀದೇವಿ ನೈತೃತ್ವದಲ್ಲಿ ಪಟ್ಟಣದ ಸರ್ಕಿಟ್ ಹೌಸ್ ನಲ್ಲಿ ತಾಲೂಕ ಅಧ್ಯಕ್ಷರಾಗಿ ಅನಿಲ್ ಪೊಟೇಲ, ತಾಲೂಕು ಉಪಾಧ್ಯಕ್ಷರಾದ ಇಮ್ರಾನ್ ಶೇಕ್ ಅವರನ್ನು ನೇಮಕ ಮಾಡಿ ಅಭಿನಂದಿಸಿ ಮಾತನಾಡಿದರು. ಈ ವೇಳೆಯಲ್ಲಿ ತಾಲೂಕ ಕಾರ್ಯಧ್ಯಕ್ಷ ಸಾಬಪ್ಪ ಅಬಾಗಲ್ ತಾಲೂಕ ಕಾರ್ಯದರ್ಶಿಯಾಗಿ ನರಸಪ್ಪ ಕಿಷ್ಟಪುರ್ ತಾಲೂಕು ಪ್ರಧಾನ ಕಾರ್ಯದರ್ಶಿ ಮಹೇಂದ್ರ ರೆಡ್ಡಿ ತಾಲೂಕ ಸಂಘಟನಾ ಕಾರ್ಯದರ್ಶಿ ಅಶೋಕ್ ಸೇಡಂ ತಾಲೂಕ ಕರ್ಜನ್ನಿ ಮೈ ಪಲ್ ತಾಲೂಕು ಮಹಿಳಾ ಘಟಕ ಅಧ್ಯಕ್ಷ ಅನಿತಾ ಮುಧೋಳ್ ಮುಧೋಳ ಹೋಬಳಿ ಅಧ್ಯಕ್ಷರಾದ ಭೀಮ ಶಂಕರ್ ಹುಬ್ಬಳ್ಳಿ ಉಪಾಧ್ಯಕ್ಷರ ಕಾಶಪ್ಪ ಮೆದಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಮೌಲ್ಯಾಮಾಪನ ಪರೀಕ್ಷೆಗೆ ಹಾಜರಾದ 500ಕ್ಕೂ ಹೆಚ್ಚಿನ ಅಭ್ಯರ್ಥಿಗಳು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಆ.11-ನಿಪುಣ ಕರ್ನಾಟಕ ಅಡಿಯಲ್ಲಿ ಸ್ಟೆಮ್ ಅಭ್ಯರ್ಥಿಗಳಿಗೆ ಶನಿವಾರ ಕಲಬುರಗಿ-ಶಹಾಬಾದ ರಸ್ತೆಯ ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಸಂಸ್ಥೆಯಲ್ಲಿ ಸೈಕೋಮೆಟ್ರಿಕ್ ಅಸೆಸ್ಮೆಂಟ್ ಮತ್ತು ಟೆಕ್ನಿಕಲ್ ಅಸೆಸ್ಮೆಂಟ್ ಆನ್‌ಲೈನ್ ಮೌಲ್ಯಮಾಪನ ಪರೀಕ್ಷೆ ಯಶಸ್ವಿಯಾಗಿ ನಡೆದಿದ್ದು, ಸುಮಾರು 500 ಕ್ಕೂ ಹೆಚ್ಚಿನ ಅಭ್ಯರ್ಥಿಗಳು ಭಾಗವಹಿಸಿದ್ದರು.



ರಾಜ್ಯದ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ ಪದವೀಧರರಲ್ಲಿ ಹೆಚ್ಚುತ್ತಿರುವ ಉದ್ಯೋಗಾವಕಾಶದ ಅಂತರವನ್ನು ಪರಿಹರಿಸಲು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಈ ಪರೀ-ಕ್ಷೆ ನಡೆಸಲಾಗಿದ್ದು, ಅನ್‌ಸ್ಟಾಪ್ ಸಂಸ್ಥೆ ಸಂಪೂರ್ಣ ಪರೀಕ್ಷೆಯ ನಿರ್ವಹಣೆ ಕೈಗೊಂಡಿತ್ತು.

ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ.ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರ ವಿಶೇಷ ಕಾಳಜಿಯಿಂದ ಕಳೆದ ಏಪ್ರಿಲ್ ಮಾಹೆಯಲ್ಲಿ ಕಲಬುರಗಿಯಲ್ಲಿ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ಭೌತಿಕವಾಗಿ ಹಾಜರಾದ 10 ಸಾವಿರ ಅಭ್ಯರ್ಥಿಗಳ ಪೈಕಿ ಆಯ್ದ 2,500 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಪದವೀಧರರನ್ನು ಗುರಿಯಾಗಿಸಿ ರಾಜ್ಯದಲ್ಲಿಯೆ ಪ್ರಾಯೋಗಿಕವಾಗಿ ಕಲಬುರಗಿಯಲ್ಲಿ ಮೊದಲ ಬಾರಿಗೆ ಈ ಮೌಲ್ಯಾಮಾಪನ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆ ನಂತರ ಅವರ ಕೌಶಲ್ಯ ಕೊರತೆಯನ್ನು ಪತ್ತೆ ಹಚ್ಚಿ ಅಗತ್ಯ ಕೌಶಲ್ಯ ನೀಡಿ ಅವರನ್ನು ಉದ್ಯೋಗಕ್ಕೆ ಸಿದ್ಧರನ್ನಾಗಿ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ.

ಸಾಂಪ್ರದಾಯಿಕ ಕೌಶಲ್ಯ ಕಾರ್ಯಕ್ರಮಗಳಿಗಿಂತ ಭಿನ್ನವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಹತೆ, ಸಂವಹನ, ಡಿಜಿಟಲ್ ಸಾಕ್ಷರತೆ ಮತ್ತು ನಡವಳಿಕೆಯ ಸಿದ್ಧತೆಯನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ 90 ನಿಮಿಷಗಳ ಕಾಲ ಮೌಲ್ಯಮಾಪನ ಮಾಡಲಾಗುತ್ತದೆ. ಈ ಉಪಕ್ರಮವು ವಿದ್ಯಾರ್ಥಿಗಳಿಗೆ ಫಲಿತಾಂಶಗಳನ್ನು ಸುಧಾರಿಸುವುದಲ್ಲದೆ, ಉದ್ಯೋಗದಾತರಿಗೆ ಉದ್ಯೋಗ-ಸಿದ್ಧ ಅಭ್ಯರ್ಥಿಗಳನ್ನು ಸಜ್ಜುಗೊಳಿಸುತ್ತದೆ ಮತ್ತು ಶಿಕ್ಷಣ ಸಂಸ್ಥೆಗಳು ನಿಜವಾದ ಉದ್ಯಮದ ಬೇಡಿಕೆಗಳೊಂದಿಗೆ ತರಬೇತಿಯನ್ನು ಹೊಂದಿಸಲು ಸಹಾಯ ಮಾಡುತ್ತದೆ.

ಆಗಸ್ಟ್ 10 ರಂದು ಸಹ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆ ವರೆಗೆ ನಾಲ್ಕು ಸ್ಲಾಟ್ ಗಳಲ್ಲಿ ಮೌಲ್ಯಾಮಾಪನ ಪರೀಕ್ಷೆ ನಡೆಯಲಿದ್ದು, ಬಿ.ಎಸ್.ಸಿ, ಎಂ.ಸಿ.ಎ, ಬಿ.ಕಾಂ, ಇಂಜಿನೀಯರಿಂಗ್, ಡಿಪ್ಲೋಮಾ ಪಧವಿಧರರು ಭಾಗವಹಿಸಲು https://unstop.com/o/xvCVUWP/?ref=KalaburgiAssessment, https://unstop.com, www.karnatakadigital.in ಅಂತರ್ಜಾಲದ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ನೊಂದಣಿ ಮಾಡಿಕೊಳ್ಳದವರು ಸಹ ನೇರವಾಗಿ ಸಂಸ್ಥೆಗೆ ಅವಧಿಗೆ ಮುನ್ನ ಬಂದು ನೋಂದಣಿ ಮಾಡಿಕೊಂಡು ಪರೀಕ್ಷೆಯಲ್ಲಿ ಹಾಜರಾಗಬಹುದಾಗಿದೆ.

**ಡಿ.ಸಿ., ಮೇಯರ್ ಭೇಟಿ:** ಶನಿವಾರ ಪರೀಕ್ಷೆ ನಡೆದ ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಸಂಸ್ಥೆಗೆ ಜಿಲ್ಲಾಧಿಕಾರಿ ಬಿ.ಫೌ-ಜಿಯಾ ತರನ್ನುಮ್, ಕಲಬುರಗಿ ಮಹಾನಗರ ಪಾಲಿಕೆಯ ಮೇಯರ್ ವರ್ಷಾ ಜಾನೆ ಭೇಟಿ ನೀಡಿ ಪರೀಕ್ಷೆ ಪ್ರಕ್ರಿಯೆ ವೀಕ್ಷಿಸಿದರು. ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗುಬಾಯಿ, ಪ್ರಮುಖರಾದ ಡಾ.ಕಿರಣ ದೇಶಮುಖ, ಶಿಬಾ ಮೆಹತಾ ಸೇರಿದಂತೆ ಮುಂತಾದವರು ಇದ್ದರು.

ಇನ್ನು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತ ಪ್ರಭುರೆಡ್ಡಿ, ಕಲಬುರಗಿ ತಹಶೀಲ್ದಾರ ಆನಂದಶೀಲ ಅವರು ಪರೀಕ್ಷೆ ಸೂಸೂತ್ರವಾಗಿ ನಡೆಯಲು ಮಾರ್ಗದರ್ಶನ ನೀಡುತ್ತಾ ಪರೀಕ್ಷೆಯ ಸಂಪೂರ್ಣ ಮೇಲುಸ್ತುವಾರಿ ವಹಿಸಿದ್ದರು.

# ಪ್ರಜಾಪ್ರಭುತ್ವದಲ್ಲಿ ಜನರ ವಿಶ್ವಾಸ ಕಳೆದುಕೊಳ್ಳಬಾರದು; ಸಚಿವ ಶರಣಪ್ರಕಾಶ ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಚಿಂಚೋಳಿ:ಅ.11:ಪ್ರಜಾಪ್ರಭುತ್ವದಲ್ಲಿ ಜನರ ವಿಶ್ವಾಸವನ್ನು ಕಳೆದುಕೊಳ್ಳಬಾರದು, ಅವರು ಭರವಸೆಯಿಟ್ಟು ಚಲಾಯಿಸಿದ ಅಮೂಲ್ಯವಾದ ಮತಗಳಿಂದ ಅಧಿಕಾರಕ್ಕೆ ಬಂದ ಜನಪ್ರತಿನಿಧಿಗಳು ಅವರ ಸೇವೆಯನ್ನು ನಿಷ್ಠೆಯಿಂದ ಮಾಡಬೇಕಾಗಿರುವುದು ಪ್ರತಿಯೊಬ್ಬ ಜನಪ್ರತಿನಿಧಿಯ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ ಎಂದರು.



ತಾಲ್ಲೂಕಿನ ಸೇಡಂ ಮತಕ್ಷೇತ್ರದ ಗರಗಪಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಗೆ ಒಳಪಡುವ ಬೇಡಕಪಳ್ಳಿ ಗ್ರಾಮದಲ್ಲಿ ಮೆಗಾ ಮ್ಯಾಕ್ರೋ ಯೋಜನೆಯಡಿಯಲ್ಲಿ ಪೆಂಚನಪಳ್ಳಿ ಗ್ರಾಮದಿಂದ ಬೇಡಕಪಳ್ಳಿ ಗ್ರಾಮದವರೆಗಿನ 2.26 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಯ ಅಡಿಗಲ್ಲು ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಬಡವರ ಹಿಂದುಳಿದವರ ಏಳ್ಗೆಗೆ ಶ್ರಮಿಸುವ ಸರ್ಕಾರ ಯಾವುದಾದರೂ ಇದ್ದರೆ ಅದು ನಮ್ಮ ಕಾಂಗ್ರೆಸ್ ಸರ್ಕಾರ ಮಾತ್ರ. ನಾವು ನುಡಿದಂತೆ ನಡೆದಿದ್ದೇವೆ. ಈ ಹಿಂದೆ ನಾವು ಘೋಷಣೆ ಮಾಡಿದ್ದ ಹಾಗೆ ಪಂಚ ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ. ಅಲ್ಲದೇ,

ಕೆ.ಕೆ.ಆರ್ ಡಿ.ಬಿ ಗೆ ಸುಮಾರು 5 ಸಾವಿರ ಕೋಟಿ ಹಣವನ್ನು ಕಳೆದ 2 ವರ್ಷದಿಂದ ನೀಡುತ್ತಿರುವುದರಿಂದಲೇ ಸಾಕಷ್ಟು ಅಭಿವೃದ್ಧಿ ಕೆಲಸಗಳು ಸಾಗುತ್ತಿವೆ. ಸೇಡಂ ತಾಲ್ಲೂಕನ್ನು ಹೊರತುಪಡಿಸಿ ಚಿಂಚೋಳಿ ತಾಲ್ಲೂಕಿನಲ್ಲಿರುವ

ನನ್ನ ವಿಧಾನ ಸಭಾ ಮತಕ್ಷೇತ್ರಕ್ಕೆ ಒಳಪಡುವ ಸರಿ ಸುಮಾರು 32-35 ಹಳ್ಳಿಗಳಲ್ಲಿ ಉತ್ತಮ ಗುಣಮಟ್ಟದ ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕೆಲವೊಂದು ಗ್ರಾಮಗಳಲ್ಲಿ ಹಳ್ಳಕೊಳ್ಳಗಳು ಬಂದು ಸಂಪರ್ಕ ಕಳೆದುಕೊಳ್ಳುತ್ತಿದ್ದಂತಹ ಸ್ಥಳಗಳಲ್ಲಿ ಉತ್ತಮವಾದ ಬ್ರಿಡ್ಜ್ ಕಮ್ ಬ್ಯಾರೇಜ್ ಗಳ ನಿರ್ಮಾಣವಾಗಿವೆ. ಇದ್ಯಾವ ಕೆಲಸಗಳು ಹೋಗಳಿಸಿಕೊಳ್ಳಲು ಮತ್ತು ಜನಪ್ರಿಯತೆಯನ್ನು ಗಳಿಸಲು ಮಾಡಿದ್ದಲ್ಲ ಇವುಗಳನ್ನು ಮಾಡುವುದು ನನ್ನ ಆದ್ಯ ಕರ್ತವ್ಯ ಅದಕ್ಕಾಗಿಯೇ ಜನ ನನ್ನ ಮೇಲೆ ಭರವಸೆಯನ್ನಿಟ್ಟು ಜನ ಸೇವೆಗಾಗಿ ಚುನಾಯಿಸಿದ್ದಾರೆ ಎಂದರು. ಕಾರ್ಯಕ್ರಮದ ಕುರಿತು ಗ್ರಾಮದ ಹಿರಿಯ ಮುಖಂಡ ಮಹಾದೇವಪ್ಪ ಪೊಲೀಸ್ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಶರಣಪ್ರಕಾಶ ಪಾಟೀಲ್ ರವರು ಮೊದಲ ಬಾರಿಗೆ ಚುನಾಯಿತರಾದಾಗ ನಮ್ಮ ಗ್ರಾಮಕ್ಕೆ ಸುಸಜ್ಜಿತವಾದ ರಸ್ತೆಯನ್ನು ನಿರ್ಮಿಸಿದ್ದರು. ಕಳೆದ ಬಾರಿ ಅವರು ಅಧಿಕಾರದಲ್ಲಿಲ್ಲದಿರುವಾಗ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಸಂಚಾರಕ್ಕೆ ಕಂಟಕವಾಗಿತ್ತು. ಆದರೇ ಈಗ ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಮತ್ತೊಮ್ಮೆ ರಸ್ತೆಯನ್ನು ನಿರ್ಮಿಸುತ್ತಿದ್ದಾರೆ. ಶರಣ ಪ್ರಕಾಶ ಪಾಟೀಲ್ ರು ಅಧಿಕಾರದಲ್ಲಿರಲಿ, ಇಲ್ಲದೆ ಇರಲಿ ಆದರೇ ಜನಸೇವೆ ಅಂತ ಬಂದಾಗ ಹಗಲಿರುಳೆನ್ನದೆ ಸಮಯ ಕೊಟ್ಟು, ಸರಿಯಾಗಿ ಸ್ಪಂದಿಸುತ್ತಾರೆ. ಇಂತಹ ಅಪರೂಪದ ಅಭಿವೃದ್ಧಿಯ ಹರಿಕಾರರಾದಂತಹ ಜನಪ್ರತಿನಿಧಿ ನಮಗೆ ಸಿಕ್ಕಿರುವುದು ತುಂಬಾ ಹೆಮ್ಮೆಯಿಂದ ಸಂತಸ ಪಡುವ ವಿಷಯ ಎಂದರು. ಬಳಿಕ ಹಿರಿಯ ಮುಖಂಡರಾದ ಬಾಬುರಾವ ಪಾಟೀಲ್ ಮಾತನಾಡಿ ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು,

ಡಾ.ಮಲ್ಲಿಕಾರ್ಜುನ ಖರ್ಗೆಯವರ ಹಾಗೂ ಸಚಿವ ಶರಣಪ್ರಕಾಶ ಪಾಟೀಲ್ ರವರ ಅಭಿವೃದ್ಧಿ ಕಾರ್ಯಗಳ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಮದ ನೂರಾರು ಅಭಿಮಾನಿಗಳು ಸಚಿವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಬಸವರಾಜ ಪಾಟೀಲ ಉಡಗಿ, ವಿಲಾಸ ಗೌತಮ ನೀಡಗುಂದಾ, ಲಿಂಗಶೆಟ್ಟಿ ತಟ್ಟೆಪಲ್ಲಿ, ಗರಗಪಳ್ಳಿ ಗ್ರಾ.ಪಂ. ಅಧ್ಯಕ್ಷೆ ಪಾರ್ವತಿ ಗುಂಡಪ್ಪ, ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ, ಪುರಸಭೆ ಅಧ್ಯಕ್ಷ ಆನಂದ ಟೈಗರ್, ಜಗನ್ನಾಥ ಚಿಂತಪಳ್ಳಿ, ಸೇಡಂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣ ರೆಡ್ಡಿ ಪಾಟೀಲ್, ಗೋಪಾಲ ರೆಡ್ಡಿ, ಚಂದ್ರಶೆಟ್ಟಿ ನರಸಿಂಹರೆಡ್ಡಿ, ರಾಜು ಉಪ್ಪಿನ್, ಸೋಮಶೇಖರ ತಳವಾರ, ಶಿವಕುಮಾರ ಸಜ್ಜನ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸಚಿವರ ಅಭಿಮಾನಿಗಳು, ಪಕ್ಷದ ಮುಖಂಡರುಗಳು, ಕಾರ್ಯಕರ್ತರು ಭಾಗಿಯಾಗಿದ್ದರು. ಕಾರ್ಯಕ್ರಮವನ್ನು ಉದಯ ಮಯೂರಭೂಮಿ ನಿರೂಪಿಸಿದರೆ, ಗೋಪಾಲ ರಾಂಪುರೆ ಸ್ವಾಗತಿಸಿದರು, ಶಿವರಾಜ ತಳವಾರ ವಂದಿಸಿದರು.

# ಕೇಂದ್ರ ಕಾರಾಗೃಹದಲ್ಲಿ ರಕ್ಷಾಬಂಧನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಆ.10: ಕಲಬುರಗಿ ಕೇಂದ್ರ ಕಾರಾಗೃಹದ ಒಳಾವರಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಕಲಬುರಗಿ ಶಾಖೆಯವರು ರಕ್ಷಾ ಬಂಧನ ಹಬ್ಬದ ಪ್ರಯುಕ್ತ ಬಂದಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ರಾಖಿ ಕಟ್ಟುವುದರ ಜೊತೆಗೆ ಸಿಹಿ ಹಂಚುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಬ್ರಹ್ಮಕುಮಾರಿ ದಾನೇಶ್ವರಿ ಅಕ್ಕನವರು ರಕ್ಷಾಬಂಧನ ರಹಸ್ಯದ ಬಗ್ಗೆ ವಿವರವಾಗಿ ತಿಳಿಸಿದರು. ಇನ್ನೋರ್ವ ಅತಿಥಿಗಳಾಗಿ ಆಗಮಿಸಿದ ಸವಿತಾ ಅಕ್ಕನವರು ಈಶ್ವರಿಯ ಸಂದೇಶವನ್ನು ಕುರಿತು ಬಂದಿಗಳಿಗೆ ತಿಳಿ ಹೇಳಿದರು ಹಾಗೂ ಅದರಂತೆ ತಾವುಗಳು ಜೀವನದಲ್ಲಿ ಅಳವಡಿಸಿಕೊಳ್ಳಲು ತಿಳಿಸಿದರು.

ಇನ್ನೋರ್ವ ಅತಿಥಿಗಳಾದ ಬ್ರಹ್ಮಕುಮಾರಿ ರಾಗಿಣಿ ಅಕ್ಕನವರು ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿಧ್ಯಾಲಯದ ಸಂಸ್ಥೆಯ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮುಖ್ಯ ಅಧೀಕ್ಷಕರಾದ ಡಾ.ಅನಿತಾ ಆರ್. ರವರು ಮಾತನಾಡುತ್ತಾ, ಪ್ರತಿಯೊಬ್ಬರು ಭಾತೃತ್ವದ ಬೆಸುಗೆಯ ಕೊಂಡಿಂ-ಯಾಗಿ ನಿರಂತರವಾಗಿ ಯಾವುದೇ ಪ್ರಲೋಭಕ್ಕೆ ಆಸ್ಪದ ಕೊಡದ ರೀತಿಯಲ್ಲಿ ಜೀವನವನ್ನು ನಡೆಸಿ ಬೇರೆಯವರಿಗೆ ಕೂಡ ಮಾದರಿಯಾಗಿ ಬಾಳಿ ಎನ್ನುವ ಮಾತನ್ನು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಜೈಲಗಳಾದ ಸುನಂದ. ವಿ., ಶ್ಯಾಮ ಬಿದರಿ, ಶ್ರೀಮಂತಗೌಡ ಪಾಟೀಲ್ ಹಾಗೂ ಸಂಸ್ಥೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿದರು. ಅಧೀಕಕ್ಷ ಎಂ.ಹೆಚ್. ಆಶೇಖಾನ್ ಸ್ವಾಗತಿಸಿದರು. ಶಿಕ್ಷಕ ನಾಗರಾಜ ಮೂಲಗೆ ನಿರೂಪಿಸಿದರು. ಸಹಾಯಕ ಅಧೀಕ್ಷಕ ಚನ್ನಪ್ಪ ಯಟಗಾರ ವಂದನಾರ್ಪಣೆ ಮಾಡಿದರು.

# ಬೈಕ್ ಕಳ್ಳನ ಬಂಧನ : 10 ಬೈಕ್ ವಶ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಆ.11: ನಗರದ ವಿವಿಧೆಡೆ ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ರಾಘವೇಂದ್ರ ನಗರ ಠಾಣೆ ಪೊಲೀಸರು, ಆತನಿಂದ 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



ಬಂಡಿಯಲ್ಲಿ ಆಲೂಬಾತ್ ಮಾರುತ್ತಿದ್ದ ಮೋಮಿನಪುರದ ಮೊಹಮ್ಮದ್ ಸಾದಿಕ್ (22) ಬಂಧಿತ ಆರೋಪಿ.

ಮಿಸ್ಬಾನಗರದ ನಜರೋದ್ದೀನ ಮುಲ್ಲಾ ಅವರು ನೀಡಿದ ಬೈಕ್ ಕಳ್ಳತನದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಅಂದಾಜು 5 ಲಕ್ಷ ಮೌಲ್ಯದ ವಿವಿಧ ಕಂಪನಿಯ 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಪ್ರಕರಣದ ಪತ್ತೆಗೆ ಡಿಸಿಪಿಗಳಾದ ಕನ್ನಿಕಾ ಸಿಕ್ರಿವಾಲ್, ಪ್ರವೀಣ್ ನಾಯಕ್ ಅವರ ಮಾರ್ಗದರ್ಶನದಲ್ಲಿ ಎಸಿಪಿ ಶರಣಬಸಪ್ಪ ಸುಬೇದಾರ ನೇತೃತ್ವದಲ್ಲಿ ಪ್ರಭಾರ ಪಿಐ ದಿಲೀಪಕುಮಾರ ಸಾಗರ ಮತ್ತು ಪಿಎಸ್ಐ ಸುಭಾಶ್ಚಂದ್ರ, ಎಎಸ್ಐ ಮಲ್ಲಿಕಾರ್ಜುನ ಜಾನೆ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳಾದ ಮಲ್ಲನಗೌಡ, ರಾಜಕುಮಾರ, ಕಾನ್‌ಸ್ಟೆಬಲ್‌ಗಳಾದ ಉಮೇಶ, ಅರೇಶ, ಆತ್ಮಕುಮಾರ, ಶರಣಬಸವ, ಕರಣಕುಮಾರ, ಬಸವರಾಜ, ತುಕಾರಾಮ, ಎಪಿಸಿ ಜಾಕೀರ ಅವರನ್ನೊಳಗೊಂಡ ತಂಡ ಆರೋಪಿಯನ್ನು ಬಂಧಿಸಿದೆ.

ಯಶಸ್ವಿ ಕಾರ್ಯಾಚರಣೆ ನಡೆಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ.ಶ್ಲಾಘಿಸಿದ್ದಾರೆ.

# ಶ್ರಾವಣ ಮಾಸದಲ್ಲಿ ಬರುವ ಪ್ರತಿಯೊಂದು ದಿವಸವೂ ಪವಿತ್ರ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಪ್ರಶಾಂತ ನಗರದ ಶ್ರೀ ಹನುಮಾನ ಮಂದಿರದಲ್ಲಿ ನೂಲಹುಣ್ಣಿಮೆ ನಿಮಿತ್ತ ಋಗ್ವೇದಿ ಹಾಗೂ ಯಜಯುರ್ವೇದಿಗಳ ಶ್ರಾವಣಿ ಕಾರ್ಯಕ್ರಮ ಅರ್ಚಕರಾದ ಗುಂಡಾಚಾರ್ಯ ನರಿಬೋಳ ಅವರ ನೇತೃತ್ವದಲ್ಲಿ ನೆರವೇರಿತು.



ಬೆಳಿಗ್ಗೆ ಪುಣ್ಯಾವಾಚನೆ ಸಪ್ತಋಷಿಗಳ ಪೂಜೆ, ಹೋಮ ಪುರ್ಣಾಹುತಿ ನೆರವೇರಿತು ನಂತರ ಆಗಮಿಸಿದ ವಿಪ್ರಬಾಂಧವರಿಗೆ ಜನಿವಾರ ಧಾರಣೆ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಗುಂಡಾಚಾರ್ಯ ಜೋಶಿ ಮಾತನಾಡುತ್ತ ಶ್ರಾವಣ ಮಾಸದಲ್ಲಿ ಬರುವ ಪ್ರತಿದಿವಸವೂ ಪವಿತ್ರವಾದವುಗಳು ಶ್ರಾವಣಮಾಸದಲ್ಲಿ ಮಾಡುವ ಪೂಜೆ, ಉಪವಾಸ, ಹೋಮ, ರುದ್ರಾಭಿಷೇಕ, ಭಜನೆ ಎಲ್ಲದಕ್ಕೂ ಅನಂತ ಪುಣ್ಯ ದೊರಕುವದು. ಶ್ರಾವಣ ಮಾಸದಲ್ಲಿ ಬರುವ ಶ್ರವಣಾ ನಕ್ಷತ್ರ ದಿವಸ ಜನಿವಾರ ಧಾರಣೆಮಾಡಿ ಋಷಿಗಳಿಗೆ, ಪಿತೃಗಳಿಗೆ ತರ್ಪಣ ಕೊಡುವದು ಪ್ರತಿತಿ. ಕೆಲವರು ಹುಣ್ಣಿಮೆ ದಿವಸ ರಾಕಿ ಕಟ್ಟಬೇಡಿ ಎಂಬುವ ಸುಳ್ಳು ಸುದ್ದಿ ಹಬ್ಬಿಸಿರುವದು ಸರಿಲ್ಲ ಶ್ರಾವಣ ಮಾಸದ ಹುಣ್ಣಿಮೆಗೆ ತನ್ನದೇ ಆದ ಮಹತ್ವ ಇದೆ ಎಂದರು.

ಡಿ ವ್ಹಿ ಕುಲಕರ್ಣಿ, ಶಾಮರಾಮ ಕುಲಕರ್ಣಿ, ಗೋಪಾಲ, ನರಸಿಂಹ ಅಗ್ನಿಹೋತ್ರಿ, ಲಕ್ಷ್ಮಿಕಾಂತದೇಸಾಯಿ, ಗುರುರಾಜ ಬಂಕುರ್, ಭೀಮಾಚಾರ್ಯ ಜೋಶಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ನಿಜವಾದ ಸಂಸ್ಕಾರ ನೀಡುವ ತಾಯಿ ಮೊದಲ ಗುರು:ಮಹಾಲಿಂಗ ದೇವರು

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ನಿಜವಾದ ಸಂಸ್ಕಾರ ನೀಡುವ ತಾಯಿ ಮೊದಲ ಗುರು, ಮಗುವಿನ ಬಾಲ್ಯ ವ್ಯವಸ್ಥೆಯಲ್ಲಿ ನೀಡಿದ ಸಂಸ್ಕಾರ ಕೊನೆಯವರೆಗೂ ಮಗುವನ್ನು ಕಾಪಾಡುತ್ತದೆ ಎಂದು ಹಿರೇಮಠ ಸಂಸ್ಥಾನದ ಮಹಾಲಿಂಗದೇವರು ನುಡಿದರು.



ತಾಲೂಕಿನ ಡಿಗ್ಗಿ ಗ್ರಾಮದ ಮಡಿವಾಳೇಶ್ವರ ದೇವಾಲಯದಲ್ಲಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದ ಮೂರನೇ ದಿನ ಅವರು ಪ್ರವಚನ ನೀಡುತ ಮಾತನಾಡಿದರು.

ನಮ್ಮ ಜೀವನ ಉದ್ಧಾರ ಆಗಬೇಕೆಂದರೆ, ನಮ್ಮ ಬಾಳಲ್ಲಿ ಐದು ಗುರುವಿನ ಮಾರ್ಗದರ್ಶನ ಅತಿ ಅವಶ್ಯಕವಾಗಿರುತ್ತದೆ, ಮೊದಲು ತಾಯಿ ಲಾಲನೆ ಪಾಲನೆ, ಮಾಡುತ್ತ ನೀಡುವ ಪ್ರಾಥಮಿಕ ಶಿಕ್ಷಣ, ನಂತರ ತಂದೆ ಮಗುವಿಗೆ ಸರಿ ತಪ್ಪುಗಳ ಜ್ಞಾನ ನೀಡುವುದು.

ನಂತರ ಮಗುವಿನ ಜ್ಞಾನ ವಿಕಾಸ ಕೇಂದ್ರಗಳಾದ ಶಾಲೆಗಳಲ್ಲಿ ಶಿಕ್ಷಕ ನೀಡುವ ಶೈಕ್ಷಣಿಕ ಜ್ಞಾನ, ಶಿಕ್ಷಣ ಕೇವಲ ಅಂಕಿ ಸಂ-ಖ್ಯೆಯ ಸೀಮಿತವಾಗದೆ ನೈಜ ಜೀವನವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಗುರವಾದವರು ಮಾರ್ಗದರ್ಶನ ಮಾಡಬೇಕು.

ನಾಲ್ಕನೇ ಗುರು ನೈತಿಕ ಗುರು, ನಮ್ಮ ನೈತಿಕತೆ ಬಗ್ಗೆ ನಮಗೆ ಅರಿವಿರಬೇಕು, ನಿಜ ಮಾರ್ಗದಲ್ಲಿ ನಡೆಯಬೇಕು ಎನ್ನುವ ಜ್ಞಾನವನ್ನು ತುಂಬುವ ನೈತಿಕ ಗುರು ನಿಮ್ಮ ಸುತ್ತಮುತ್ತಲಿನ ಸಮಾಜದೊಡನೆ ನಾವು ಹೇಗೆ ಬದುಕಬೇಕು ಎನ್ನುವುದನ್ನು ಕಲಿಸುತ್ತದೆ.

ಕೊನೆಯಲ್ಲಿ ಜೀವನದ ಸಾರ್ಥಕತೆಯನ್ನು ಅರ್ಥ ಮಾಡಿಸಲು, ಆದ್ಯಾತ್ಮಿಕ ಗುರುವಿನ ಮಾತುಗಳು ಅವಶ್ಯಕವಾಗಿರುತ್ತದೆ, ಸತ್ಸಂಗ ಪ್ರವಚನ, ವಚನಗಳು ಹಾಗೂ ಪುಸ್ತಕಗಳ ಮೂಲಕ ಪಡೆದುಕೊಂಡು ನಾವು ಜೀವನನ್ನು ಸಾರ್ಥಕ ಮತ್ತು ಸಮಾಧಾನವಾಗಿ ನಡೆಸಬಹುದು. ಐದು ಗುರುವಿನ ಮಹತ್ವ ತಿಳಿಸಿದರು.

# ಪೊಲೀಸರು ನಿಮ್ಮ ರಕ್ಷಣೆಗಾಗಿ ಕೆಲಸ ಮಾಡುತ್ತಾರೆ: ಪಿ.ಎಸ.ಐ ಆಶಾ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಪೊಲೀಸರು ನಿಮ್ಮ ರಕ್ಷಣೆಗಾಗಿ ಕೆಲಸ ಮಾಡುತ್ತಾರೆ, ನಿಮ್ಮ ಮೇಲೆ ಯಾವುದೇ ದೌರ್ಜನ್ಯ ಅಥವಾ ಅನ್ಯಾಯ ನಡೆದರೆ ತಕ್ಷಣ 112, 108, 100ಕ್ಕೆ ಸಂಪರ್ಕಿಸಿ, ನಿಮ್ಮ ಮನೆಯ ಬಾಗಿಲಿಗೆ ಬಂದು ನ್ಯಾಯ ಒದಗಿಸಿಕೊಡುತ್ತೇವೆ ಎಂದು ಪಿ.ಎಸ್.ಐ ಆಶಾ ರಾಠೋಡ ಅವರು ಹೇಳಿದರು.

ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಅಡಿ ಯಲ್ಲಿ ತಾಲೂಕಿನ ವಿವಿಧ ಹಳ್ಳಿ ಗಳಿಗೆ ಹೋಗಿ ಮನೆ ಮನೆ ಭೇಟಿ ನೀಡಿ ಜನರಿಗೆ ಪೊಲೀಸ ಮತ್ತು ಕಾನೂನಿನ ಮಹತ್ವ ಬಗ್ಗೆ ಹೇಳಿದರು. ಶನಿವಾರ ಅವರು ಕಮಲಗರ್ ಪೊಲೀಸ್ ಠಾಣೆ ವ್ಯಾಪ್ತಿಯಲಿ ್ಲ ಬರುವ ಮದನೂರು, ಖತಗಾವ, ಡೋಣಗಾಂವ, ಪಟ್ಟಣದ ವಿಶ್ವಾಸ ನಗರ ಸೇರಿದಂತೆ ವಿವಿಧ ಹಳ್ಳಿಗಳಿಗೆ ತಮ್ಮ ಸಿಬ್ಬಂದಿಗಳ ಜೊತೆ ತೆರಳಿ ಜಾಗ್ರತಿ ಮೂಡಿಸಿದರು.

# ಹಿರಿಯ ವರದಿಗಾರ ಶಶಿಕಾಂತ ಎಸ್.ಶೆಂಬೆಳ್ಳಿಗೆ ಒಲಿದ "ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪತ್ರಿಕಾ ಭೂಷಣ ಪ್ರಶಸ್ತಿ'

ಮಲ್ಲಮ್ಮ ನುಡಿ ವಾರ್ತೆ

ಬೀದರ:-ಜಿಲ್ಲಾ ಪ್ರಜಾವಾಣಿ ಪತ್ರಿಕೆಯ ಹಿರಿಯ ವರದಿಗಾರ ಶಶಿಕಾಂತ ಎಸ್.ಶೆಂಬೆಳ್ಳಿ ಅವರಿಗೆ ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರ ಮಹಾಶೈವ ಧರ್ಮಪೀಠದಿಂದ ಆ. 9ರಂದು "ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪತ್ರಿಕಾ ಭೂಷಣ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಪ್ರಶಸ್ತಿಯ ಮೊತ್ತ ರೂ. 51 ಸಾವಿರ ನಗದು, ಸ್ಮರಣಿಕೆ ನೀಡಿ ಗೌರವಿಸಲಾಯಿತು.




ಮಹಾಶಿವ ಗುರುಪೌರ್ಣಿಮೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಧರ್ಮಪೀಠದ ಮುಖ್ಯಸ್ಥರಾದ ಮುಕ್ಕಣ್ಣ ಕರಿಗಾರ ಹಾಗೂ ಅವರ ಸಂಸ್ಥಾನದ ಪ್ರಮುಖರು ಈ ಪ್ರಶಸ್ತಿ ಪ್ರದಾನ ಮಾಡಿದರು.

ಇವರ ಜೊತೆಗೆ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಸಾಹಿತ್ಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಧರ್ಮಪೀಠ ನೀಡಿರುವ ಈ ಪ್ರಶಸ್ತಿಯನ್ನು ಶಶಿಕಾಂತ ಶೆಂಬೆಳ್ಳಿಯವರು ತಮ್ಮ ಅಜ್ಜ-ಅಜ್ಜಿಯರಾದ ಸಿದ್ರಾಮಪ್ಪ ದಿ. ಗುಂಡಮ್ಮಾ, ದಿ. ವೀರಪ್ಪ ಕಾಶಮ್ಮ, ತಂದೆ ದಿ. ಸಂಗ್ರಾಮಪ್ಪ ತಾಯಿ ಸುಲೋಚನಾ, ಮಡದಿ ಮಕ್ಕಳು ಹಾಗೂ ಡೆಕ್ಕನ್ ಹೆರಾಲ್ಡ್ ಮಾಲಿಕರಾದ ಕೆ.ಎನ್.ತಿಲಕ್‌ಕುಮಾರ, ಕೆ.ಎನ್ ಶಾಂತಕುಮಾರ, ಪತ್ರಿಕೋದ್ಯಮದ ಗುರುಗಳಾದ ದೇವು ಪತ್ತಾರ್, ಹೃಷಿಕೇಶ ಬಹಾದ್ದೂರ ದೇಸಾಯಿ, ಅಕ್ಕ ವೀಣಾ ದೇಸಾಯಿ, ಹಾಗೂ ಹಿತೈಷಿಗಳಿಗೆ ಈ ಪ್ರಶಸ್ತಿಯನ್ನು ಸಮರ್ಪಣೆಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಭವಿಷ್ಯದಲ್ಲಿಯೂ ಧರ್ಮಮಾರ್ಗ, ನ್ಯಾಯ ಮಾರ್ಗದಲ್ಲಿ ನಡೆಯಲು ಇನ್ನಷ್ಟು ಶಕ್ತಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಶಶಿಕಾಂತ ಎಸ್.ಶೆಂಬೆಳ್ಳಿ ತಿಳಿಸಿದ್ದಾರೆ.

# ಅಂಗಾರಕ ಸಂಕಷ್ಟ ಚತುರ್ಥಿ

ಮಲ್ಲಮ್ಮ ನುಡಿ ವಾರ್ತೆ

ಹುಬ್ಬಳ್ಳಿ,ಆ11: ಇದೇ ದಿ. 12 ಮಂಗಳವಾರ ಅಂಗಾರಕ ಸಂಕಷ್ಟ ಚತುರ್ಥಿ ನಿಮಿತ್ತ ನಗರದ ದಾಜಿಬಾನಪೇಟ, ಶ್ರೀ ಗಣಪತಿ ದೇವಸ್ಥಾನದಲ್ಲಿ ಪ್ರಾತ:ಕಾಲ 7 ಘಂಟೆಗೆ ಶ್ರೀ ಮಹಾಗಣಪತಿಗೆ ಪಂಚಾಮೃತ ಅಭಿಷೇಕ, ಅಲಂಕಾರ ಹಾಗೂ ಮಹಾಮಂಗಳಾರತಿ ಜರುಗುವುದು. ರಾತ್ರಿ 8-30ಕ್ಕೆ ಪಾಲಕಿ ಉತ್ಸವ ಜರುಗುವದು. 9-08 ಕ್ಕೆ ಚಂದ್ರೋದಯ ಮಹಾ ಮಂಗಳಾರತಿ ನಂತರ ಪ್ರಸಾದ ವಿತರಣೆ ಜರುಗುವದು.



# ಸೈಬರ್ ವಂಚನೆ 45 ಸಾವಿರ ಕಳೆದುಕೊಂಡ ಹಿರಿಯ ಸಹಾಯಕಿ

ಬೆಂಗಳೂರು,ಆ.11-ಸೈಬರ್ ವಂಚನೆಯಿಂದ ಪಂಚಾಯತ್ ರಾಜ್ ಇಲಾಖೆಯ ಹಿರಿಯ ಸಹಾಯಕಿ 45 ಸಾವಿರ ರೂ ಕಳೆದುಕೊಂಡು ವಿಧಾನಸೌಧ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಹಣ ಕಳೆದುಕೊಂಡ ಹಿರಿಯ ಸಹಾಯಕಿ ಹೇಮಲತಾ ನೀಡಿರುವ ದೂರಿನ ಅನ್ವಯ ಸೋನುಕುಮಾರ್ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕಳೆದ ಆ. 6ರಂದು ಅಧೀನ ಕಾರ್ಯದರ್ಶಿಗಳ ವಾಟ್ಸ್‌ಆಪ್‌ನಿಂದ 45 ಸಾವಿರ ರೂ ಅವಶ್ಯಕತೆ ಇದೆ ಎಂದು ಸಂದೇಶ ಬಂದಿತ್ತು. ಕೂಡಲೇ ಹೇಮಲತಾ ಸಂದೇಶದಲ್ಲಿದ್ದ ನಂಬರ್‌ಗೆ ಗೂಗಲ್ ಪೇ ಮೂಲಕ ಹಣ ಕಳುಹಿಸಿದ್ದರು. ಆದರೆ ಕರೆ ಮಾಡಿದಾಗ ಮೊಬೈಲ್ ನಂಬರ್ ಹ್ಯಾಕ್ ಆಗಿರುವುದು ತಿಳಿದುಬಂದಿದೆ.

## ಹಳಪೇಟೆ ರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನ ವೈಭವ ದೈವಾಂಶ ಸಂಭೂತರಾದ ಶ್ರೀ ರಾಘವೇಂದ್ರ ಸ್ವಾಮಿಗಳು:





ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ನಂಬಿದವರ ಭಾವ ಭಕುತಿಗೆ ತಕ್ಕಂತೆ ಸರ್ವ ಇಷ್ಟಾರ್ಥಗಳನ್ನು ಕಲ್ಪಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳು ವಿಶ್ವವಂದ್ಯರಾಗಿದ್ದಾರೆ, ಅದಕ್ಕಾಗಿ ಶ್ರೀ ರಾಘವೇಂದ್ರ ಗುರುವೇ ನಮೋತ್ಯಂತ ದಯಾಳುವೆ ಎಂದು ಹೇಳಿದ್ದಾರೆ ಎಂದು ಶಿಕ್ಷಕರು, ಧರ್ಮನಿಷ್ಠರಾದ ಗೌತಮ ಕುಲ್ಕರ್ಣಿ ಚಾಮನಾಳ ತಿಳಿಸಿದರು.

ನಗರದ ಹಳಪೇಟೆಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಸನ್ನಿಧಾನದಲ್ಲಿ, ಪೂರ್ವಾರಾಧನೆ ನಿಮಿತ್ಯ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಸವಿಸ್ತಾರವಾಗಿ ರಾಯರ ಮಹಿಮೆ ಬಗ್ಗೆ ತಿಳಿಸಿದ ಅವರು, ರಾಯರು ಬೃಂದಾವನದಲ್ಲಿ ಐಕ್ಯರಾಗಿ 354 ವರ್ಷಗಳು ಉರುಳಿದರೂ, ಇಂದಿಗೂ ಬೃಂದಾವನದಲ್ಲಿ ನೆಲೆಸಿದ್ದಾರೆ ಎಂಬುದು ಭಕ್ತರ ನಂಬಿಕೆಯಾಗಿದೆ, ರಾಯರನ್ನು ಭಜಿಸಿದವರಿಗೆ ಸುಖ, ಶಾಂತಿ, ನೆಮ್ಮದಿ, ತೃಪ್ತಿಯಿದೆ. ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಭಕ್ತರ ಒಳಿತಿಗಾಗಿ ಸಾಕಷ್ಟು ಪವಾಡಗಳನ್ನು ಮಾಡಿದ್ದು, ಅವರನ್ನು ಭಕ್ತಪ್ರಲ್ಹಾದನ ಪುನರ್ಜನ್ಮ ಎಂದು ಪರಿಗಣಿಸಲಾಗಿದೆ, ಶ್ರೀ ಗುರುಸಾರ್ವಭೌಮರನ್ನು ಭಜಿಸಿದವರಿಗೆ ಸಕಲ ಸೌಭಾಗ್ಯ ನಿಶ್ಚಿತವೆಂದರು.

ಪೂರ್ವಾರಾಧನಾ ನಿಮಿತ್ಯ ಬೆಳಗ್ಗೆ ವಿಶೇಷ ಪೂಜೆ, ವಿಷ್ಣುಸಹಸ್ರನಾಮ ಪಾರಾಯಣ, ಮಹಾನೈವಿದ್ಯ ಮಂಗಳಾರತಿ, ತೀರ್ಥಪ್ರಸಾದ ಕಾರ್ಯಕ್ರಮ ಜರುಗಿತು. ಇದೇ ಸಂದರ್ಭದಲ್ಲಿ ಶ್ರೀ ರಾಘವೇಂದ್ರರಾವ ಕುಲ್ಕರ್ಣಿ ಶಾರದಳ್ಳಿ ದಂಪತಿಗಳಿಗೆ ಸನ್ಮಾನಿಸಲಾಯಿತು. ಅರ್ಚಕ ನರಸಿಂಹಾಚಾರ್ಯ ರೊಟ್ಟಿ, ವಿಠ್ಠಲಾಚಾರ್ಯ ಪ್ರತಿನಿಧಿ, ಶ್ರೀಪಾದಭಟ್ ಜೋಶಿ ಸನ್ನತಿ, ಅಧ್ಯಕ್ಷ ತಿರುಮಲಾಚಾರ್ಯ ಭಕ್ರಿ, ರವೀಂದ್ರ ದೇಶಪಾಂಡೆ, ಗುಂಡೇರಾವ ದೇಶಪಾಂಡೆ, ಸತ್ಯನಾರಾಯಣ ದೇಸಾಯಿ, ಶ್ರೀನಿವಾಸಾಚಾರ್ಯ ಸಗರ, ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ಪುನೀತರಾದರು, ಶ್ರೀ ಗುರುರಾಜ ಸೇವಾಸಂಘ ಭಕ್ತರ ಸಹಕಾರದಿಂದ ಸಕಲ ವ್ಯವಸ್ಥೆಯನ್ನು ಕಲ್ಪಿಸಿದ್ದರು.

## ನಿಸರ್ಗದಲ್ಲಿ ಮಡಿಲಲ್ಲಿ ಸಿದ್ಧಲಿಂಗ ಶ್ರೀಗಳ ಮೌನಾನುಷ್ಠಾನ

ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ: ಸಮೀಪದ ಗುರುಮಠಕಲ್ ತಾಲೂಕಿನ ಚಿಂತಹಳ್ಳಿ ಗ್ರಾಮದ ಗವಿ ಸಿದ್ಧಲಿಂಗೇಶ್ವರ ಸನ್ನಿಧಾನದಲ್ಲಿ ಶ್ರಾವಣ ಮಾಸದ ಪುಣ್ಯಕಾಲದಲ್ಲಿ ನೇರಡಗಂ ಶ್ರೀಮಠದ ಶ್ರೀ ಪಂಚಮ ಸಿದ್ಧಲಿಂಗ ಮಹಾಸ್ವಾಮಿಗಳು ಲೋಕ ಕಲ್ಯಾಣ ಮತ್ತು ಶಿವಯೋಗ ಸಾಧನೆಗಾಗಿ 21 ದಿನಗಳ ಮೌನಾನುಷ್ಠಾನ ಮಾಡುತ್ತಿದ್ದಾರೆ. ಕಳೆದ ಜು-27ರಂದು ಮೌನಾನುಷ್ಠಾನ ಪ್ರಾರಂಭಿಸಿರುವ ಶ್ರೀಗಳು ಆ-15ಕ್ಕೆ ಸಮಾರೋಪಗೊಳಿಸಲಿದ್ದಾರೆ ಎಂದು ಭಕ್ತವೃಂದ ತಿಳಿಸಿದೆ.

ಲೋಕ ಕಲ್ಯಾಣ ಮತ್ತು ಶಿವಯೋಗ ಸಾಧನೆಗಾಗಿ ವ್ರತ ಮಾಡುತ್ತಿರುವ ಶ್ರೀಗಳು ದಿನದ ಬಹುಪಾಲು ಸಮಯವನ್ನು ಧ್ಯಾನ ಮತ್ತು ಶಿವಲಿಂಗ ಪೂಜೆಗೆ ಸೀಮಿತಗೊಳಿಸಿದ್ದಾರೆ. ಪ್ರತಿನಿತ್ಯ ಕೇವಲ ಒಂದೆರಡು ಗಂಟೆಗಳ ಮಾತ್ರ ಭಕ್ತರಿಗೆ ದರ್ಶನ ನೀಡುತ್ತಿದ್ದಾರೆ. ನೆರೆಯ ತೆಲಂಗಾಣ ಮತ್ತು ಕರ್ನಾಟಕ ರಾಜ್ಯದ ವಿವಿಧ ಭಾಗಗಳಿಂದ ಬರುವ ಭಕ್ತ ಸಮೂಹ ಶ್ರೀಗಳ ಪಾದುಕೆಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಿದ್ದಾರೆ.



ಮೌನವ್ರತದಲ್ಲಿರುವ ಸಿದ್ಧಲಿಂಗ ಶ್ರೀಗಳು ಪರಿಸರ ಕಾಳಜಿ ವಹಿಸಿರುವ ಶ್ರೀಗಳು ಚಿಂತನಹಳ್ಳಿಯ ಗುಡ್ಡದಲ್ಲಿ ವನ ನಿರ್ಮಾಣ ಮಾಡುತ್ತಿದ್ದಾರೆ.

ಈ ಹಿಂದೆ 2022ರ ಶ್ರಾವಣ ಮಾಸದಲ್ಲಿ ನೇರಡಗಂ ಶ್ರೀಮಠದ ಶಾಖಾ ಮಠಗಳಲ್ಲಿ ಒಂದಾದ ಗುರ್ಜಾಲದಲ್ಲಿ 21 ದಿನಗಳ ಮೌನಾನುಷ್ಠಾನ ಮಾಡಿದ್ದರು. ಶ್ರೀಗಳ ಅನುಷ್ಠಾನದ ಸಂದರ್ಭ ಮಳೆಗಾಲವಾದ ಹಿನ್ನಲೆಯಲ್ಲಿ ಕೃಷ್ಣಾನದಿ ಮೈದುಂಬಿ ಹರಿದು ಪ್ರವಾಹ ಭೀತಿ ಶುರುವಾಗಿತ್ತು. ಆದರೆ ನದಿ ತಟದ ಮಠದಲ್ಲಿ ಅನುಷ್ಠಾನ ಕುಳಿತಿದ್ದ ಪೂಜ್ಯರು, ದೇವರ ಅನುಗ್ರಹ ನಮ್ಮನ್ನು ಕಾಪಾಡುತ್ತದೆ ಎಂಬ ನಂಬಿಕೆಯಿಂದ ರಾತ್ರಿ ಹಗಲು ಅಲ್ಲಿಯೇ ಇದ್ದರೂ ನದಿ ನೀರು ಮಠದ ಸುತ್ತೆಲ್ಲಾ ಆವರಿಸುದ್ದರೂ ಒಳಗಡೆ ನುಸುಳಲಿಲ್ಲ ಅದು ಮಹಾತ್ಮರ ಶಕ್ತಿ ಎಂದು ಭಕ್ತರೊಬ್ಬರು ಪ್ರತಿಕ್ರಿಯೆ ನೀಡಿದ್ದಾರೆ.

## ಶರಣ ಉದ್ಯಾನದಲ್ಲಿ ಶರಣ ಸಂಗಮ ಹಾಗೂ ಶರಣ ನೂಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮ




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ಭಕ್ತನಾದವನ್ನು ತನವನ್ನು ಕರಗಿಸಿ ಮನವನ್ನು ಬಳಲಿಸಿ ತನ್ನ ಸ್ವಂತ ಕಾಯಕದಿಂದ ಬಂದ ಸಂಪಾದನೆಯಿಂದ ಗುರು-ಲಿಂಗ-ಜಂಗಮಕ್ಕೆ ದಾಸೋಹ ಮಾಡಬೇಕು ಕಾಯಕದಿಂದಲೇ ಜೀವನ್ಮುಕ್ತಿ, ಆತ್ಮೋನ್ನತಿ ಎಂಬುದು ಚಂದಯ್ಯನವರ ವಚನಗಳಿಂದ ತಿಳಿದು ಬರುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷರಾದ ಪೂಜ್ಯ ಡಾ. ಗಂಗಾಂಬಿಕಾ ಅಕ್ಕ ನುಡಿದರು.

ಅವರು ನಗರದ ಶರಣ ಉದ್ಯಾನದಲ್ಲಿ ಬಸವ ಸೇವಾ ಪ್ರತಿಷ್ಠಾನದ ವತಿಯಿಂದ ನಡೆದ ಶರಣ ಸಂಗಮ ಹಾಗೂ ನೂಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿಕೊಂಡು ಮಾತನಾಡಿ, ಪ್ರತಿಯೊಬ್ಬ ಜೀವಿಯು ಪರಮಾತ್ಮನ ಅಂಶವಾದ್ದರಿಂದ ಎಲ್ಲರಲ್ಲಿಯೂ ಪರಮಾತ್ಮ ಇದ್ದಾನೆ. ಅದನ್ನೇ ಚೈತನ್ಯ ಘನಲಿಂಗ ಎಂದು ಕರೆಯಲಾಗುತ್ತದೆ. ಅಂತರಂಗ ಮತ್ತು ಬಹಿರಂಗ ಶುದ್ಧವಾಗಿರಬೇಕು. ಪರಮ ಗುರು ನೋಡುವುದು ಅಂತರಂಗ ಅದು ಶುದ್ಧಿಯಾದಗಲೇ ಪರಮಾತ್ಮನ ಸಾಕ್ಷಾತ್ಕಾರವಾಗುವುದು. ಚಂದಯ್ಯನವರ ವಚನಗಳಲ್ಲಿ ಘನಲಿಂಗ ವಿವರಣೆ, ಕಾಯಕ, ದಾಸೋಹ, ನಡೆ-ನುಡಿ, ಗುರು, ಲಿಂಗ, ಜಂಗಮದ ಮಹತ್ವ ಕಾಣಬಹುದಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅನುಭವ ಎಜ್ಯುಕೇಷನ್ ಸಂಸ್ಥೆಯ ಅಧ್ಯಕ್ಷೆ ಲಿಂಗಾರತಿ ನಾವದಗೇರೆ ಮಾತನಾಡಿ, 12ನೇ ಶತಮಾನದಲ್ಲಿ ಶರಣರು ಕೊಟ್ಟ ಮಹತ್ವಪೂರ್ಣ ಕೊಡುಗೆಗಳಲ್ಲಿ ಕಾಯಕವೂ ಒಂದು ಅವರು ಕಾಯಕಕ್ಕೆ ಎಷ್ಟೊಂದು ಮಹತ್ವ ಕೊಟ್ಟಿದ್ದರು ಎನ್ನುವುದಕ್ಕೆ ಆಯ್ದಕ್ಕಿ ಲಕ್ಕಮ್ಮ ಹಾಗೂ ನುಲಿಯ ಚಂದಯ್ಯನವರ ವಚನಗಳು ನಿದರ್ಶನವಾಗಿವೆ. ಚಂದಯ್ಯನವರ ಪ್ರಕಾರ ಸತ್ಯಶುದ್ಧ ಕಾಯಕದಿಂದ ಬಂದದ್ದು ಮಾತ್ರ ಲಿಂಗ-ಜಂಗಮಕ್ಕೆ ಅರ್ಪಿತವಾಗಬೇಕು. ಗುರು, ಲಿಂಗ, ಜಂಗಮವಾದಡೂ ಕಾಯಕ ಮಾಡಬೇಕು ಎಂದು ಹೇಳುವುದರ ಮೂಲಕ ಪೂಜೆಗಿಂತ ಕಾಯಕ ಶ್ರೇಷ್ಠ ಎಂದು ಸಾರಿದ ನೂಲಿಯ ಚಂದಯ್ಯನವರು ಕಾಯಕ, ದಾಸೋಹ, ಸತ್ಯನಿಷ್ಠೆಯ ಮೂಲಕ ಮಾನವ ಕೋಟಿಗೆ ಅರಿವಿನ ಬೆಳಕನ್ನು ನೀಡಿದ್ದಾರೆ ಎಂದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಂ-ಯಾದ ನಿವೃತ್ತ ವ್ಯವಸ್ಥಾಪಕರಾದ ಆನಂದಕುಮಾರ ಬಪ್ಪಣ್ಣ ಉದ್ಘಾಟಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ವ್ಯವಸ್ಥಾಪಕರಾದ ಆರ್, ಎಸ್ ಬಿರಾದರ ಧ್ವಜಾರೋಹಣಗೈದರು. ಕಲ್ಪನಾ ಬೀದೆ ವಚನ ಗಾಯನ ನಡೆಸಿಕೊಟ್ಟರು ಕು. ಸುಷ್ಮಾ ಪವಾಡಶೆಟ್ಟಿ ಹಾಗೂ ಕು. ಶ್ರೇಯಾಂಕಾ ಕುಂಬಾರ ಅವರಿಂದ ನಡೆದ ವಚನ ನೃತ್ಯಗಳು ಗಮನ ಸೆಳೆದವು. ಶಿವಕುಮಾರ ಪಂಚಾಳ ಮತ್ತು ಸಂಗಡಿಗರು ವಚನ ಗಾಯನ ಮಾಡಿದರು. ಕಲ್ಪನಾ ಕರಬಸಪ್ಪ ಬೀದೆ ಭಕ್ತಿ ದಾಸೋಹಗೈದರು. ನಿರ್ಮಲಾ ಕಲ್ಯಾಣಿ ಸ್ವಾಗತಿಸಿದರೆ, ಉಷಾ ಮಿರ್ಚೆ ನಿರೂಪಿಸಿದರು. ಕೆಐಎಡಿಬಿ ಕಾಲೋನಿಯ ನೀಲಮ್ಮನ ಬಳಗದ ಶರಣೆಯರಿಂದ ವಚನ ಪ್ರಾರ್ಥನೆ ನಡೆಯಿತು.

## ಶರಣರ ವಿಚಾರಧಾರೆ ಬದುಕಿಗೆ ದಾರಿದೀಪ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಶರಣರ ವಿಚಾರಧಾರೆ ಬದುಕಿಗೆ ದಾರಿದೀಪವಾಗಿದ್ದು, ನುಲಿಯಾ ಚಂದಯ್ಯನವರ ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕು. ವಚನ ವಿಚಾರಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ್ ಕೋಲಾರ್ ಅವರು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ನುಲಿಯ ಚಂದಯ್ಯ ಜಯಂತ್ಯೋತ್ಸವ ಸಮಿತಿ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ನಡೆದ ನುಲಿಯ ಚಂದಯ್ಯ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನುಡಿದಂತೆ ನಡೆದ ನೂಲಿ ಚಂದಯ್ಯ ಅವರು ಶ್ರೇಷ್ಠ ಕಾಯಕ ಜೀವಿ. ಇವರ ವಚನಗಳಲ್ಲಿ ಸಮ ಸಮಾಜ ನಿರ್ಮಾಣದ ತಾತ್ವಿಕ ಚಿಂತನೆಗಳು ಅಡಗಿವೆ. ಇವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಸಂಕಲ್ಪ ಮಾಡಬೇಕು ಎಂದರು. ಸಮಾಜದ ಜನರು ತಮ್ಮ ಮಕ್ಕಳಿಗೆ ಒಳ್ಳೆಯ ನೀಡುವುದರ ಕಡೆಗೆ ಹೆಚ್ಚು ಗಮನ ವಹಿಸಬೇಕು ಎಂದು ನುಡಿದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಸುಭಾಶ್ಚಂದ್ರ ಕೌಲಗಿ ಮಾತನಾಡಿ, 12ನೇ ಶತಮಾನದ ದಾರ್ಶನಿಕರಾದ ಬಸವಣ್ಣನವರ ಸಮಕಾಲಿನ ಶರಣರಾದ ನುಲಿಯ ಚಂದಯ್ಯ ಅವರು ರಚಿಸಿರುವ ಕಾಯಕ ಮತ್ತು ದಾಸೋಹದಂತಹ ವಚನಗಳಲ್ಲಿ ಸಮ ಸಮಾಜ ನಿರ್ಮಾಣದ ತಾತ್ವಿಕ ಚಿಂತನೆಗಳು ಅಡಗಿವೆ. ತಮ್ಮ ವಚನಗಳ ಮೂಲಕ ಕಾಯಕ ತತ್ವವನ್ನು ಸಾರಿದ ಶ್ರೇಷ್ಠ ವಚನಕಾರ ನುಲಿಯ ಚಂದಯ್ಯ ಕಾಯಕವನ್ನು ಭಾವಶುದ್ಧವಾಗಿ ಹಾಗೂ ಅಂತಃಕರುಣೆಯ ಮೂಲಕ ಮಾಡಬೇಕೆಂಬುದು ಸಾರಿದ್ದಾರೆ ಎಂದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಪಿಎಸ್ಐ ನಾಗಮ್ಮ ಸೇರಿದಂತೆ ಸಮಾಜದ ಮುಖಂಡರು ಇನ್ನಿತರರು ಉಪಸ್ಥಿತರಿದ್ದರು.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:9449732000

## ಇಂದು ಅಹೋರಾತ್ರಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ, ಆ.10: ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆ-ಯರ ಸಂಘದ ನೇತೃತ್ವದಲ್ಲಿ ಆ. 12 ರಿಂದ 3 ದಿನಗಳಂದು ರಾಜ್ಯವ್ಯಾಪಿ ಜಿಲ್ಲಾ ಮಟ್ಟದ ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲಾಗುವದು ಎಂದು ಸಂಘದ ರಾಜ್ಯ ಅಧ್ಯಕ್ಷ ಕೆ. ಸೋಮಶೇಖರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಮಂತ್ರಿಗಳು ಘೋಷಿಸಿದ ರಾಜ್ಯದ ಗೌರವಧನ ಮತ್ತು ಕೇಂದ್ರದ ಭಾಗಶಃ ಪ್ರೋತ್ಸಾಹಧನ ಸೇರಿಸಿ ಮಾಸಿಕ ಕನಿಷ್ಠ ರೂ.10 ಸಾವಿರ ಗ್ಯಾರಂಟಿಯನ್ನು ಈ ಏಪ್ರಿಲ್ ಇಂದ ಅನ್ವಯವಾಗುವಂತೆ ಆದೇಶ ಹೊರಡಿಸಬೇಕು, 2025 ಮಾರ್ಚ್ ರಾಜ್ಯ ಬಜೆಟ್ ನಲ್ಲಿ ಎಲ್ಲಾ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ ರೂ. 1000 ಪ್ರೋ.ತ್ಸಾಹಧನ ಹೆಚ್ಚಳ ಮಾಡಿದಂತೆಯೇ ಎಲ್ಲಾ ಆಶಾ ಕಾರ್ಯಕತೆ-ಯರಿಗೂ ಸಹ ಹೆಚ್ಚಳ ಮಾಡಬೇಕು., ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಆಶಾ ಕಾರ್ಯಕತೆ-ಯರು ಕಾರ್ಯನಿರ್ವಹಿಸುವ ಜನಸಂಖ್ಯೆಯ ಮಿತಿಯನ್ನು ಹೆಚ್ಚಿಸುವುದನ್ನು ಕೈಬಿಡಿ. ಈ ಹೆಸರಲ್ಲಿ ಯಾವುದೇ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯಬಾರದು, ಅವೈಜ್ಞಾನಿಕ ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣಾ ಮೌಲ್ಯಮಾಪನ ಕೈಬಿಡಬೇಕು, ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು,

ನಿವೃತ್ತ ಆಶಾಗಳಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಇಡಿಗಂಟು ನೀಡಬೇಕು, ನಗರ ಆಶಾಗಳಿಗೆ ರೂ.2000 ಗೌರವಧನ ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಅಧ್ಯಕ್ಷರಾದ ಡಿ.ಉಮಾದೇವಿ, ರಾಮಲಿಂಗಪ್ಪ ಬಿ.ಎನ್ ಉಪಸ್ಥಿತರಿದ್ದರು.

## ಸಕಲ ಸಿದ್ಧಿಗಳಿಗೆ ಹೇಳುವ ಜ್ಞಾನ ಮಾಡುವ ಮನಸ್ಸು ಮುಖ್ಯ - ಶ್ರೀ ರಂಭಾಪುರಿ ಜಗದ್ಗುರುಗಳು



ಮಲ್ಲಮ್ಮ ನುಡಿ ವಾರ್ತೆ

ಶ್ರೀರಂಭಾಪುರಿಪೀಠ(ಬಾಳೆಹೊನ್ನೂರು)-ಆಗಸ್ಟ್-11- ವಯಸ್ಸು ಇದ್ದಾಗ ವಿದ್ಯೆ ಶಕ್ತಿಯಿದ್ದಾಗ ಹಣ ಸಂಸ್ಕಾರದಿಂದ ಜ್ಞಾನ ಸಂಪಾದಿಸಿಕೊಂಡು ಬಾಳಬೇಕು. ಹೇಳುವ ಜ್ಞಾನ ಮಾಡುವ ಮನಸ್ಸೊಂದಿದ್ದರೆ ಸಾಕು ಸಕಲ ಕಾರ್ಯಗಳು ಸಿದ್ಧಿಸುತ್ತವೆ ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ಹುಣ್ಣಿಮೆ ಶ್ರಾವಣ ಪುರಾಣ ಪ್ರವಚನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸುಖದ ಸಂಪತ್ತು ಅನುಭವಿಸಬೇಕಾದರೆ ಕಷ್ಟದ ಅರಿವು ತಿಳಿದಿರಬೇಕಾಗುತ್ತದೆ. ಸಂಸ್ಕಾರ ಹೇಳಲು ಸನ್ಯಾಸ ಬೇಕಾಗಿಲ್ಲ. ಅನುಭಾವ ಹೇಳಲು ಪದವಿ ಬೇಕಾಗಿಲ್ಲ. ಸೇವೆ ಮಾಡಲು ಅಧಿಕಾರ ಅಂತಸ್ತು ಬೇಕಾಗಿಲ್ಲ. ಈ ಸುಂದರ ಜಗತ್ತು ದೇವರು ಸೃಷ್ಠಿಸಿದ ಆಟದ ಮೈದಾನವಿದು. ನಿಯತ್ತಿನಿಂದ ಆಟ ಆಡಿದರೆ ಗೆಲುವು ನೀತಿ ಮೀರಿ ನಡೆದರೆ ಸೋಲು ಖಚಿತ ಎಂಬುದನ್ನು ಮರೆಯಬಾರದು. ಜೀವನದಲ್ಲಿ ಆಶೆ ಕಳೆದುಕೊಂಡು ಬದುಕಬಹುದು. ಆದರೆ ಆಸಕ್ತಿ ಕಳೆದುಕೊಂಡು ಬಾಳಲಾಗದೆಂದು ನೀತಿಸಂಹಿತೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಪ್ರತಿಪಾದಿಸಿದ್ದಾರೆ. ದೇಶದಲ್ಲಿ ರಾಜ ಸಮಾಜದಲ್ಲಿ ಗುರು ಪರಿವಾರದಲ್ಲಿ ತಂದೆ ಮನೆಯಲ್ಲಿ ಸ್ತ್ರೀ ಇವರು ಎಂದಿಗೂ ಸಾಧಾರಣ ವ್ಯಕ್ತಿಗಳಲ್ಲ. ಏಕೆಂದರೆ ಅಭಿವೃದ್ಧಿ ಮತ್ತು ವಿನಾಶ ಇವೆರಡೂ ಇವರ ಕೈಯಲ್ಲಿಯೇ ಇರುತ್ತವೆ. ಯಾವ ವಿಶ್ವಾಸ ಹೋದರೂ ಯೋಚಿಸಬೇಕಾಗಿಲ್ಲ. ಆದರೆ ಆತ್ಮ ವಿಶ್ವಾಸ ಕಳೆದುಕೊಳ್ಳಬಾರದು. ದೇಹದ ಅಂದ ಚೆಂದ ಮರೆಯಾದರೂ ಚಿಂತೆಯಿಲ್ಲ. ಆದರೆ ಮನಸ್ಸು ಮಲಿನಗೊಳ್ಳದೇ ಪರಿಶುದ್ಧವಾಗಿರಬೇಕು. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೌಲ್ಯಾಧಾರಿತ ಬದುಕಿನ ಬಂಡಿ ಸುಗಮವಾಗಿ ಗುರಿ ತಲುಪಲು ಕೊಟ್ಟ ಚಿಂತನೆಗಳು ಸಕಲರಿಗೂ ಆಶಾಕಿರಣವಾಗಿವೆ ಎಂದರು.

ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಮಾಡಿದ ನೆಗಳೂರು ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಆಧುನಿಕ ಜಗತ್ತಿನಲ್ಲಿ ಸಾಮಾಜಿಕ ವ್ಯವಸ್ಥೆ ಬಹಳಷ್ಟು ಕಲುಷಿತಗೊಳ್ಳುತ್ತಿದೆ. ಸಂಸ್ಕಾರ ಮತ್ತು ಸಂಸ್ಕೃತಿಯ ಕೊರತೆ ಇದಕ್ಕೆಲ್ಲ ಕಾರಣವೆಂದರೆ ತಪ್ಪಾಗದು. ಕಿತ್ತು ತಂದಿದ್ದು ಹೊತ್ತು ಮುಳುಗುವವರೆಗೆ ಮಾತ್ರ ಇರುತ್ತದೆ. ನಿಯತ್ತಿನಿಂದ ದುಡಿದು ತಿನ್ನುವುದು ಜೀವನದ ಕೊನೆಯವರೆಗೆ ಇರುತ್ತದೆ ಎಂಬುದನ್ನು ಮರೆಯಬಾರದು. ನೀರು ಎರೆದವರಿಗೂ ಕಡಿಯ ಬಂದವರಿಗೂ ಬೇಧ ಎಣಿಸದೇ ಮರ ಹಣ್ಣು ನೆರಳು ನೀಡುತ್ತದೆ. ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡಲಾಗದಿದ್ದರೂ ಚಿಂತೆಯಿಲ್ಲ. ಆದರೆ ಕೆಡಕು ಬಯಸುವ ಬುದ್ಧಿ ಬರಬಾರದು ಎಂದರು. ಇದೇ ಸಂದರ್ಭದಲ್ಲಿ ಬಾಳಿಗೆ ಬೆಳಕು ಕೃತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆ ಮಾಡಿದರು..ಶ್ರಾವಣ ಧರ್ಮ ಸಮಾರಂಭದಲಿ ಹುಡುಗಿ ಹಿರೇಮಠದ ಸೋಮೇಶ್ವರ ಶಿವಾಚಾರ್ಯರು, ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಕುಲಪತಿ ಸಿದ್ಧಲಿಂಗಯ್ಯ ಹಿರೇಮಠ ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಶಿವಯೋಗ ಸಾಧಕರಿಂದ ಭಕ್ತಿ ಗೀತೆ ಜರುಗಿತು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು. ಬಾಳೆಹೊನ್ನೂರು ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯಿಂದ ಆಗಮಿಸಿದ ಸಹೋದರಿಯರು ಜಗದ್ಗುರುಗಳಿಗೆ ರಕ್ಷಾ ಬಂಧನ ಕಟ್ಟಿ ಗೌರವ ಸಲ್ಲಿಸಿದರು.

ಬೆಳಿಗ್ಗೆ ಶ್ರೀ ಪೀಠದ ಎಲ್ಲ ದೈವಗಳಿಗೆ ಹುಣ್ಣಿಮೆ ಅಂಗವಾಗಿ ಪೂಜೆ-ಹೂವಿನ ಅಲಂಕಾರ ಮಾಡಲಾಗಿತ್ತು. ಲೋಕಕಲ್ಯಾಣಕ್ಕಾಗಿ ಶ್ರೀ ರಂಭಾಪುರಿ ಜಗದ್ಗುರುಗಳವರು ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಆಶೀರ್ವದಿಸಿದರು. ಶಿಗ್ಗಾಂವಿ ತಾಲೂಕಿನ ಕಬನೂರ ಗ್ರಾಮಸ್ಥರು ಅನ್ನ ದಾಸೋಹ ನೆರವೇರಿಸಿದರು.

## ನಮ್ಮ ಮೆಟ್ರೋ ವೆಚ್ಚ ರಾಜ್ಯದ್ದೇ ಸಿಂಹಪಾಲು ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಆ.11-ಕೇಂದ್ರ ಮತ್ತು ರಾಜ್ಯ ಸರಕಾರದ ಸಹಯೋಗದಲ್ಲಿ ನಮ್ಮ ಮೆಟ್ರೋ ಯೋಜನೆ ನಿರ್ಮಿಸಲಾಗುತ್ತಿದೆ. 50:50 ಅನುಪಾತದಲ್ಲಿ ವೆಚ್ಚ ಭರಿಸಬೇಕು; ಆದ್ರೇ ರಾಜ್ಯ ಸರಕಾರವೇ ಹೆಚ್ಚು ವೆಚ್ಚ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಐಐಐಟಿ ಆಡಿಟೋರಿಯಂನಲ್ಲಿ ಭಾನುವಾರ ಮಧ್ಯಾಹ್ನ ಏರ್ಪಡಿಸಿದ್ದ ಮೆಟ್ರೋ ಹಂತ-3ರ ಶಂಕುಸ್ಥಾಪನೆ, ಮೆಟ್ರೋ ಹಂತ-02ರ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೆ ಹಳದಿ ಮಾರ್ಗದ ಉದ್ಘಾಟನೆ ಮತ್ತು ಬೆಂಗಳೂರಿನಿಂದ ಬೆಳಗಾವಿ ಸೇರಿ 3 ವಂದೇಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನಮೋಹನ್ ಸಿಂಗ್ ಅವರು 2005ರಲ್ಲಿ ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಮ್ಮ ಮೆಟ್ರೋಗೆ ಚಾಲನೆ ನೀಡಲಾಗಿತ್ತು. ಬೆಂಗಳೂರಿನಲ್ಲಿ 96.10 ಕಿ.ಮೀ ನಮ್ಮ ಮೆಟ್ರೋ ಜಾಲ ಇದೆ. ಇದಕ್ಕೆ 25387 ಕೋಟಿ ರೂ.ಗಳನ್ನು ರಾಜ್ಯ ಸರಕಾರ ಖರ್ಚು ಮಾಡಿದ್ದರೇ ಕೇಂದ್ರ ಸರಕಾರ 7468.86 ಕೋಟಿ ರೂ.ಖರ್ಚು ಮಾಡಿದೆ. ಎರಡು ಸರಕಾರಗಳು ಸಮಾನ ವೆಚ್ಚ ಭರಿಸಬೇಕು ಎಂದಿದ್ದರೂ ಸಹ ನಮ್ಮ ರಾಜ್ಯವೇ ಸಿಂಹಪಾಲು ಭರಿಸುತ್ತಿದೆ ಎಂದರು.

ಇಂದು ಚಾಲನೆ ನೀಡಲಾಗಿರುವ ಹಳದಿ ಮಾರ್ಗವನ್ನು 7160 ಕೋಟಿ ವೆಚ್ಚದಲ್ಲಿ ರೂಪಿಸಲಾಗಿದ್ದು, 19.15ಕೀ.ಮಿ ಹೊಂದಿದೆ. ನಿತ್ಯ 3.50ಲಕ್ಷ ಪ್ರಯಾಣಿಕರು ಇದರಡಿ ಪ್ರಯಾಣಿಸಲಿದ್ದಾರೆ. ಈಗಾಗಲೇ 9ಲಕ್ಷ ಪ್ರಯಾಣಿಕರು ನಿತ್ಯ ಬೆಂಗಳೂರಿನಲ್ಲಿ ಪ್ರಯಾಣಿಸುತ್ತಿದ್ದು, ಹಳದಿ ಮಾರ್ಗದ ಪ್ರಯಾಣಿಕರು ಸೇರಿ 12.50ಲಕ್ಷ ಪ್ರಯಾಣಿಕರು ಇನ್ಮುಂದೆ ನಿತ್ಯ ನಮ್ಮ ಮೆಟ್ರೋದಲ್ಲಿ ಪ್ರಯಾಣಿಸಲಿದ್ದಾರೆ ಎಂದರು.

ಬೆಂಗಳೂರು ನಗರ ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುವ ನಗರಗಳಲ್ಲಿ ಒಂದಾಗಿದ್ದು, ಇಲ್ಲಿ ನಿತ್ಯ ಟ್ರಾಫಿಕ್ ಜಾಸ್ತಿ; ಜನರು ಮೆಟ್ರೋದಲ್ಲಿ ಪ್ರಯಾಣಿಸಲಿ ಎನ್ನುವ ಸದುದ್ದೇಶದಿಂದ ಇದನ್ನು ರೂಪಿಸಲಾಗಿದೆ ಎಂದು ಅವರು ವಿವರಿಸಿದರು.

2030ರ ವೇಳೆಗೆ ಬೆಂಗಳೂರಿನಲ್ಲಿ 220 ಕಿ.ಮೀ ನಮ್ಮ ಮೆಟ್ರೋ ಜಾಲ ವಿಸ್ತರಣೆ: 2030ರ ವೇಳೆಗೆ ಬೆಂಗಳೂರಿನಲ್ಲಿ 220ಕಿ.ಮೀ ನಮ್ಮ ಮೆಟ್ರೋ ಜಾಲ ವಿಸ್ತರಿಸುವ ಗುರಿಯನ್ನು ಹೊಂದಲಾಗಿದೆ. ಅದರಂತೆ ಇಂದು ಮೆಟ್ರೋ-3ನೇ ಹಂತಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಮೆಟ್ರೋ-3ಎ ಮಾರ್ಗದ ಡಿಪಿಎಆರ್ ಸಿದ್ಧಪಡಿಸಿ ಕೇಂದ್ರಕ್ಕೆ ಅನುಮೋದನೆಗೆ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಕೇಂದ್ರ ಸರಕಾರ ವಿಸ್ತೃತ ವರದಿಗೆ ಅನುಮೋದನೆ ನೀಡಿದ ತಕ್ಷಣ ಕಾಮಗಾರಿ ಶುರುವಾಗಲಿದ್ದು, 2030ರ ವೇಳೆಗೆ 30 ಲಕ್ಷ ಪ್ರಯಾಣಿಕರು ಮೆಟ್ರೋದಲ್ಲಿ ಪ್ರಯಾಣಿಸಲಿದ್ದಾರೆ ಎಂದರು.

ಅಭಿವೃದ್ಧಿ ವಿಷಯದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಒತ್ತು ನೀಡಿದಷ್ಟೇ ನಮ್ಮ ಕರ್ನಾಟಕ ರಾಜ್ಯಕ್ಕೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಒತ್ತು ನೀಡಬೇಕು ಎಂದು ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ರೈಲ್ವೆ, ಮಾಹಿತಿ ಮತ್ತು ಪ್ರಸಾರ, ವಿದ್ಯುನ್ಮಾನ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾದ ಅಶ್ವಿನಿ ವೈಷ್ಣವ್, ವಸತಿ ಮತ್ತು ನಗರ ವ್ಯವಹಾರಗಳ ಹಾಗೂ ವಿದ್ಯುತ್ ಸಚಿವ ಮನೋಹರ್ ಲಾಲ್, ಕೇಂದ್ರ ರಾಜ್ಯ ಖಾತೆ ಸಚಿವರಾದ ಸೋಮಣ್ಣ, ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಸಚಿವ ಬೈರತಿ ಸುರೇಶ, ಸಂಸದರಾದ ಡಾ.ಸಿ.ಎನ್.ಮಂಜುನಾಥ, ತೇಜಸ್ವಿ ಸೂರ್ಯ, ವಿಧಾನಸಭಾ ವಿರೋಧಪಕ್ಷದ ನಾಯಕ ಆರ್.ಅಶೋಕ ಮತ್ತಿತರರು ಇದ್ದರು.

## ಕನ್ನಡದ ಕಥಾ ಪ್ರಪಂಚದ ಮಟ್ಟಕ್ಕೆ ನಿಲ್ಲುವಂತಹುದುಕನ್ನಡಕ್ಕೆ ಎಲ್ಲವನ್ನೂ ಕೊಡುವ ಶಕ್ತಿ ಇದೆ: ಸವಿತಾ ನಾಗಭೂಷಣ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಆ.11: ಕನ್ನಡಕ್ಕೆ ಎಲ್ಲವನ್ನೂ ಕೊಡುವ ಶಕ್ತಿ ಇದೆ. ಕನ್ನಡದ ಕಥಾ ಪ್ರಪಂಚದ ಮಟ್ಟಕ್ಕೆ ನಿಲ್ಲುವಂತಹುದು.

ಕುವೆಂಪುಕಾರಂತ,ಅನಂತಮೂರ್ತಿ ಅವರನ್ನು ಓದದೇ ಸಾಹಿತಿ, ಲೇಖಕ ಆಗಲು ಆಗದು, ಕನ್ನಡ ಸಾಹಿತ್ಯವನ್ನು ಓದಿದರೆ ವಿಶ್ವ ಸಾಹಿತ್ಯ ಓದಿದಂತೆ ಆಗಲಿದೆ. ಈ ಕಥಾ ಕಮ್ಮಟದ ಮೂಲಕ ಕತೆಗಾರಿಕೆಯ ಹೊಸ ಪ್ರಪಂಚ ಹೊರ ಹೊಮ್ಮಲಿ ಎಂಬ ಆಶಯವನ್ನು ಕವಿಯತ್ರಿ ಸವಿತಾ ನಾಗಭೂಷಣ ವ್ಯಕ್ತಪಡಿಸಿದರು.

ಅವರು ಇಂದು ನಗರದ ಬಿಪಿಎಸ್ಸಿ ಶಾಲೆಯಲ್ಲಿ ಬೆಂಗಳೂರಿನ ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದೊಂದಿಗೆ ನಗರದ ಲೋಹಿಯಾ ಪ್ರಕಾಶನ ಹಮ್ಮಿಕೊಂಡಿದ್ದ ಡಾ.ರಾಜಶೇಖರ ನೀರಮಾನ್ವಿ ನೆನಪು ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ನವ್ಯಕಥೆಗಳು ವಿಶ್ವದ ಗಮನ ಸೆಳೆದವು,ನೀರಮಾನ್ವಿಯವರ ಕಾಲದ ಕತೆಗಾರರ ಕಥೆಗಳೆಲ್ಲವೂ ವಿಶ್ವವನ್ನು ಪರಿಚಯಿಸುವಂತಹುಗಳೆಂದರು.

ನಾನು ವಿಫಲ ಕತೆಗಾರ್ತಿ, ನನ್ನ ಸಾಹಿತ್ಯದ ಹೆಜ್ಜೆಗೆ ಹಿರಿಯರ ಸಾಹಿತ್ಯವನ್ನು ಓದಿದ್ದು. ನೀರಮಾನ್ವಿ ಅವರ ಹಂಗಿನ ಅರಮನೆ ಓದಿದ್ದೆ. ಕಥೆಯನ್ನು ಓದಿದಾಗ ಪ್ರಶ್ನೆಗಳು ಉದ್ಭವವಾದರೇ ಅದರ ಲೇಖ–ಕರು ಮಹಾನುಭಾವರು ಎಂದು ಭಾವಿಸಬೇಕಾಗುತ್ತದೆ.

ಕನ್ನಡವನ್ನು ಅನುವಾದ ಮಾಡುವುದು ಕಷ್ಟ, ಅನುವಾದದಿಂದ ಭಾಷೆಯ ಸೌಂದರ್ಯ ದೊರೆಯಲು ಸಾಧ್ಯವಿಲ್ಲ ಎಂದ ಅವರು. ನೀರಮಾನ್ವಿಯವರ ಕಥೆಗಳಲ್ಲಿ ಮನುಷ್ಯನ ಪಡಿಪಾಟಲು, ತನ್ನತನ, ಸಮಾಜ ತನ್ನನ್ನು ಕಾಣುವ ರೀತಿ ಮೊದಲಾದ ವಿಷಯಗಳ ಮೂಲಕ ಅವರು

ಆಧ್ಯಾತ್ಮಿಕತೆಯನ್ನು ಬಿಂಬಿಸಿದಂತೆ ಕಾಣುತ್ತದೆ.

ಮಹಿಳೆಯರ ಪ್ರತಿಧ್ವನಿಯೂ ಪ್ರಜ್ವಲಿಸುತ್ತದೆ,ತೀಕ್ಷಣವಾಗಿದೆಂದರು.

ಪ್ರಸ್ತಾವಿಕವಾಗಿ ಮಾತನಾಡಿದ ಲೋಹಿಯಾ ಪ್ರಕಾಶನದ ಸಿ.ಚೆನ್ನಬಸವಣ್ಣ, ಬೆಸಗರಳ್ಳಿ ರಾಮಣ್ಣ, ರಾಜಶೇಖರ ನೀರಮಾನ್ವಿ, ಆದವಾನಿಯ ವೀರಭದ್ರ ಅವರ ಕೃತಿಗಳನ್ನು ನಮ್ಮ ಲೋಹಿಯಾ ಪ್ರಕಾಶನದಿಂದ ಪ್ರಕಟಿಸಿದೆ. ಸಾಹಿತ್ಯವಲಯದ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆಂದು ತಿಳಿಸಿದರು.

ಅಲ್ಲದೆ ನೀರಮಾನ್ವಿ ಅವರ ಬದುಕು ಬರಹ ಕುರಿತು ತಿಳಿಸುತ್ತ ನೀರಮಾನ್ವಿ ಮತ್ತು ನಾನು ಜೋಡಿ ಎತ್ತುಗಳಂತೆ ಬದುಕಿದೆವು, ಅವರು ಬರೆದ ಕಥೆಗಳನ್ನು ಮುದ್ರಣ ಮಾಡಲು ಯಾವ ಪ್ರಕಾಶಕರು ಮುಂದೆ ಬರದಿದ್ದಾಗ. ನಾನೇ ಲೋಹಿಯಾ ಪ್ರಕಾಶನ ಆರಂಭಿಸಿ ಅದರಿಂದ ಅವರ ಮತ್ತು ಪ್ರಕಾಶನದ "ಕರ್ಪೂರದ ಕಾಯ" ಕಥಾ ಸಂಕಲನ ಪ್ರಕಟಗೊಂಡಿತು ಎಂದು ತಿಳಿಸಿದರು.

ಬೆಸಗರಳ್ಳಿ ರಾಮಣ್ಣ ಪ್ರತಿಷ್ಠಾನದ ಹೆಚ್.ಆರ್.ಸುಜಾತ ಅಧ್ಯಕ್ಷತೆವಹಿಸಿದ್ದರು. ವೇದಿಕೆಯಲ್ಲಿ ಸರ್ವಮಂಗಳ ನೀರಮಾನ್ವಿ, ಬಸವರಾಜೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್ ಇದ್ದರು. ದಸ್ತಗೀರ ಸಾಬ್ ದಿನ್ನಿ ಕಾರ್ಯಕ್ರಮ ನಿರೂಪಿಸಿದರು. ಡಾ.ಶಿವಲಿಂಗಪ್ಪ ಹಂದ್ಯಾಳ ವಂದನಾರ್ಪಣೆ ಮಾಡಿದರು.

## ಪಾಳಾ ಗ್ರಾಮದಲ್ಲಿ ಶೌಚಾಲಯ ಕಾಮಗಾರಿ ಹಾಗೂ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಬಸವರಾಜ್ ಮತ್ತಿಮೂಡ್ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪಾಳಾ ಗ್ರಾಮದಲ್ಲಿ ಶಾಸಕರ ಅನುಧಾನದಲ್ಲಿ 15.ಲಕ್ಷ ರೂಪಾಯಿ ವೆಚ್ಚದ ಶೌಚಾಲಯ ಕಾಮಗಾರಿ ಹಾಗೂ 19.ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಗ್ರಾಮೀಣ ಮತಕ್ಷೇತ್ರದ ಶಾಸಕ ಬಸವರಾಜ್ ಮತ್ತಿಮೂಡ್ ಅವರು ಅಡಿಗಲ್ಲು ನೆರವೇರಿಸಿದರು.

ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಭವ್ಯ ಮೆರವಣಿಗೆ ಜರುಗಿತು.

ಬಳಿಕ ಮಾತನಾಡಿದ ಶಾಸಕ ಬಸವರಾಜ ಮತ್ತಿಮೂಡ್ ಅವರು, ಪಾಳಾ ಗ್ರಾಮದಲ್ಲಿ ಅಭಿವೃದ್ಧಿ ನನ್ನ ಜವಾಬ್ದಾರಿಯಾಗಿದ್ದು, ಗ್ರಾಮದ ಜನರ ಪ್ರೀತಿ ಅಭಿಮಾನಕ್ಕೆ ನಾನು ಚಿರ ಋಣಿಯಾಗಿರುವೆ.

ಪಾಳಾ ಗ್ರಾಮ ಇನ್ನಷ್ಟು ಅಭಿವೃದ್ಧಿ ಮಾಡುವ ಜವಾಬ್ದಾರಿ ನನ್ನದು ಎಂದು ಹೇಳಿದರು.

ನಂತರ ಸಮಾರಂಭದ ದಿವ್ಯ ಸಾನಿದ್ಯ ವಹಿಸಿದ್ದ ಪಾಳಾದ ಶ್ರೀ ಗುರುಮೂರ್ತಿ ಶಿವಾಚಾರ್ಯರು ಮಾತನಾಡಿ, ಶಾಸಕ ಬಸವರಾಜ್ ಮತ್ತಿಮೂಡ್ ಅವರು ಅಭಿವೃದ್ಧಿ ಪರ ಶಾಸಕರಾಗಿದ್ದು, ಅವರು ಮಾಡಿದ ಅಭಿವೃದ್ಧಿ ಎಲ್ಲರ ಕಣ್ಣ ಮುಂದೆ ಇದೆ. ಏಳು ವರ್ಷದಲ್ಲಿ ಅವರು ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ನಮ್ಮ ಮಠಕ್ಕೂ ಅನುಧಾನ ನೀಡಿದ್ದಾರೆ ಎಂದರು.

ಸಮಾರಂಭದಲ್ಲಿ ಬೀರಲಿಂಗ ಅಪ್ಪಾಜಿ, ಗಂಗಪ್ಪಗೌಡ ಪಾಟೀಲ್, ವಿನೋದ ಪಾಟೀಲ್, ಲಿಂಗರಾಜ್ ಹಂಗರಗಿ, ಬಸವಣ್ಣಗೌಡ ಮಾಲಿಪಾಟೀಲ್, ಭೀಮಾಶಂಕರ್ ಸುಬೇದಾರ್, ಈರಣ್ಣಾ ಹಡಪದ ಸಣ್ಣೂರ, ದತ್ತು ಜಾಧವ್, ಚಂದ್ರಶೇಖರ ಪೂಜಾರಿ, ಪರಮೇಶ್ವರ ದಂಡಿನಕರ್, ಶಿವಪುತ್ರಗೌಡ ಪಾಟೀಲ, ಶಿವಮೂರ್ತಿ ಮೇಲಿಕೇರಿ, ಗೌತಮ, ಸಿದ್ದಗೌಡ ಪೋಲಿಸ್ ಪಾಟೀಲ, ಶಿವು ಗುತ್ತೇದಾರ, ಮಲ್ಲಿಕಾರ್ಜುನ ಕೀಳ್ಳಿ, ಮಾಣಿಕ ಜಾಧವ, ನಾಗರಾಜ ಕಲ್ಲಾ, ಬಾಪುಗೌಡ ಮಾಲಿ ಪಾಟೀಲ, ಮಲ್ಲಣ್ಣ ಸೌಕಾರ, ಮೋಹನ ರೆಡ್ಡಿ, ಅಶೋಕ ಬಬಲಾದ ಸೇರಿದಂತೆ ಗ್ರಾಮದಲ್ಲಿ ಅನೇಕ ಮುಖಂಡರು ಭಾಗವಹಿಸಿದ್ದರು.

## ಗೋಮುಖ ರಾಯರ ಮಠದಲ್ಲಿ ಅದ್ದೂರಿಯಾಗಿ ಜರುಗಿದ ನೂತನ ಉಪಾಕರ್ಮ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನಗರದ ಜಗತ್ ಬಡಾವಣೆಯ ಗೋಮುಖ ರಾಯರ ಮಠದಲ್ಲಿ ಅದ್ದೂರಿಯಾಗಿ ನೂತನ ಉಪಾಕರ್ಮವನ್ನು ವಿದ್ವಾನ್ ವಲ್ಲಭಾಚಾರ ಮತ್ತು ನಾರಾಯಣಾಚಾರ ಜೋಷಿ ಇವರ ನೇತೃತ್ವದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಗುರುರಾಜ ಸೇವಾ ಸಮಿತಿಯ ಅಧ್ಯಕ್ಷ ಗೋಟೂರ ಹಣಮಂತರಾವ ಕುಲಕರ್ಣಿ, ಪವನ ಕುಲಕರ್ಣಿ, ಪವನ ಫಿರೋಜಾಬಾದ, ನೀಲಲೋಹಿತ ಜೇವರ್ಗಿ, ಅನೀಲ ಬಡದಾಳ, ಶಶಿಕಾಂತ ಸಾಗನೂರ, ವಿನೋದ ದೇಸಾಯಿ, ನರಹರಿ ಪಾಟೀಲ, ರಾಜೇಶ ಹನುಮಸಾಗರ, ಪ್ರಮೋದ ದೇಸಾಯಿ, ಉಲ್ಲಾಸ ಕುಲಕರ್ಣಿ, ಹಣಮಂತರಾವ ಜೇವರ್ಗಿ, ಉದಯ ಪಾಟೀಲ, ರಾಜು ದೇಶಮುಖ ಸೇರಿದಂತೆ ಅತ್ಯಧಿಕ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ನೂತನ ಜನಿವಾರ ಧಾರಣೆ ಮಾಡಿದರು.

## ಹಾಸಿಗೆ ಹಿಡಿದವರಿಗೆ ಮನೆ ಬಾಗಿಲಿಗೆ ಬಂದು ಆಧಾರ್ ನೋಂದಣಿ

ಕಲಬುರಗಿ,ಆ.11–ಜಿಲ್ಲೆಯಾದ್ಯಂತ ಆರೋಗ್ಯ ಸರಿಇಲ್ಲದೆ ಹಾಸಿಗೆ ಹಿಡಿದ (Bedridden) ನಿವಾಸಿಗಳಿಗೆ ವಿಶೇಷ ಆಧಾರ್ ನೋಂದಣಿ ಮತ್ತು ತಿದ್ದುಪಡಿಯನ್ನು ಮನೆ ಬಾಗಿಲಿಗೆ ಬಂದು ಆಧಾರ್ ನೋಂದಣಿ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಬಿ.ಫೌ–ಜಿಯಾ ತರನ್ನುಮ್ ತಿಳಿಸಿದ್ದಾರೆ.

ಹಾಸಿಗೆ ಹಿಡಿದ ನಿವಾಸಿಗಳು ಅಥವಾ ಅವರ ಪೋಷಕರು ದೂರವಾಣಿ ಸಂಖ್ಯೆ 08472–278605 ಮತ್ತು 9482564797ಗೆ ಕರೆ ಮಾಡಿ ನೋಂದಣಿ ಸೌಲಭ್ಯ ಪಡೆಯಬಹುದಾಗಿದೆ.

## ಕಾಯಕ ದಾಸೋಹಿ ನುಲಿಯ ಚಂದಯ್ಯ: ಮುಂಡ್ರಿಗಿ ನಾಗರಾಜ್




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಆ.11: ಅನುಭವ ಮಂಟಪದಲ್ಲಿ ವಚನಕಾರರಾಗಿದ್ದ ನುಲಿಯ ಚಂದಯ್ಯ ಅವರು ಕಾಯಕ ದಾಸೋಹಿಗಳಾಗಿದ್ದರು ಎಂದು ಡಾ.ಬಾಬುಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಿಗಿ ನಾಗರಾಜ್ ಹೇಳಿದರು.

ಅವರು ನಿನ್ನೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದ ವಚನಕಾರರ ಕಾಲದ ಕಾಯಕಜೀವಿಗಳು ಯಾವ ಸಮುದಾಯವೂ ನಮ್ಮವರೆಂದು ಗುರುತಿಸಿಕೊಳ್ಳಲಾಗದ ರೀತಿಯಲ್ಲಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ ಅದರಲ್ಲಿ ನುಲಿಯ ಚಂದಯ್ಯ ಒಬ್ಬರು ಎಂದು ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಉಪನ್ಯಾಸಕ ಡಾ.ಗಂಗಾಧರ.ಎಲ್,ಉಪನ್ಯಾಸದಲ್ಲಿ ನುಲಿಯ ಚಂದಯ್ಯನವರು ಸುಮಾರು ಕ್ರಿ.ಶ.1,130 ರಲ್ಲಿ ವಿಜಯಪುರ ಜಿಲ್ಲೆಯ ಶಿವಣಿಗೆ ಗ್ರಾಮದಲ್ಲಿ ಜನಿಸಿದರು. ನಂತರ ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣಕ್ಕೆ ಬಂದರು. ಕಲ್ಯಾಣದ ಕೆರೆಗಳಲ್ಲಿ ಸಿಗುವ ಹೊಡಕೆ, ಚೇಣಿ ಮುಂತಾದ ನಾರುಗಳಿಂದ ಹಗ್ಗ ಹೊಸೆದು ಮಾರಾಟ ಮಾಡಿ ಬಂದ ಹಣದಿಂದ ಜಂಗಮ ದಾಸೋಹ ನಡೆಸುತ್ತಿದ್ದರು. ಈ ರೀತಿ ನುಲಿಯ ಕಾಯಕದಿಂದಾಗಿ ಮುಂದೆ ನುಲಿಯ ಚಂದಯ್ಯನೆಂದು ಹೆಸರಾದರು ಕಲ್ಯಾಣದಲ್ಲಿ 1160ರ ವೇಳೆಯಲ್ಲಿ ನಡೆಯುತ್ತಿದ್ದ ಅನುಭವ ಗೋಷ್ಠಿಗಳಲ್ಲಿ ಇವರು ಚಂದೇಶ್ವರ ಲಿಂಗ ಎಂಬ ಅಂಕಿತನಾಮದಲ್ಲಿ ಸುಮಾರು 48 ವಚನ ರಚಿಸಿದ್ದಾರೆ ಎಂದರು.

ಕೊರವ ಸಮಾಜದ ಜಿಲ್ಲಾಧ್ಯಕ್ಷ ಶ್ರೀರಾಮುಲು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್,ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಚಿದಾನಂದಪ್ಪ ಮೊದಲಾದವರು ಇದ್ದರು.

## ಉತ್ತಮ ನಡೆ,ನುಡಿ ಜೀವನದ ಸನ್ಮಾರ್ಗಕ್ಕೆ ದಾರಿ – ಪ್ರಶಾಂತಸಾಗರ ಸ್ವಾಮೀಜಿ.




ಮಲ್ಲಮ್ಮ ನುಡಿ ವಾರ್ತೆ

ಕೂಡ್ಲಿಗಿ – ನಮ್ಮಗಳ ನಡೆ ನುಡಿ ಉತ್ತಮವಾಗಿದ್ದರೆ ಜೀವನದ ಸನ್ಮಾರ್ಗದ ಹಾದಿಯಲ್ಲಿ ಸಾಗುತ್ತೇವೆ ವಿದ್ಯಾರ್ಥಿಗಳು ಇದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೂಡ್ಲಿಗಿ ಹಿರೇಮಠ ಸಂಸ್ಥಾನದ ಪ್ರಶಾಂತಸಾಗರ ಶಿವಾಚಾರ್ಯ ಸ್ವಾಮಿಗಳು ತಿಳಿಸಿದರು.

ಅವರು ಶುಕ್ರವಾರ ಪಟ್ಟಣದ ಹಿರೇಮಠ ವಿದ್ಯಾಪೀಠ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಾ ಮಾತುಗಳು ಮತ್ತೊಬ್ಬರಿಗೆ ನೋವನ್ನುಂಟು ಮಾಡಬಾರದು, ಮಾತಿನಲ್ಲಿ ಸತ್ವ ಇರಬೇಕು, ಪಾರದರ್ಶಕತ್ವವನ್ನು ಹೊಂದಿರಬೇಕು, ಮಾರ್ಗದರ್ಶಿಯಾಗಿರಬೇಕು. ಅದೇ ರೀತಿಯಲ್ಲಿಯೇ ನಡೆಯಲ್ಲೂ ಇರಬೇಕು. ವಿದ್ಯಾರ್ಥಿಗಳು ಇವುಗಳನ್ನು ಅಳವಡಿಸಿಕೊಂಡಲ್ಲಿ ಅವರ ಭವಿಷ್ಯ ಉಜ್ವಲವಾಗಿರುತ್ತದೆ ಎಂದರು.

ಸರ್ಕಾರಿ ಸಾರ್ವಜನಿಕ ಅಸ್ಪತ್ರೆಯ ವೈದ್ಯಾಧಿಕಾರಿ ಡಾ.ಎಚ್.ಎಂ.ಸುಮಂಗಳ "ಸಾಮಾನ್ಯವಾಗಿ ಹೆಣ್ಣುಮಕ್ಕಳಲ್ಲಿ ನಿಶ್ಯಕ್ತಿ ಹೆಚ್ಚು. ಶಾಲಾ ಕಾಲೇಜಿಗೆ ಬರುವ ವಿದ್ಯಾರ್ಥಿನಿಯರು ಪೋಶಕಾಂಶ ಇರದ ತಿನಿಸುಗಳನ್ನು ತಿನ್ನುವುದರಿಂದ ಅವರಲ್ಲಿ ಆರೋಗ್ಯದ ಸಮಸ್ಯೆಗಳು ಹೆಚ್ಚು ಕಾಣಿಸಿಕೊಳ್ಳುತ್ತವೆ. ಹೆಣ್ಣುಮಕ್ಕಳು ಆಹಾರವನ್ನು ಹೇಗೆ, ಯಾವುದು, ಎಷ್ಟನ್ನು ಸೇವಿಸಬೇಕು ಎಂಬುದನ್ನು ತಿಳಿದಿರಬೇಕು "ಎಂದು ಹೇಳುತ್ತಾ ಪೋಶಕಾಂಶಯುಕ್ತ ಆಹಾರದ ಬಗೆಗಳನ್ನು ವಿವರಿಸಿದರು.

ವೇದಿಕೆಯಲ್ಲಿ ಪ್ರೌಢಶಾಲಾ ವಿಭಾಗದ ಮುಖ್ಯಗುರುಗಳಾದ ಕೆ.ಎಸ್.ವೀರೇಶ್, ಆರೋಗ್ಯ ಇಲಾಖೆಯ ಐಸಿಟಿಸಿಯ ಸಂಯೋಜಕ ಪ್ರಶಾಂತ್, ಓಬಣ್ಣ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಸಿದ್ಧರಾಮ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿನಿಯರಾದ ಜಲಜಾಕ್ಷಿ ಸ್ವಾಗತಿಸಿದರು, ಎ.ಕೆ.ಆಶಾ ವಂದಿಸಿದರು, ತೇಜಸ್ವಿನಿ, ಪೂಜಾ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಸತೀಶ್ ಕಾಟಣ್ಣನವರ್, ವೀರಣ್ಣ, ಶಿವಕುಮಾರ್, ಸುಷ್ಮಿತಾ, ಅನಿತಾ, ಮಂಜುಕರ್ ಮೌಳಿ, ಸತ್ಯಮೂರ್ತಿ, ಬೋಧಕೇತರ ಸಿಬ್ಬಂದಿಯವರಾದ ಕೆ.ಎಚ್.ಎಂ.ವೀರೇಶ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಗೋಮುಖ ರಾಯರ ಮಠದಲ್ಲಿ ಅದ್ದೂರಿಯಾಗಿ ಜರುಗಿದ ನೂತನ

ಕಲಬುರಗಿ: ನಗರದ ಜಗತ್ ಬಡಾವಣೆಯ ಗೋಮುಖ ರಾಯರ ಮಠದಲ್ಲಿ ಅದ್ದೂರಿಯಾಗಿ ನೂತನ ಉಪಾಕರ್ಮವನ್ನು ವಿದ್ವಾನ್ ವಲ್ಲಭಾಚಾರ ಮತ್ತು ನಾರಾಯಣಾಚಾರ ಜೋಷಿ ಇವರ ನೇತೃತ್ವದಲ್ಲಿ ಅದ್ದೂ–ರಿಯಾಗಿ ಆಚರಿಸಲಾಯಿತು.

ಗುರುರಾಜ ಸೇವಾ ಸಮಿತಿಯ ಅಧ್ಯಕ್ಷ ಗೋಟೂರ ಹಣಮಂತರಾವ ಕುಲಕರ್ಣಿ, ಪವನ ಕುಲಕರ್ಣಿ, ಪವನ ಫಿರೋಜಾಬಾದ, ನೀಲಲೋಹಿತ ಜೇವರ್ಗಿ, ಅನೀಲ ಬಡದಾಳ, ಶಶಿಕಾಂತ ಸಾಗನೂರ, ವಿನೋದ ದೇಸಾಯಿ, ನರಹರಿ ಪಾಟೀಲ, ರಾಜೇಶ ಹನುಮಸಾಗರ, ಪ್ರಮೋದ ದೇಸಾಯಿ, ಉಲ್ಲಾಸ ಕುಲಕರ್ಣಿ, ಹಣಮಂತರಾವ ಜೇವರ್ಗಿ, ಉದಯ ಪಾಟೀಲ, ರಾಜು ದೇಶಮುಖ ಸೇರಿದಂತೆ ಅತ್ಯಧಿಕ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ನೂತನ ಜನಿವಾರ ಧಾರಣೆ ಮಾಡಿದರು.

## ಕೃಷ್ಣಪ್ಪನವರಂತೆ ಹೋರಾಟದ ಮನೋಭಾವ ಎಲ್ಲರೂ ಮೈಗೂಡಿಸಿಕೊಳ್ಳಬೇಕು ಸೋಮಶೇಖರ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ದಲಿತರಪರಹೋರಾಡಿ ಸಾಮಾಜಿಕನ್ಯಾಯದೊರಕಿಸಿಕೊಟ್ಟ ಪ್ರೊ.ಬಿ.ಕೃಷ್ಣಪ್ಪ ಅವರ ಹೋರಾಟದ ಮನೋಭಾವವನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಸೋಮಶೇಖರ್ ಕರೆಕೊಟ್ಟರು

ಅವರು ನಿನ್ನೆ ನಗರದ ಕೆ.ಇ.ಬಿ ಫಂಕ್ಷನ್ ಹಾಲ್ ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸ್ವಾಭಿಮಾನಿ ( ಬಿ. ಕೃಷ್ಣಪ್ಪ) ಬಣದಿಂದ ಪ್ರೊ. ಬಿ. ಕೃಷ್ಣಪ್ಪ ರವರ 88ನೇ ಜನ್ಮದಿನಾಚರಣೆ ಅಂಗವಾಗಿ

ಹಮ್ಮಿಕೊಂಡಿದ್ದ ಕಾರ್ಯಕರ್ತರ ರಾಜ್ಯ ಮಟ್ಟದ ಸ್ವಾಭಿಮಾನ ಸಂಘರ್ಷ ಚೈತನ್ಯ ಸಮಾವೇಶದ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಪ್ರೊ.ಬಿ.ಕೃಷ್ಣಪ್ಪ ಅವರು ದಲಿತರ ಸಮುದಾಯಗಳ ಮೇಲೆ ನಡೆಯುತ್ತಿರುವ ಶೋಷಣೆ, ಹಿಂಸೆ ಹಾಗೂ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಿದ್ದರು. ತಮ್ಮ ತನು, ಮನ, ಧನವನ್ನು ಧಾರೆ ಎರೆದು ದಲಿತ ಸಮುದಾಯ ಹಾಗೂ ಶೋಷಣೆಗೆ ಒಳಗಾದ ಎಲ್ಲಾ ಸಮುದಾಯವನ್ನು ಒಗ್ಗೂಡಿಸಿ ಅವರ ಏಳಿಗೆಗೆ ದುಡಿದ ಮಹಾನ್ ವ್ಯಕ್ತಿಯಾಗಿದ್ದರು. ನಾವೆಲ್ಲರೂ ಅವರ ಹೋರಾಟದ ದಾರಿಯಲ್ಲಿ ಸಾಗಬೇಕಾಗಿದೆಂದರು.

ಕಾರ್ಯಕ್ರಮವನ್ನು ರತ್ನಾಕರ ಬಂತಜೀ ಉದ್ಘಾಟಿಸಿದರು. ಡಾ ಬಿ. ಶ್ರೀನಿವಾಸ ಮೂರ್ತಿ, ವಿ. ನಾರಾಯಣಸ್ವಾಮಿ , ಹೆಚ್. ಹನುಮಂತಪ್ಪ, ಭಾಗ್ಯಮ್ಮ ನಾರಾಯಣಸ್ವಾಮಿ, ಅಂದನಿ ಸೋಮನಹಳ್ಳಿ, ಆನೇಕಲ್ಲೂ ಕೃಷ್ಣಪ್ಪ, ಕಬ್ಬಳ್ಳಿ ಮೈಲಪ್ಪ, ಅಂಬೇಡ್ಕರ್ ಸಂಘದ ಜಿಲ್ಲಾ ಅಧ್ಯಕ್ಷರಾದ ಅನಂತಕುಮಾರ್, ಈಶ್ವರಪ್ಪ, ಸತ್ಯಾಬಾಬು, ಹೆಚ್. ವೆಂಕಟೇಶ್, ಎನ್.ಡಿ. ಯಂಕಮ್ಮ, ಆರ್. ಜಾಶ್ವ,

ಜಿಲ್ಲಾ ಸಂಚಾಲಕರಾದ ರಾಮಣ್ಣ ಚೇಳ್ಳಗುರ್ಕಿ ,

ರಾಜ್ಯ ಸಂ ಸಂಚಾಲಕರು, ವಿಭಾಗೀಯ ಸಂಚಾಲಕರು, ಹಾಗೂ ರಾಜ್ಯದ ಜಿಲ್ಲಾ ಸಂಚಾಲಕರು ಭಾಗವಹಿಸಿದ್ದರು.

## ಜೋಳ ಖರೀದಿಯ 78 ಕೋಟಿ ರೂ ಬಾಕಿ ಹಣ ಬಿಡುಗಡೆಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,: ಜಿಲ್ಲೆಯ ರೈತರಿಗೆ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿದ 78 ಕೋಟಿ ರೂ ಹಣವನ್ನು ತಕ್ಷಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕೆಂದು ತುಂಗಭದ್ರ ರೈತ ಸಂಘ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರಲ್ಲಿ ಇಂದು ಮನವಿ ಮಾಡಿದೆ.

ಶಾಸಕರ ಕಚೇರಿಯಲ್ಲಿ ಮನವಿ ಸಲ್ಲಿಸಿದ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ,

ಬೇಸಿಗೆ ಸಮಯದಲ್ಲಿ ಸರ್ಕಾರವು ರೈತರಿಂದ ಬೆಂಬಲ ಬೆಲೆಯಲ್ಲಿ ಜಿಲ್ಲೆಯ 12 ಖರೀದಿ ಕೇಂದ್ರಗಳನ್ನು ತೆಗೆದು ರೂ.3,371 ನಂತೆ ಹೈಬ್ರಿಡ್ ಜೋಳವನ್ನು ಹಾಗೂ ರೂ.3421 ನಂತೆ

ಬಿಳಿಜೋಳವನ್ನು 3739 ರೈತರಿಂದ ಖರೀದಿಸಲಾಗಿದೆ. ಖರೀದಯ ಮೊತ್ತವು 78 ಕೋಟಿ ರೂಪಾಯಿಗಳಾಗಿದ್ದು. ಇದುವರೆಗೂ ಸರ್ಕಾರವು ರೈತರಿಗೆ ಹಣ ಪಾವತಿ ಮಾಡಿಲ್ಲ.

ಈಗಾಗಲೇ ಮುಂಗಾರು ಮಳೆ ಪ್ರಾರಂಭವಾಗಿದೆ. ಮತ್ತು ತುಂಗಭದ್ರ ಜಲಾಶಯದಿಂದ ಕಾಲುವೆಗಳಿಗೆ ನೀರು ಬಿಟ್ಟು ಒಂದು ತಿಂಗಳಾಗಿದೆ. ಇದರಿಂದಾಗಿ ರೈತರಿರು ಬೀಜ, ರಸಗೊಬ್ಬರ ಖರೀದಿಗೆ ಹಣಕಾಸಿನ ತೊಂದರೆಯಾಗಿ ಆರ್ಥಿಕ ಸಂಕಷ್ಟದಲ್ಲಿದ್ದಾರೆ.

ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ತಕ್ಷಣ ಬಳ್ಳಾರಿ ಜಿಲ್ಲೆಯ ಜೋಳ ಮಾರಾಟ ಮಾಡಿರುವ ರೈತರಿಗೆ 78 ಕೋಟಿ ರೂಪಾಯಿಗಳ ಹಣಕಾಸು ಪಾವತಿಸಲು ಕ್ರಮಕ್ಕೆ ಮುಂದಾಗಬೇಕೆಂದು ಮನವಿ ಮಾಡಿದ್ದಾರೆ.



ಕಲಬುರಗಿ : ದಕ್ಷಿಣ ಮತಕ್ಷೇತ್ರದ ಕೋಟನೂರ (ಡಿ)ಗ್ರಾಮದ ದಾಲ್ ಮಿಲ್ ಹತ್ತಿರ ಡಾಂಬರಿಕಾರಣ ರಸ್ತೆಗೆ ಶಾಸಕ ಅಲ್ಲಮಪ್ರಭು ಪಾಟೀಲ್ ರವರು ಚಾಲನೆ ನೀಡಿದರು.ಈ ಸಂಧರ್ಭದಲ್ಲಿ ಕಾಂಗ್ರೆಸ್ ಮುಖಂಡ ದಿನೇಶ ದೊಡ್ಡಮನಿ, ಚಂದ್ರಕಾಂತ ಪೂಜಾರಿ,ನಾನಗೌಡ ಕೂಡಿ,ಪ್ರಶಾಂತ ನಂದಿಕೂರ,ಸುಧಾಕರ್, ಮಾರುತಿ ಕಟಕೆ, ಜಗದೀಶ್ ಮಠ, ಪುರಾಣಿಕ, ಕಲ್ಯಾಣಪ್ಪ ಹಂಗರಗಿ, ಮಾದೇವಪ್ಪ ಜಾಪುರ, ಭೀಮಯ್ಯ ಗುತ್ತೇದಾರ, ಸಂತೋಷ ಕೊಡಗಾನೂರ್, ಪ್ರಶಾಂತ್, ಕಿರಣ್, ಜಿನೇಶ್, ಭೀಮಾಶಂಕರ, ಶ್ರೀ ಲಕ್ಷ್ಮಿ ವೆಂಕಟೇಶ್ ಮಹಿಳಾ ಸಂಘದ ಅಧ್ಯಕ್ಷರು, ಸದಸ್ಯರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಎಮ್ ಎನ್ ದೇಸಾಯಿ ಪದವಿ ಮಹಾವಿದ್ಯಾಲಯ ರಕ್ಷಾ ಬಂಧನ ಕಾರ್ಯಕ್ರಮ

ಕಲಬುರಗಿ: ನಗರದ ಎಮ್ ಎನ್ ದೇಸಾಯಿ ಪದವಿ ಮಹಾವಿದ್ಯಾಲಯ ಕಾಲೇಜಿನಲ್ಲಿ ರಕ್ಷಾ ಬಂಧನ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು. ವಿದ್ಯಾರ್ಥಿನಿಯರು ತಮ್ಮ ತರಗತಿ ವಿದ್ಯಾರ್ಥಿಗಳಿಗೆ ರಾಖಿ ಕಟ್ಟುವ ಮೂಲಕ ಸಹೋದರತ್ವದ ಸಂದೇಶ ಸಾರಿದರು.

ಕಲಬುರಗಿ ನಗರದ ಎಮ್ ಎನ್ ದೇಸಾಯಿ ಪದವಿ ಮಹಾವಿದ್ಯಾಲಯ ಕಾಲೇಜಿನಲ್ಲಿ ರಕ್ಷಾ ಬಂಧನ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು. ಸಮಾರಂಭದಲ್ಲಿ ಭಾಗಿಯಾದ ಹಿರಿಯ ಮಕ್ಕಳ ಸಾಹಿತಿ ಎ ಕೆ ರಾಮೇಶ್ವರ ಹಾಗೂ ಗಣ್ಯರು ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಕಾಲೇಜು ಸಭಾಂಗಣದಲ್ಲಿ ವಿವಿಧ ತರಗತಿ ವಿದ್ಯಾರ್ಥಿನಿಯರು ಯುವಕರಿಗೆ ರಾಖಿ ಕಟ್ಟಿ ಸಿಹಿ ತಿನಿಸುವ ಮೂಲಕ ಸಹೋದರತೆ ಸಂದೇಶವನ್ನು ಸಾರಿದರು. ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಕಾಲೇಜಿನಲ್ಲಿ ಉಪನ್ಯಾಸಕ ಉಪನ್ಯಾಸಕಿಯರು ಭಾಗಿಯಾಗುವ ಮೂಲಕ ಸಂಭ್ರಮ ಹೆಚ್ಚಿಸಿದರು.

ಈ ವೇಳೆ ಮಾತನಾಡಿದ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ರಾಕ್ಷಾ ಬಂಧನ ಎಂದರೆ ಅಣ್ಣ–ತಂಗಿ ಮಡುವಿಗೆ ಬಾಂದವ್ಯ ಬೆಸೆಯುವ ಮಹತ್ವದ ಹಬ್ಬವಾಗಿದೆ. ಎಮ್ ಎನ್ ದೇಸಾಯಿ ಕಾಲೇಜಿನಲ್ಲಿ ಪ್ರತಿ ವರ್ಷ ಈ ರೀತಿ ವಿಷೇಶ ಕಾರ್ಯಕ್ರಮ ಆಯೋಜನೆ ಮಾಡುವುದು ಖುಷಿ ಕೊಟ್ಟಿದೆ ಎಂದರು.

ಅತಿಥಿಗಳು.

ಈ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಬಸವರಾಜ್ ಚಿನಿವಾರ್, ಮಾಲಿನಿ ಸ್ವಾಮಿ, ವಿಶ್ವನಾಥ ಮರತೂರ, ಸಂದೀಪ್ ದೇಸಾಯಿ, ಜಗನ್ನಾಥ ನಾಗೂರ, ರಾಧಿಕಾ ಗುತ್ತೆದಾರ, ಗೀತಾ, ಜ್ಯೋತ್ಯಿ, ಶಿಲ್ಪಾ ಚಟ್ಟಿ, ಗುರುಬಾಯಿ ಸಾವು ವಾಡಿ, ಶ್ರೀದೇವಿ ಹೀರೆಮಠ, ನೀಲಮ್ಮ ಜೀವಣಗಿ, ಅಂಬಿಕಾ, ನಾಗಮ್ಮ, ಶಿವಶರಣಪ್ಪಾ ಪೂಜಾರಿ, ಡಿ.ಪಿ.ಸಜ್ಜನ, ಮಂಜುನಾಥ ಬನ್ನೂರ, ನಾಗರಾಜ ಪಟ್ಟಣಕರ್, ಅಮರ ಹಾಗರಗಿ ಸೇರಿದಂತೆ ಸಿಬ್ಬಂದಿ ವರ್ಗದವರು ಇದ್ದರು. ರೇಷ್ಮಾ ರಾಠೋಡ ನಿರೂಪಿಸಿದರು. ಜಯಶ್ರೀ ಸ್ವಾಗತಿಸಿದರು. ಶಿಲ್ಪಾ ಪಾಟೀಲ ವಂದನಾರ್ಪಣೆ ಮಾಡಿದ್ದರು.

# ಲಿಪಿಕ ನೌಕರರ ಸಂಘಕ್ಕೆ ಇನಾಮದಾರ ಅಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ಶಾಲಾ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ಬಾಗಲಕೋಟೆ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಬಾಗಲಕೋಟೆ ಉಪನಿರ್ದೇಶಕರ ಕಛೇರಿಯ ಅಧೀಕ್ಷಕ ವೆಂಕಟೇಶ ಇನಾಮದಾರ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಲೆಕ್ಕಾಧೀಕ್ಷಕ ಸುರೇಶ ದಡ್ಡಿ ಆಯ್ಕೆಯಾಗಿದ್ದಾರೆ.

ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ವೆಂಕಟೇಶ ಇನಾಮದಾರ ಹಾಗೂ ಸಂಘಟನಾ ಕಾರ್ಯದರ್ಶಿ ಸ್ಥಾನಕ್ಕೆ ಸುರೇಶ ದಡ್ಡಿ ಆಯ್ಕೆಯಾದರು.

ಜಿಲ್ಲಾ ಘಟಕಕ್ಕೆ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಶೈಲ ಹುನ್ನೂರ, ಕೋಶಾಧ್ಯಕ್ಷರಾಗಿ ಚಿದಂಬರ ಎಂ. ಕುಲಕರ್ಣಿ, ಉಪಾಧ್ಯಕ್ಷರಾಗಿ ಶ್ರೀಮತಿ ಸುವರ್ಣಾ ಕೊಳಚಿ, ಸಹಕಾರ್ಯದರ್ಶಿಯಾಗಿ ಅಮೀನಸಾಹೇಬ ಹಳ್ಳೂರ ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಂಘದ ಚುನಾವಣೆ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಜರುಗಿತು.

ಜಿಲ್ಲೆಯ ತಾಲೂಕಾ ಪದಾಧಿಕಾರಿಗಳು ಚುನಾವಣೆಯಲ್ಲಿ ಭಾಗವಹಿಸಿ ಮತದಾನ ಮಾಡಿದರು. ಚುನಾವಣಾಧಿಕಾರಿ ಗಡ್ಡಿ ಆಯ್ಕೆಯಾದವರು ಹೆಸರನ್ನು ಘೋಷಣೆ ಮಾಡಿದರು.

# ಇಂದಿರಾ ಕ್ಯಾಂಟೀನ್ ಬಡವರಿಗೆ ವರದಾನ–ಶಾಸಕ ಮೇಟಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ಇಂದಿರಾ ಕ್ಯಾಂಟೀನು ಬಡವರು, ಕೂಲಿಕಾರ್ಮಿಕರು, ಬಡ ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ತಿಂಡಿ, ಊಟ ನೀಡುವ ಮೂಲಕ ಅವರಿಗೆಲ್ಲ ವರದಾನವಾಗಿದೆ ಎಂದು ಶಾಸಕ ಎಚ್.ವಾಯ್. ಮೇಟಿ ಹೇಳಿದರು.

ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿರುವ ನೂತನ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿದ ಅವರು, ಬಡವರಿಗೆ, ಆರ್ಥಿಕವಾಗಿ ಸಬಲರಲ್ಲದವರಿಗೆ ಇಂದಿರಾ ಕ್ಯಾಂಟೀನ ಸೇವೆ ಬಹಳಷ್ಟು ಆಸರೆಯಾಗಿದೆ ಎಂದರು.

ಕ್ಯಾಂಟಿನಿನಲ್ಲಿ ನೀಡುವ ಆಹಾರ ಗುಣಮಟ್ಟದ್ದಾಗಿರಬೇಕು. ಜೊತೆಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಸಕ ಮೇಟಿ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೊಳೆ ಹುಚ್ಚೇಶ್ವರ ಸ್ವಾಮೀಜಿ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಸವರಾಜ ಕುಂಬಳಾವತಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ಸಂಗಪ್ಪ ಎಂ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷೆ ನೇತ್ರಾವತಿ ನಿಂಬಲಗುಂದಿ, ಮಾಜಿ ಜಿಪಂ ಅಧ್ಯಕ್ಷೆ ಶ್ರೀಮತಿ ಬಾಯಕ್ಕ ಮೇಟಿ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಎಫ್.ಎನ್.ಹುಲ್ಲಿಕೇರಿ, ಸದಸ್ಯರು, ಮುಖಂಡರಾದ ಹೊಳಬಸು ಶೆಟ್ಟರ, ಎಸ್.ಎಸ್.ಮಂಕಣಿ, ನಬಿ ತಹಶೀಲ್ದಾರ, ಮಹಾಂತೇಶ ಅಂಗಡಿ, ಪಿಕೆಪಿಎಸ್ ಅಧ್ಯಕ್ಷ ಸಿದ್ದು ಹೊಸಮನಿ, ಬಸವರಾಜ ಅಂಟ–ರತಾನಿ, ಹುನಗುಂದ ತಹಶೀಲ್ದಾರ ಪ್ರದೀಪ ಹಿರೇಮಠ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

# ವಿಶ್ವ ಬುಡಕಟ್ಟು ದಿನಾಚರಣೆ ಇಂದು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ಜಿಲ್ಲೆಯ ಬೀಳಗಿ ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದಲ್ಲಿ ಸರಕಾರಿ ಪದವಿಪೂರ್ವ ಕಾಲೇಜು ಚಿಕ್ಕಾಲಗುಂಡಿ, ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ಪುನೀತ ಮೆಮೋರಿಯಲ್ ಟ್ರಸ್ಟ್ ಬೀಳಗಿ ಇವರ ಸಂಯುಕ್ತ ಆಶ್ರಯದಲ್ಲಿ 2025–26ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಕಾಲೇಜು ಸಂಸತ್ತು ಉದ್ಘಾಟನೆ, ವಿಶ್ವ ಬುಡಕಟ್ಟು ದಿನಾಚರಣೆ ಹಾಗೂ ಸಾಹಿತಿ ವೀರೇಂದ್ರ ಶೀಲವಂತ ರಚಿತ 'ಹೋರಾಟ–ನಾಲ್ಕು ನಕ್ಷತ್ರಗಳು' ಕೃತಿ ಬಿಡುಗಡೆ ಸಮಾರಂಭ ಆ. 12 ರಂದು ಚಿಕ್ಕಾಲಗುಂಡಿಯಲ್ಲಿ ಮುಂಜಾನೆ 10 ಗಂಟೆಗೆ ಜರುಗಲಿದೆ.

ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಜಿಪಂ ಮಾಜಿ ಅಧ್ಯಕ್ಷ ಎಂ.ಎಲ್.ಕೆಂಪಲಿಂಗಣ್ಣವರ ಸಮಾರಂಭ ಉದ್ಘಾಟಿಸುವರು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಾಬು ಕೆಂಪಲಿಂಗಣ್ಣವರ ಅಧ್ಯಕ್ಷತೆ ವಹಿಸುವರು. ವೀರೇಂದ್ರ ಶೀಲವಂತ ಅವರ 'ಹೋರಾಟ–ನಾಲ್ಕು ನಕ್ಷತ್ರಗಳು' ಕೃತಿಯನ್ನು ಕನ್ನಡ ಜಾನಪದ ಪರಿಷತ್ ರಾಜ್ಯ ಕಾರ್ಯದರ್ಶಿ ಪ್ರೊ.ಕೆ.ಎಸ್.ಕೌಜಲಗಿ ಬಿಡುಗಡೆಗೊಳಿಸಿ, ಕೃತಿ ಪರಿಚಯ ಮಾಡುವರು. ಸಾಹಿತಿ ವೀರೇಂದ್ರ ಶೀಲವಂತ ಬುಡಕಟ್ಟು ಸಂಸ್ಕೃತಿ ಕುರಿತು ಉಪನ್ಯಾಸ ನೀಡುವರು.

# ಎಸ್.ಆರ್.ಪಾಟೀಲರಿಗೆ 'ಬಸವ ಪುರಸ್ಕಾರ' ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ಸಹಕಾರಿ ಧುರೀಣ, ಮಾಜಿ ಸಚಿವ ಎಸ್.ಆರ್.ಪಾಟೀಲ ಅವರಿಗೆ ಬೆಂಗಳೂರಿನ ಬಸವ ಪರಿಷತ್ ನೀಡುವ 'ಬಸವ ಪುರಸ್ಕಾರ–2025' ಪ್ರಶಸ್ತಿಯನ್ನು ಶನಿವಾರ ಬೆಂಗಳೂರಿನಲ್ಲಿ ಪ್ರದಾನ ಮಾಡಲಾಯಿತು. ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣದಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು ಸುತ್ತೂರು ಸಂಸ್ಥಾನ ಮಠದ ಪೂಜ್ಯ ಡಾ.ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ, ಮಾಜಿ ಲೋಕಾಯುಕ್ತ ಸಂತೋಷ ಹೆಗಡೆ ಮತ್ತಿತರ ಪ್ರಮುಖರು ಎಸ್.ಆರ್.ಪಾಟೀಲರಿಗೆ ಪ್ರಶಸ್ತಿ ನೀಡಿದರು. ಶಿಕ್ಷಣ ಹಾಗೂ ಸಹಕಾರ ಕ್ಷೇತ್ರದಿಂದ ಪ್ರತಿಷ್ಠಿತ ಬಸವ ಪುರಸ್ಕಾರ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದ್ದು ಸಂತಸ ತಂದಿದೆ. ಪ್ರಶಸ್ತಿ ನನಗೆ ಇನ್ನಷ್ಟು ಸಮಾಜಮುಖಿ ಕಾರ್ಯಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವುದಕ್ಕೆ ಪ್ರೇರಣೆ ನೀಡಿದೆ ಎಂದು ಎಸ್.ಆರ್.ಪಾಟೀಲ ಹೇಳಿದರು.

# ಸೂಕ್ತ ನಿರ್ಣಯದ ಮೂಲಕ ಪ್ರತಿಭೆ ಆಯ್ಕೆ ಮಾಡಿ–ಎತ್ತಿನಮನಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ವಿದ್ಯಾರ್ಥಿಗಳು ದೈಹಿಕವಾಗಿ ಸದೃಢವಾಗಲು ಕ್ರೀಡೆ ಅತ್ಯವಶ್ಯಕ. ನಿರ್ಣಾಯಕರು ಕ್ರೀಡಾ ನಿಯಮಗಳಿಗೆ ಬದ್ಧರಾಗಿ ಸರಿಯಾದ ನಿರ್ಣಯ ನೀಡುವುದರ ಮೂಲಕ ತಾಲೂಕಿಗೆ ಉತ್ತಮ ಆಟಗಾರರನ್ನು ಆಯ್ಕೆ ಮಾಡಬೇಕೆಂದು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಎ.ಎತ್ತಿನಮನಿ ಹೇಳಿದರು.

ಜಿಲ್ಲೆಯ ಬೀಳಗಿ ತಾಲೂಕಿನ ಕೊಪ್ಪ ಎಸ್.ಕೆ. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಕಾತರಕಿ ಕ್ಲಸ್ಟರ್ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮಸ್ಥರ ಸಹಕಾರದಿಂದ ಕ್ಲಸ್ಟರ್ ಮಟ್ಟದ ಕ್ರೀಡಾಕೂಟ ಆಯೋಜನೆ ಮಾಡಲಾಗಿದೆ. ಕಬಡ್ಡಿ ಆಟಕ್ಕೆ ಮಕ್ಕಳಿಗೆ ತೊಂದರೆ ಆಗಬಾರದೆಂದು ಮ್ಯಾಟ್ ಅಳವಡಿಸುವ ಮೂಲಕ ಗ್ರಾಮಸ್ಥರು ಕ್ರೀಡಾಭಿಮಾನ ಮೆರೆದಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಸಮೂಹ ಸಂಪನ್ಮೂಲ ವ್ಯಕ್ತಿ ವಿ.ಎನ್.ಸಾಲಾಪುರ ಪ್ರಾಸ್ತಾವಿಕವಾಗಿ ಮಾತನಾಡಿ, ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ನಿರ್ಮಿಸಬೇಕಾದರೆ ಕ್ರೀಡೆಯೂ ಸಹ ಅವಿಭಾಜ್ಯ ಅಂಗವಾಗಬೇಕೆಂದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಮಂಜುನಾಥ ಕಣಬೂರ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯ–ಕ್ಷೆ ಪಾರ್ವತಿ ಬಿರೋಜಿ ಕ್ರೀಡಾ ಜ್ಯೋತಿಯನ್ನು ಬೆಳಗಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಮಾರುತಿ ಸಜ್ಜನ ಪ್ರತಿಜ್ಞಾವಿಧಿ ಬೋಧಿಸಿದರು. ಕ್ರೀಡಾಕೂಟ ಆಯೋಜನೆಗೆ ಸಹಾಯ ಸಹಕಾರ ನೀಡಿದ ದಾನಿಗಳಿಗೆ ಸನ್ಮಾನಿಸಲಾಯಿತು.

ಜ್ಯೋತಿ ನರಗುಂದ ಸ್ವಾಗತಿಸಿದರು. ಶಿಕ್ಷಕ ಚಂದ್ರು.ವೈ.ಎ ನಿರೂಪಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ರಾಜೇಂದ್ರ ಕುಂಬಾರ, ಆರ್.ಎ.ಕುಚನೂರ, ಎಸ್.ಎ.ಕಾಜಗಾರ, ದೈಹಿಕ ಶಿಕ್ಷಕ ಸಂಘದ ತಾಲೂಕು ಅಧ್ಯಕ್ಷ ಕೆ.ಆರ್. ಕಂಬಳಿ, ಗ್ರಾಮ ಪಂಚಾಯಿತಿ ಸದಸ್ಯರಾದ ಬಸವರಾಜ ಬೆಳವಲ, ಸದಾಶಿವ ತಳವಾರ, ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಗೌಡರ, ಪ್ರಭಾರಿ ಮುಖ್ಯ ಶಿಕ್ಷಕ ಉಮೇಶ ತಳ್ಳಿಕೇರಿ, ಶಿಕ್ಷಕರಾದ ಸಕ್ಕೂಬಾಯಿ ಬೆಳ್ಳುಬ್ಬಿ, ಸವಿತಾ ಮಾಳೆದ, ಸುವರ್ಣ ಭೂಸರೆಡ್ಡಿ ಮತ್ತಿತರರು ಇದ್ದರು.

# 4.25 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ನಗರದ ಎನ್.ಎಚ್–367ದಿಂದ ಎಸ್‌ಟಿಪಿ ಮತ್ತು ಎಸ್‌ಡಬ್ಲೂಎಂ ಓಲ್ಡ ಎಪಿಎಂಸಿ ಮೂಲಕ ಶೀಗಿಕೇರಿ ಆರ್‌ಓಬಿ ವರೆಗಿನ ಮುಖ್ಯರಸ್ತೆ ಹಾಗೂ ಆಂತರಿಕ ರಸ್ತೆಗಳ ನಿರ್ಮಾಣ ಸೇರಿ ಒಟ್ಟು 4.25 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗೆ ಬಾಗಲಕೋಟೆ ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್. ಮೇಟಿ ರವಿವಾರ ಚಾಲನೆ ನೀಡಿದರು.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಒಟ್ಟು 1.38 ಕಿ.ಮೀ ಉದ್ದದ ಡಾಂಬರ ರಸ್ತೆ ನಿರ್ಮಾಣವಾಗಿದ್ದು, ಇದಕ್ಕೆ ಹೊಂದಿಕೊಂಡು ಬರುವ ಸಣ್ಣ ಪುಟ್ಟ ರಸ್ತೆಗಳು ಇದ್ದು, ಪ್ರತಿಯೊಂದು ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ್, ಸದಸ್ಯ ಚನ್ನವೀರ ಅಂಗಡಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರ್ವಾಹಕ ಅಭಿಯಂತರ ಒಟವಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶ್ರೀಕಾಂತ ಹಿರೇಗೌಡರ, ಶಾಖಾಧಿಕಾರಿ ಎಸ್.ಡಿ.ಸಣ್ಣಕ್ಕಿ, ಮುಖಂಡರಾದ ನಾಗರಾಜ ಹದ್ಲಿ, ಶ್ರೀನಿವಾಸ ಬಳ್ಳಾರಿ, ರಾಜು ಮನ್ನಿಕೇರಿ ಹಾಗೂ ಇತರರು ಉಪಸ್ಥಿತರಿದ್ದರು.

# ಅಗ್ನಿವೀರ್ ಸೇನಾ ಭರ್ತಿ: ನಾಲ್ಕನೇ ದಿನ 764 ಅಭ್ಯರ್ಥಿಗಳು ಭಾಗಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಆಗಸ್ಟ್ 11 ಅಗ್ನಿವೀರ್ ಸೇನಾ ಭರ್ತಿಗೆ ಆಗಸ್ಟ್ 11 ರಂದು ಒಟ್ಟು 764 ಅಭ್ಯರ್ಥಿಗಳು ವರದಿ ಮಾಡಿಕೊಂಡರು.

ಆಗಸ್ಟ್ 11 ರಂದು ಒಟ್ಟು 860 ಅಭ್ಯರ್ಥಿಗಳು ಭಾಗವಹಿಸಬೇಕಿತ್ತು. 860 ಪೈಕಿ 764 ಅಭ್ಯರ್ಥಿಗಳು ಹಾಜರಾಗಿದ್ದು, ಇದರಲ್ಲಿ 484 ಅಭ್ಯರ್ಥಿಗಳು 1600 ಮೀಟರ್ ಓಟದಲ್ಲಿ ಉತ್ತೀರ್ಣರಾಗಿ ಮುಂದಿನ ದೈಹಿಕ ಪರೀಕ್ಷೆ ಆಯ್ಕೆಯಾಗಿದ್ದಾರೆ ಎಂದು ಸೇನಾಧಿಕಾರಿ ಮನೋಜ್ ಅವರು ತಿಳಿಸಿದ್ದಾರೆ.

# ದಿ.ಕಡಪಟ್ಟಿ ಅವರು ನಿಸ್ವಾರ್ಥ ಸೇವೆಯ ಜನಪ್ರತಿನಿಧಿ–ದೋಟಿಹಾಳ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11– ಮಾಜಿ ಶಾಸಕ ಲಿಂ.ಶಿವಸಂಗಪ್ಪ ಕಡಪಟ್ಟಿ ಅವರು ಶಿಸ್ತಿನ ಸಿಪಾಯಿಯಾಗಿ ಅಭಿವೃದ್ಧಿಯ ಗುರಿಯನ್ನು ಇಟ್ಟು–ಕೊಂಡು ನಿಸ್ವಾರ್ಥ ಸೇವೆಯ ಮೂಲಕ ಜನಾನುರಾಗಿಯಾಗಿದ್ದರು ಎಂದು ಹೊಸಪೇಟೆ ತುಂಗಭದ್ರಾ ಕಾಡಾ ಅಧ್ಯಕ್ಷರು, ಮಾಜಿ ಶಾಸಕ ಹಸನಸಾಬ ದೋಟಿಹಾಳ ಹೇಳಿದರು.

ಜಿಲ್ಲೆಯ ಹುನಗುಂದ ನಗರದ ಶ್ರೀ ಮಾತಾ ಉಜ್ಯುಕೇಶನ್ ಮತ್ತು ರೂರಲ್ ಡೆವಪ್‌ಮೆಂಟ್ ಟ್ರಸ್ಟ ಎಸ್.ಎಸ್.ಕಡಪಟ್ಟಿ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಮಾಜಿ ಶಾಸಕ ಲಿಂ.ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ ಅವರ 35ನೇ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಸ್ವಚ್ಛ ರಾಜ–ಕಾರಣ ಮಾಡಿ ಹೆಸರಾಗಿದ್ದ ಕಡಪಟ್ಟಿ, ಸ್ನೇಹ ಜೀವಿಯಾಗಿ, ಎಲ್ಲರನ್ನು ಆತ್ಮೀಯತೆಯಿಂದ ಕಂಡು ತಮ್ಮ ಬಳಿ ಬಂದವರನ್ನು ಉಪಚರಿಸುವ ಅವರ ಗುಣ ಮೆಚ್ಚುವಂತಹದಾಗಿತ್ತು ಎಂದ ದೋಟಿಹಾಳ, ಕುಷ್ಟಗಿಯನ್ನು ತೋಟಗಾರಿಕೆ ಪ್ರದೇಶವೆಂದು ಗುರುತಿಸಿದ ಅವರ ಸಾಧನೆ ಮರೆಯಲಾರದಂತಹದ್ದು ಎಂದರು.

ಲಿಂಗಸ್ಗೂರು ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಮಾತನಾಡಿ, ಒಬ್ಬ ಜನಪ್ರತಿನಿಧಿ ಹೇಗಿರಬೇಕು ಎನ್ನುವುದನ್ನು ಶಿವಸಂಗಪ್ಪ ಕಡಪಟ್ಟಿ ಅವರನ್ನು ನೋಡಿ ಕಲಿಯಬೇಕು. ಕಡಪಟ್ಟಿ ಮತ್ತು ಕಂಠಿ ಅವರು ನಿಸ್ವಾರ್ಥ ಸೇವೆ ಮಾದರಿಯಾಗಿದೆ ಎಂದು ಹೇಳಿದರು.

ಕುಷ್ಟಗಿಯ ಪ್ರಗತಿಪರ ರೈತ ಡಾ.ದೇವೇಂದ್ರಪ್ಪ ಬಳೂಟಗಿ ಸನ್ಮಾನಗೊಂಡು ಮಾತನಾಡಿ, ಕೃಷಿಯಲ್ಲಿ ಸಾಕಷ್ಟು ಅನುಭವ ಹೊಂದಿದ್ದ ಶಿಸಂಗಪ್ಪ ಕಡಪಟ್ಟಿ ಅವರು ಬರಡು ಮತ್ತು ಬಂಜರು ಭೂಮಿಯನ್ನು ಫಲವತ್ತಗೊಳಿಸಿ ಚಿನ್ನದಂತ ಬೆಳೆ ಬೆಳೆದು ಹೆಸರಾದವರು. ಅವರ ಪ್ರೇರಣೆಯೇ ನಾನು 600 ಎಕರೆ ಭೂಮಿಯಲ್ಲಿ ಕೃಷಿಕೈಗೊಳ್ಳಲು ಸಹಕಾರಿಯಾಯಿತು ಎಂದರು.

# 'ನನ್ನ ರೇಷ್ಮೆ ನನ್ನ ಹೆಮ್ಮೆ' ವಿಚಾರ ಸಂಕಿರಣ: ರೇಷ್ಮೆ ಕೃಷಿಯಲ್ಲಿ ತಂತ್ರಜ್ಞಾನ ಬಳಕೆ ಅಗತ್ಯ–ಉಮೇಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ರೇಷ್ಮೆ ಬೆಳೆಯುವ ರೈತರು ನೂತನ ತಂತ್ರಜ್ಞಾನ ಬಳಸಿಕೊಂಡು ಗುಣಮಟ್ಟದ ಹಿಪ್ಪುನೇರಳೆ ಸೊಪ್ಪನ್ನು ಪಡೆದುಕೊಳ್ಳುವ ಮೂಲಕ ಹೆಚ್ಚಿನ ಲಾಭಗಳಿಸುವಂತೆ ಕೊಪ್ಪಳ ಜಿಲ್ಲಾ ಸಂಶೋಧನಾ ವಿಸ್ತರಣಾ ಕೇಂದ್ರದ ರೇಷ್ಮೆ ಮಂಡಳಿಯ ವಿಜ್ಞಾನಿ ಡಾ.ಎ.ಉಮೇಶ ಹೇಳಿದರು.

ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ಲಾಯದಗುಂದಿ ಗ್ರಾಮದಲ್ಲಿ ಗುರುವಾರ ಕೇಂದ್ರ ರೇಷ್ಮೆ ಮಂಡಳಿ ಮತ್ತು ರೇಷ್ಮೆ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಂಡ 'ನನ್ನ ರೇಷ್ಮೆ ನನ್ನ ಹೆಮ್ಮೆ' ರೇಷ್ಮೆ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ 120 ಜಿಲ್ಲೆಗಳಲ್ಲಿ ಅಭಿಯಾನ ಜಾರಿಗೆ ತರಲಾಗಿದೆ. ಸಂಶೋಧನಾ ಸಂಸ್ಥೆಯ ಪ್ರಯೋಗ ಶಾಲೆಯಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ರೈತರ ಜಮೀನುಗಳಿಗೆ ತಲುಪಿಸುವ ಮೂಲಕ ರೇಷ್ಮೆ ಉತ್ಪಾದಕತೆಯನ್ನು ಹೆಚ್ಚಿಸಿ, ರೈತರ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಈ ಅಭಿಯಾನದ ಉದ್ದೇಶವಾಗಿದೆ ಎಂದರು.

ರೇಷ್ಮೆ ಇಲಾಖೆಯ ಉಪನಿರ್ದೇಶಕ ಎಸ್.ಎಂ.ಕೋರೆ ಮಾತನಾಡಿ, ರೇಷ್ಮೆ ಬೆಳೆಗಾರರು ರೇಷ್ಮೆ ಕೃಷಿಯಲ್ಲಿ ನೂತನ ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ಹೆಚ್ಚಿನ ಲಾಭ ಗಳಿಸುವಂತೆ ತಿಳಿಸಿದರು.

ರೇಷ್ಮೆ ಮಂಡಳಿಯ ನಿವೃತ್ತ ನಿರ್ದೇಶಕ ಡಾ. ಬಿ.ಎಸ್.ಅಂಗಡಿ ಮಾತನಾಡಿ, ಈ ಅಭಿಯಾನ ಅಡಿಯಲ್ಲಿ ನೂತನ ತಾಂತ್ರಿಕತೆಯನ್ನು ಬಳಸಿಕೊಂಡು ವ್ಯವಸ್ಥಿತವಾಗಿ ರೇಷ್ಮೆ ಹುಳುವಿನ ಮನೆಯ ಸೋಂಕು ನಿವಾರಣೆ, ಹುಳುಗಳ ಸಾಕಾಣಿಕೆ ಕ್ರಮಗಳನ್ನು ಸರಿಯಾದ ಸಮಯಕ್ಕೆ ಮಾಡಿದ್ದೇ ಆದಲ್ಲಿ ರೈತರು ದ್ವಿತಳಿಯನ್ನು ಬೆಳೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ರೇಷ್ಮೆ ವಿಸ್ತರಣಾಧಿಕಾರಿ ಆರ್.ಬಿ.ವಾಲಿ, ಗ್ರಾಮ ಪಂಚಾಯತಿ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ರೇಷ್ಮೆ ಬೆಳೆಗಾರರು ಮತ್ತಿತರರು ಪಾಲ್ಗೊಂಡಿದ್ದರು.

# ಆ.19 ಬೆಂಗಳೂರಿನಲ್ಲಿ ಪ್ರತಿಭಟನೆ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ಜಾರಿಗೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಆ.11–ಕುರಿಗಾಹಿಗಳ ಹಿತ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿ ಆಗಸ್ಟ್ 19 ರಂದು ಬೆಂಗಳೂರಿನ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ಹೋರಾಟ ಸಮಿತಿ ರಾಜ್ಯ ಸಂಚಾಲಕ ಯಲ್ಲಪ್ಪ ಹೆಗಡೆ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಕುರಿಗಾರರ ಮೇಲೆ ನಿರಂತರವಾಗಿ ದೌರ್ಜನ್ಯ, ಹಲ್ಲೆ, ಜೀವ ಬೆದರಿಕೆ, ಕೊಲೆ, ಅತ್ಯಾಚಾರ, ಕುರಿ ಕಳ್ಳತನ ಪ್ರಕರಣಗಳು ನಡೆಯುತ್ತಿವೆ ಹಾಗೂ ಅರಣ್ಯಾಧಿಕಾರಿಗಳಿಂದ ಲಂಚದ ಬೇಡಿ–ಕೆ ಹೆಚ್ಚುತ್ತಿರುವುದು ಸಹ ಗಂಭೀರ ಸಮಸ್ಯೆಯಾಗಿದೆ ಎಂದು ಹೇಳಿದರು.

ಸರ್ಕಾರ ಮಹಿಳೆಯರು, ಮಕ್ಕಳು, ಶೋಷಿತ ಸಮುದಾಯಗಳು ಹಾಗೂ ವಿವಿಧ ವೃತ್ತಿಪರರ ಹಿತಕ್ಕಾಗಿ ವಿಶೇಷ ಕಾಯ್ದೆಗಳನ್ನು ಜಾರಿಗೊಳಿಸಿರುವಂತೆ ಕುರಿಗಾಹಿಕೆಯ ಮೇಲೆ ಉಪಜೀವನ ನಡೆಸುತ್ತಿರುವ ಸಾಂಪ್ರದಾಯಿಕ ಕುರಿಗಾರರ ಹಿತ ರಕ್ಷಣೆಗೂ ಸಹ ವಿಶೇಷ ಕಾಯ್ದೆ ರೂಪಿಸಿ ಜಾರಿಗೊಳಿಸಬೇಕು ಎಂದು ಹೆಗಡೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಕುರಿಗಾರರು ಭಾಗವಹಿಸಲಿದ್ದು, ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು.

ಹೋರಾಟ ಸಮಿತಿಯ ಜಿಲ್ಲಾ ಅಧ್ಯಕ್ಷ ಸಿದ್ದಪ್ಪ ಬಳಗಾನೂರ ಮಾತನಾಡಿ, ಈ ಬೃಹತ್ ಪ್ರತಿಭಟನೆಯಲ್ಲಿ ರಾಜ್ಯದ ಕುರಿಗಾಯಿಗಳು, ಪ್ರಗತಿಪರ ಚಿಂತಕರು ಸೇರಿದಂತೆ ಅಂ–ದಾಜು 3 ಸಾವಿರ ಜನ ಭಾಗವಹಿಸಲಿದ್ದಾರೆ. ಈಗ ನಡೆಯುತ್ತಿರುವ ಅಧಿವೇಶನದಲ್ಲೇ ಈ ಕಾಯ್ದೆಯನ್ನು ಜಾರಿಗೊಳಿಸುವ ನಿರ್ಣಯ ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪರಶುರಾಮ ಮಂಟೂರ, ಡಿ.ಬಿ.ಸಿದ್ದಾಪುರ, ಶಿವಲಿಂಗ ನಿಂಗನೂರ ಮತ್ತಿತರರು ಇದ್ದರು.

# ಆಧಾರ್ ಸೀಡಿಂಗ್ ಮಾಡಿಸುವಂತೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಆಗಸ್ಟ್ 11– ಇಲ್ಲಿನ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲೆಯ ಎಸ್.ಎಸ್.ಎಲ್.ಸಿ ಪ್ರೋತ್ಸಾಹಧನಕ್ಕಾಗಿ 2020 ರಿಂದ 2025ರವರೆಗೆ ಆಧಾರ್ ಸೀಡಿಂಗ್ ಮಾಡಲು ಬಾಕಿ ಇರುವ ಪರಿಶಿಷ್ಟವರ್ಗದ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಲು ಕ್ರಮವಹಿಸುವಂತೆ ಕೋರಲಾಗಿದೆ.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶೇ.60 ರಿಂದ 74.99 ರವರೆಗೆ 7000 ರೂ.ಗಳು ಮತ್ತು ಶೇ.75 ಕ್ಕಿಂತ ಅಧಿಕ ಫಲಿತಾಂಶಗಳಿಸಿದ ವಿದ್ಯಾರ್ಥಿಗಳಿಗೆ 15,000 ರೂ.ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಅಥವಾ ಪೋಸ್ಟ್ ಖಾತೆಗೆ ಆಧಾರ್ ಸಿಂಡಿಂಗ್ ಮಾಡಿಸಿದ್ದಲ್ಲಿ ನೇರವಾಗಿ ಕೇಂದ್ರ ಕಚೇರಿಯ ಮೂಲಕ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆ ಅಥವಾ ಪೋಸ್ಟ್ ಖಾತೆಗೆ ಡಿ.ಬಿ.ಟಿ. ಮೂಲಕ ನೇರ ವರ್ಗಾವಣೆ ಮಾಡಲಾಗುತ್ತಿದೆ.

2020ರಲ್ಲಿ 245, 2021ರಲ್ಲಿ 578, 2022ರಲ್ಲಿ 496, 2023ರಲ್ಲಿ 722, 2024ರಲ್ಲಿ 333, 2025ರಲ್ಲಿ 1546 ಸೇರಿದಂತೆ ಒಟ್ಟು 3,920 ವಿದ್ಯಾರ್ಥಿಗಳು ಆಧಾರ್ ಜೋಡಣೆ ಮಾಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಎಸ್.ಎಸ್.ಎಲ್.ಸಿ ಪ್ರೋತ್ಸಾಹಧನಕ್ಕಾಗಿ 2020 ರಿಂದ 2025ರವರೆಗೆ ಆಧಾರ್ ಸೀಡಿಂಗ್ ಮಾಡಲು ಬಾಕಿ ಇರುವ ಅರ್ಜಿಗಳಿಗೆ ಸೀಡಿಂಗ್ ಮಾಡಲು ಕ್ರಮವಹಿಸಿ ಈ ಕಚೇರಿಗೆ ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಆಧಾರ್ ಕಾರ್ಡನ ಪ್ರತಿ ಸಲ್ಲಿಸುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



# ಸ್ಮಾರ್ಟ್ ಡೇಟಾ

## ಉತ್ತಮ ಗುರಿ - ನಿಷ್ಪಕ್ಷಪಾತ ಅಭಿವೃದ್ಧಿ!

- ಸಮಗ್ರ ಕುಟುಂಬದ ದತ್ತಾಂಶಗಳನ್ನು ದಾಖಲಿಸಲು 'ಕುಟುಂಬ' ಪೋರ್ಟಲ್ ಜಾರಿ
- ನಿಖರವಾಗಿ ಬಡ ಕುಟುಂಬಗಳನ್ನು ಗುರುತಿಸಿ ಕಲ್ಯಾಣ ಕಾರ್ಯಕ್ರಮಗಳನ್ನು ತಲುಪಿಸುವ ಗುರಿ
- ರಾಷ್ಟ್ರೀಯ ದತ್ತಾಂಶ ವ್ಯವಸ್ಥೆಯೊಂದಿಗೆ ಸುರಕ್ಷಿತ ದತ್ತಾಂಶ ವಿನಿಮಯಕ್ಕೆ ಕೇಂದ್ರ ಸರ್ಕಾರದ ಜೊತೆಗೆ ಕಾರ್ಯನಿರ್ವಹಣೆ
- 2023ರ ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಕಾಯಿದೆ ಅನ್ವಯ ಜೋಡಣೆ
- ದತ್ತಾಂಶ ಆಧಾರಿತ ನಿರ್ಧಾರಗಳ ಮೂಲಕ ವ್ಯಕ್ತಿಯ ಖಾಸಗಿತನ, ಸಮ್ಮತಿ ಮತ್ತು ಸಮರ್ಥ ಆಡಳಿತಕ್ಕೆ ಆದ್ಯತೆ

ಪಾರದರ್ಶಕ ವ್ಯವಸ್ಥೆ

**ವಿಶ್ವಾಸಾರ್ಹ ಆಡಳಿತ!**



ಕರ್ನಾಟಕ ನವ ನಿರ್ಮಾಣಕ್ಕೆ

**ಗ್ಯಾರಂಟಿ ಸರ್ಕಾರ...**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಗಡಿ ತಾಲ್ಲೂಕುಗಳಿಂದ ಪ್ರಕಟವಾಗುವ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು